
# ಅಪರಂಜಿ

ತಿಳಿನಗೆಯ ಕಾರಂಜಿ



ಜುಲೈ - 2013






ಮಾಹಿತಿ ತಂತ್ರಜ್ಞಾನದ ಹೆದ್ದಾರಿಯಲ್ಲಿ ಬೀದಿಗೆ ಬಿದ್ದ ವಾಹನಗಳು

# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 30

ಸಂಚಿಕೆ – 10

ಜುಲೈ – 2013



ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು

ಶ್ರೀ ಎಂ. ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಜಿ. ನಾಗೇಶ್

ಶ್ರೀ ವಿ.ಆರ್. ನಾಥ್

ಶ್ರೀ ಎ.ಆರ್. ರಾಜಗೋಪಾಲ್

ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು

ಶ್ರೀ ಆರ್. ಶೇಷಗಿರಿರಾವ್

ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು

ಶ್ರೀ ಅ.ರಾ.ಸೇ.


**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## ಈ ಸಂಚಿಕೆಯಲ್ಲಿ.....



**ಅಂಚೆ ವಿಶೇಷ**


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಮುಂಬೈಯಲ್ಲೂ ಅದೇ.. | **ಎಚ್. ಶಾಂತರಾಜ ಐತಾಳ್** | 9 |
| ನಾನು ಸತ್ತಾಗ! | **ಎಚ್.ಜಿ. ಸೋಮಶೇಖರ ರಾವ್** | 14 |
| ಅನಂತೂವಿನ ಶ್ವಾನ... | **ಎಚ್.ಆರ್. ಹನುಮಂತ ರಾವ್** | 18 |
| ಮಗನಿಗೆ ನಾಯಿ ಮರಿ... | **ಯಶವಂತ ವಾಜಂತ್ರಿ** | 22 |
| ಬ್ರಾಹ್ಮಿಯೂ ನೆನಪಿನ... | **ಕುಮುದಾ ಪುರುಷೋತ್ತಮ್** | 27 |
| ಟೆಲಿಗ್ರಾಂ ತಂದ... | **ಬೇಲೂರು ರಾಮಮೂರ್ತಿ** | 33 |
| ತುಂತುರು | **ದಂನಾಆ** | 36 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 37 |


**ಮುಖಪುಟ ವ್ಯಂಗ್ಯಚಿತ್ರ – ಇಂಟರ್‌ನೆಟ್‌ನಿಂದ**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,

ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,

ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,

ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಹಣ ಸಂಪಾದನೆಯೇ ಮುಖ್ಯವಲ್ಲ – ಹೇಳಿಕೆ

**● ನಮಗೆ ಇದು ಎಂದೋ ಮನದಟ್ಟಾಗಿತ್ತು !!**

★★★

''ಬಡವಾಯಿತು ಕ್ರಿಕೆಟ್ ಆಟ'' – ಐ.ಪಿ.ಎಲ್. ಬಗ್ಗೆ ಟೀಕೆ

**● ಆಟಗಾರರು ಶ್ರೀಮಂತರಾದರು !!**

★★★

ಅಂತರ್ಜಾಲಕ್ಕೆ ಅಮೆರಿಕನ್ ಗೂಢಾಚಾರರ ಕನ್ನ – ಸುದ್ದಿ

**● ಹಿರಿಯಕ್ಕನ ಚಾಳಿ....... !!**

★★★

ಪೋಲೀಸ್ ಸೋಗಿನಲ್ಲಿ ಒಡವೆ ದೋಚಿದರು – ಸುದ್ದಿ

**● ವಿದೇಶೀ ಕೈವಾಡ ಇರಬಹುದು !!**

★★★

ಬೆಟ್ಟಿಂಗ್ ಬಲೆಯಲ್ಲಿ ಕುಂದ್ರಾ ದಂಪತಿಗಳು – ''ಕ್ರೀಡಾ'' ಸುದ್ದಿ

**● ಪಾಪ, ಬಡತನದ ಬೇಗೆ ಇರಬಹುದು !!**

★★★

''ಕೆ.ಪಿ.ಎಸ್.ಸಿ.'' ನೇಮಕಾತಿ ಪಟ್ಟಿಗೆ ತಡೆ – ಶೀರ್ಷಿಕೆ

**● ಹಗರಣ ಸರಣಿ ಆರಂಭ !!**

★★★

ಅಡ್ವಾಣಿ ಪದತ್ಯಾಗ ಮತ್ತು ಪುನರ್ಗ್ರಹಣ – ಶೀರ್ಷಿಕೆ

**● ಪಕ್ಷದ ದೀನ-ದಯಾಳುಗಳೆಲ್ಲಾ ಅಚ್ಚರಿಗೊಂಡರಂತೆ !!**

★★★

ಬಿ.ಜೆ.ಪಿ. ಸರ್ಕಾರದ ವಿರುದ್ಧ ರಾಜ್ಯಪಾಲರ ವಾಗ್ದಾಳಿ – ಸುದ್ದಿ

**● ಇರಲಿ ''ಕೈ'' ವಾಡವಂತೂ ಇರಲೇಬೇಕು !!**

★★★

# ನಮ್ಮ ನಿಮ್ಮಲ್ಲಿ

‘‘**ರಾ**ಮಾ, ಕೃಷ್ಣಾ’’ ಅಂತ ನನ್ನ ಪಾಡಿಗೆ ಇದ್ದ ನನ್ನನ್ನು ‘‘ಗ್ಯಾಂಗ್ಟಾಕ್, ಪೆಲ್ಲಿಂಗ್’’ ಅಂತ ಜಪಿಸೋ ಹಾಗೆ ಮಾಡಿಬಿಟ್ಟಿತು ನೋಡಿ ವಿಧಿ. ಮೇ ತಿಂಗಳ ಒಂದು ಸುಂದರ ಬೆಳಗ್ಗೆ ನನ್ನ ಮೊಬೈಲ್ ರಿಂಗಾಯಿತು. ಆ ಬದಿಯಲ್ಲಿ ನನ್ನ ತಮ್ಮ ಪ್ರಕಾಶ್. ‘‘ಈಶಾನ್ಯ ಭಾರತಕ್ಕೆ ಒಂದು ಟ್ರಿಪ್ ಹಾಕಿದ್ದೇವೆ. ಒಂದು ಜಾಗ ಖಾಲಿ ಇದೆ, ಬಾ’’ ಅಂದ ಅವ. ನಾನು ಬಿರುಸಾಗಿ ಯೋಚಿಸಿದೆ. ಬರಲಾಗದು ಎನ್ನಲ್ಲಿಕ್ಕೆ ಯಾವ ಸಬೂಬೂ ಆ ಕ್ಷಣಕ್ಕೆ ತೋರಲಿಲ್ಲ. ‘‘ಸರಿ, ಯಾವತ್ತು ಹೊರಡೋದು?’’ ಅಂತ ಪ್ರಶ್ನಿಸಿದೆ. ‘‘ತಿಂಗಳ ಕೊನೆಯ ವಾರ. ವಿವರಗಳನ್ನು ಆಮೇಲೆ ತಿಳಿಸ್ತೀನಿ’’ ಅಂತ ಹೇಳಿ ಸಂಭಾಷಣೆ ಮುಗಿಸಿದ. ನಾನು ಜೇಬಿನಿಂದ ಕರವಸ್ತ್ರ ತೆಗೆದು ಬೆವರೊರೆಸಿಕೊಂಡೆ. ಅದಕ್ಕೆ ಕಾರಣವೂ ಇತ್ತೆನ್ನಿ. ಈಚೀಚೆಗೆ ನನಗೆ ಪ್ರಯಾಣ ಅಂದರೆ ಏನೋ ಒಂದು ಬಗೆಯ ಆತಂಕ. ಟ್ಯಾಕ್ಸಿ ಸಮಯಕ್ಕೆ ಸರಿಯಾಗಿ ಬರುತ್ತೋ ಇಲ್ಲವೋ ಎಂಬುದು ಮೊಟ್ಟಮೊದಲ ಆತಂಕ. ಅನಂತರ ನನಗೆ ಎರಡು ಆತಂಕಗಳು ಇದಿರಾಗುತ್ತವೆ. ವಿಮಾನದಿಂದ ಇಳಿದು ಬ್ಯಾಗೇಜ್ ಪಡೆಯಲು ಕರುಸಾಲ್ ಹತ್ತಿರ ನಿಂತಿರುವಾಗ, ಬರುವ ಎಲ್ಲ ಬ್ಯಾಗೇಜುಗಳೂ ನನ್ನ ಬ್ಯಾಗಿನ ತರಹಾನೇ ಕಾಣೋದು ಒಂದು ಸಮಸ್ಯೆಯಾದರೆ ನನ್ನ ಬ್ಯಾಗು ಯಾವಾಗಲು ಕೊನೆಗೇ ಬರುವುದು ಇನ್ನೊಂದು ಸಮಸ್ಯೆ. ಎಲ್ಲ ಸಹಪ್ರಯಾಣಿಕರೂ ತಮ್ಮ ತಮ್ಮ ಬ್ಯಾಗು, ಸೂಟ್‌ಕೇಸುಗಳನ್ನು ಬಹು ಸಂತೋಷದಿಂದ ಛಕ್ಕನೆ ಕರುಸಾಲಿನಿಂದ ಎತ್ತಿ ತೆಗೆದುಕೊಂಡು ಲಗುಬಗೆಯಿಂದ ಹೋಗುತ್ತಿರುವಾಗ ನಾನು ಮಾತ್ರಾ ಗಾಬರಿಯಿಂದ ಕಂಡ ಕಂಡ ಬ್ಯಾಗುಗಳನ್ನು ನೋಡುತ್ತಾ ನನ್ನ ಬ್ಯಾಗಿಗಾಗಿ ಹಪಗುಟ್ಟುತ್ತಿರುವ ದೃಶ್ಯವನ್ನು ನೆನಪಿಸಿಕೊಂಡರೆ ಮನಸ್ಸಿನ ಶಾಂತಿ ಕದಡುವಂತಾಗುತ್ತದೆ. ಇರಲಿ, ಹೇಗೂ ಗುಂಪಿನಲ್ಲಿ ಗೋವಿಂದ, ಒಗ್ಗಟ್ಟಿನಲ್ಲಿ ಬಲವುಂಟು ಎಂದು ಹೇಳಿಕೊಂಡು ಯಾತ್ರೆಗೆ ಅಗತ್ಯವಾದ ವಸ್ತುಗಳ ಪಟ್ಟಿಮಾಡಲು ಉದ್ಯುಕ್ತನಾದೆ.

ಒಂದು ವಾರದ ಅವಧಿಯ ನಮ್ಮ ಯಾತ್ರೆ ಸಿಕ್ಕಿಂನಲ್ಲಿರುವ ಗ್ಯಾಂಗ್ಟಾಕ್ ಮತ್ತು ಪೆಲ್ಲಿಂಗ್ ಹಾಗೂ ಪಶ್ಚಿಮ ಬಂಗಾಳದ ಕಲಿಂಪಾಂಗ್ (ಅಲ್ಲಿನ ಉಚ್ಚಾರಣೆ ಕಲಿಂಪೂನ್) ಮತ್ತು ಡಾರ್ಜಿಲಿಂಗ್ ಈ ನಾಲ್ಕು ಊರುಗಳನ್ನು ಒಳಗೊಂಡಿತ್ತು. ಹಿಮಾಲಯದ ಪೂರ್ವಗಿರಿಶ್ರೇಣಿಯ ಕೆಳಮಟ್ಟದ ಬೆಟ್ಟಗುಡ್ಡಗಳನ್ನು ಕಡಿದು ಕೊರೆದು ಜನವಸತಿ ನಿರ್ಮಿಸಿರುವ ಊರುಗಳಿವು. ಕೆಳಮಟ್ಟ ಅಂದರೆ ನಾಲ್ಕರಿಂದ ಎಂಟು ಸಾವಿರ ಅಡಿಗಳಷ್ಟು ಎಂಬುದನ್ನು ಮರೆಯಬಾರದು. ಬಾಗ್ಡೋಗ್ರಾ ವಿಮಾನ ನಿಲ್ದಾಣದಲ್ಲಿ ನಾವು ಇಳಿದು ನಮ್ಮ ಟ್ರಾವೆಲ್ ಏಜಂಟ್ ಕಳಿಸಿದ್ದ ಸುಮೋ ಗಾಡಿಯಲ್ಲಿ ಕುಳಿತೆವು. ಗಾಡಿ ಸಿಕ್ಕಿಂನ ರಾಜಧಾನಿ

ಗ್ಯಾಂಗ್ಟಾಕಿನತ್ತ ಭರದಿಂದ ಹೊರಟಿತು. ನಮ್ಮ ಗುಂಪಿನಲ್ಲಿ ನಾವು ನಾಲ್ವರು. ಮೂರ್ತಿ, ಪ್ರಕಾಶ್, ನಾನು ಮತ್ತು ನಟಿ. ನಿಮ್ಮ ಹುಬ್ಬುಗಳು ಮೇಲಕ್ಕೆ ಏರಿ ಅಲ್ಲಿಯೇ ಸಿಕ್ಕಿಕೊಳ್ಳುವುದಕ್ಕೆ ಮುಂಚೆಯೇ ಹೇಳಿಬಿಡುತ್ತೇನೆ ನಟಿ ಎನ್ನುವುದು ನಟರಾಜ ಹೆಸರಿನ ಚಿಕ್ಕರೂಪ. ಅವನೂ ನಮ್ಮಂತೆಯೇ ಹಿರಿಯ ಪ್ರಜೆ. ಬಾಗ್ಡೋಗ್ರಾದಿಂದ ಗ್ಯಾಂಗ್ಟಾಕಿಗೆ ಹೋಗುವ ದಾರಿಯಲ್ಲಿ ಅರ್ಧ ದೂರ ಸಾಗಿದ ನಂತರ ಹಾದಿಯ ಪಕ್ಕಕ್ಕೇ ಹರಿಯುವ ಟೀಸ್ತಾ ನದಿ ಕಾಣುತ್ತದೆ. ಮುಂದಿನ ದಾರಿಯೆಲ್ಲಾ ನದಿಯ ಪಾತ್ರವನ್ನೇ ಅನುಸರಿಸಿ ಹೋಗುವುದು ಒಂದು ಮೋಜಿನ ವಿಷಯ. ಗ್ಯಾಂಗ್ಟಾಕ್ (7800 ಅಡಿ) ಸೇರಿದಾಗ ಸಂಜೆ ಆರಾಗಿತ್ತು. ಹೋಟೆಲಿನಲ್ಲಿ ಬೇಗ ಬಟ್ಟೆ ಬದಲಿಸಿ ಊರು ನೋಡಲು ಹೊರಟೆವು.

ಗುಡ್ಡಗಾಡುಗಳ ಊರುಗಳ ಒಂದು ವೈಶಿಷ್ಟ್ಯವೆಂದರೆ ಈ ಊರುಗಳಲ್ಲಿ ಎಲ್ಲಿ ನೋಡಿದರೂ ಇಳಿಜಾರು ರಸ್ತೆಗಳೇ. ಸಮತಟ್ಟಾದ ರಸ್ತೆಗಳಾಗಲೀ ಅಥವಾ ಒಂದು ಆಟದ ಮೈದಾನದಷ್ಟು ಅಗಲದ ಸಮತಟ್ಟು ಪ್ರದೇಶವಾಗಲೀ ನಮ್ಮ ಯಾತ್ರೆಯಲ್ಲಿ ಇಲ್ಲೆಲ್ಲೂ ನಮಗೆ ಕಾಣಸಿಗಲಿಲ್ಲ. ಚಿಕ್ಕವರಾಗಲೀ ದೊಡ್ಡವರಾಗಲೀ ಅಥವಾ ಹಿರಿಯ ಪ್ರಜೆಗಳಾಗಲೀ ಊರಿನಲ್ಲಿ ನಡೆದು ಓಡಾಡಬೇಕಾದರೆ ರಸ್ತೆಯುದ್ದಕ್ಕೂ ಇಳಿದು ಹತ್ತುವುದಕ್ಕೆ ಸಿದ್ಧರಾಗಿರಬೇಕು. ಹಣ್ಣುಹಣ್ಣು ಮುದುಕರು ಕಡಿದಾದ ರಸ್ತೆಯನ್ನು ಹತ್ತುತ್ತಾ ಬರುತ್ತಿರುವುದನ್ನು ನೋಡಿ ಅಯ್ಯೋ ಅನ್ನಿಸಿತು. ಜೀವನ ಪರ್ಯಂತ ಈ ರೀತಿ ಹತ್ತಿ ಇಳಿಯುವುದರಿಂದ ಇಲ್ಲಿನವರಿಗೆ ಬೊಜ್ಜು ಬರುವುದು ಅಸಾಧ್ಯ. ಈ ಊರುಗಳಲ್ಲಿ ಧೂಮಪಾನವನ್ನು ನಿಷೇಧಿಸಿರುವುದರಿಂದ ಇಲ್ಲಿನವರೆಲ್ಲಾ ಆರೋಗ್ಯವಂತ ದೃಢಕಾಯ ಪ್ರಜೆಗಳಂತೆ ಕಾಣುತ್ತಾರೆ. ನಾವು ನಮ್ಮ ಹೋಟೆಲಿನಿಂದ ಇಳಿದು ಎಂ.ಜಿ. ರಸ್ತೆ ಸೇರಿದೆವು. ಈ ರಸ್ತೆಯನ್ನು ಪಾದಚಾರಿಗಳಿಗೆ ಮಾತ್ರಾ ಮೀಸಲಿಟ್ಟಿರುವುದರಿಂದ ಇಲ್ಲಿ ಓಡಾಡುವುದು ಬಹಳ ಉಲ್ಲಾಸಕರವಾಗಿತ್ತು.

ಮಾರನೆಯ ದಿನ ನಾವು ಇನ್ನೋವಾ ಗಾಡಿಯಲ್ಲಿ ಕುಳಿತು ಸಾಮ್ಗೋ ಸರೋವರವನ್ನು ನೋಡಲು ಹೊರಟೆವು. ನಮ್ಮ ಚಾಲಕ ಪ್ರದೀಪ್, ಹಿಂದಿ ಚೆನ್ನಾಗಿ ಮಾತನಾಡುತ್ತಿದ್ದ. ಈ ಗುಡ್ಡಗಾಡು ಊರುಗಳ ಟ್ರಾಫಿಕ್ ಶಿಸ್ತಿನ ಬಗ್ಗೆ ನಿಮಗೆ ಹೇಳಲೇಬೇಕು. ಅದೂ ಬೆಂಗಳೂರಿನಿಂದ ಬಂದ ನಮಗೆ ಇಲ್ಲಿನ ಕಾರುಗಳು, ವ್ಯಾನುಗಳು ಒಬ್ಬರನ್ನೊಬ್ಬರು ಓವರ್ ಟೇಕ್ ಮಾಡಲು ಪ್ರಯತ್ನಿಸದೇ ಚಲಿಸುವುದು, ಕಾರಿನ ಹಾರನ್ನನ್ನು ಎಂದೂ ಬಳಸದಿರುವುದು, ಮುಂದಿನಿಂದ ಬರುವ ವಾಹನಗಳಿಗೆ ಬಹು ಸೌಜನ್ಯದಿಂದ ದಾರಿ ಬಿಟ್ಟುಕೊಡುವುದು ಇವೆಲ್ಲಾ ಬಹಳ ವಿಚಿತ್ರ ಎನ್ನಿಸಿತು. ಸುಮಾರು ಒಂದು ಗಂಟೆಯ ಪ್ರಯಾಣದ ನಂತರ ನಮ್ಮ ಕಾರು ಒಂದು ಇಳಿಜಾರನ್ನು ಹತ್ತುತ್ತಿತ್ತು. ವಾಹನ ಸಂದಣಿ ದಟ್ಟವಾಗಿದ್ದರಿಂದ ಸಹಜವಾಗಿಯೇ ನಾವು ಆಮೆಯ ವೇಗದಲ್ಲಿ ಸಾಗುತ್ತಿದ್ದೆವು. ನಮ್ಮ ಎಡಭಾಗದಲ್ಲಿ ಹಲವು ವಾಹನಗಳನ್ನು ಪಾರ್ಕ್ ಮಾಡಿದ್ದರು. ಒಂದು ಅಡ್ಡಡ್ಡಲಾಗಿ ಪಾರ್ಕ್ ಮಾಡಿದ್ದ ಕಾರು ಒಮ್ಮೆಲೇ ರಿವರ್ಸ್ ಮಾಡಲು ಪ್ರಾರಂಭಿಸಿತು. ನಮ್ಮ ವಾಹನವನ್ನು ಆ ಚಾಲಕ ನೋಡಿರಲಿಲ್ಲವೆಂದು ಕಾಣುತ್ತೆ. ನಮ್ಮ ಗಾಡಿ ಅವನ ಬದಿಯನ್ನು ದಾಟುವ ಹೊತ್ತಿಗೆ

ಸರಿಯಾಗಿ ಅವನ ಕಾರು ಒಮ್ಮೆಲೇ ಹಿಂದಕ್ಕೆ ಚಲಿಸಿ ನಮ್ಮ ಗಾಡಿಯ ಹಿಂಭಾಗಕ್ಕೆ ಢಿಕ್ಕಿ ಹೊಡೆದು ನಮ್ಮ ಗಾಡಿಯ ಹಿಂದಿನ ಮಡ್‌ಗಾರ್ಡನ್ನು ಗಾಡಿಯಿಂದ ಬೇರ್ಪಡಿಸಿ ನಿಂತಿತು. ನಮ್ಮ ಚಾಲಕ ಪ್ರದೀಪ್ ಕಾರನ್ನು ನಿಲ್ಲಿಸಿ ಕಾರಿನಿಂದ ಇಳಿದ. ನೇಪಾಲೀ ಭಾಷೆಯಲ್ಲಿ ಮುಂದೆ ನಡೆಯಬಹುದಾದ ಜಗಳವನ್ನು ನೋಡಲು ನಾವೂ ಉತ್ಸುಕತೆಯಿಂದ ಇಳಿದೆವು. ನಡೆದ ದೃಶ್ಯವನ್ನು ನಂಬುವುದಕ್ಕೇ ಕಷ್ಟವಾಯಿತು. ಪ್ರದೀಪ್ ಮತ್ತು ಢಿಕ್ಕಿಹೊಡೆದ ಚಾಲಕ ನೇಪಾಲೀ ಭಾಷೆಯಲ್ಲಿ ಮಾತನಾಡಿದರೂ ಅವರ ಬಾಡಿ ಲಾಂಗ್ವೇಜ್ ನಮಗೆ ಸುಲಭವಾಗಿ ಅರ್ಥವಾಗುತ್ತಿತ್ತು. ಮೊದಲಿಗೆ ಅಪರಾಧಿ ಚಾಲಕ ನಗುತ್ತಲೇ ಕ್ಷಮಾಪಣೆ ಕೇಳಿದ. ಪ್ರದೀಪ್ ಅದರ ಅಗತ್ಯವಿಲ್ಲ ಎಂದು ಅವನಿಗೆ ನಗುಮುಖದಿಂದಲೇ ಹೇಳಿದ. ಅನಂತರ ಇಬ್ಬರೂ ಮಡ್‌ಗಾರ್ಡನ್ನು ಪರಿಶೀಲಿಸಿ ಅದರ ರಿಪೇರಿ ಬಗ್ಗೆ ಚರ್ಚೆ ಶುರುಮಾಡಿದರು. ಕಿತ್ತು ಹೋದ ಮಡ್‌ಗಾರ್ಡನ್ನು ಸರಿಪಡಿಸಲು ಒಂದು ತೂತು ಕೊರೆದು ಬೋಲ್ಟ್ ಮತ್ತು ನಟ್ಟಿನಿಂದ ಅವನ್ನು ಒಂದುಗೂಡಿಸುವ ನಿರ್ಧಾರ ಮಾಡಿದ ತಕ್ಷಣ ಪ್ರದೀಪ್ ಹತ್ತಿರದಲ್ಲೇ ನಿಲ್ಲಿಸಿದ್ದ ಹಲವು ಕಾರುಗಳ ಚಾಲಕರಿಂದ ಡ್ರಿಲ್ಲಿಂಗ್ ಸಾಧನವನ್ನು ಎರವಲು ಪಡೆಯಲು ಹೋದ. ಅಪರಾಧೀ ಚಾಲಕ ತನ್ನ ಕಾರನ್ನು ಹುಡುಕಿ ಒಂದು ಬೋಲ್ಟ್ ಮತ್ತು ನಟ್ಟನ್ನು ತೆಗೆದುಕೊಂಡು ಬಂದ. ಹತ್ತು ನಿಮಿಷದಲ್ಲಿ ಕಾರು ಸಿದ್ಧವಾಯಿತು. ರಿವರ್ಸ್ ಮಾಡುತ್ತಿದ್ದ ಕಾರನ್ನು ಮೊದಲು ಹೋಗಲು ಬಿಟ್ಟು ಪ್ರದೀಪ್ ತನ್ನ ಕಾರನ್ನು ಸ್ಟಾರ್ಟ್ ಮಾಡಿದ. ಮುಂದೆ ಸಾಗುತ್ತಿದ್ದಾಗ ನಾನು ಪ್ರದೀಪನನ್ನು ಕುರಿತು, ''ನಿಮಗೆಲ್ಲಾ ಇಷ್ಟು ಸೌಜನ್ಯ ಎಲ್ಲಿಂದ ಬಂತು?'' ಅಂತ ಪ್ರಶ್ನಿಸಿದೆ. ''ನಾವು ಗುಡ್ಡಗಾಡು ಜನ. ಸದಾಕಾಲ ಅಪಾಯದ ಅಂಚಿನಲ್ಲೇ ನಮ್ಮ ಜೀವನ. ಈ ಕಡಿದಾದ ರಸ್ತೆಗಳಲ್ಲಿ ನಡೆದಾಡುವಾಗ ಸ್ವಲ್ಪ ಹೆಜ್ಜೆ ತಪ್ಪಿದರೆ ಪ್ರಪಾತದಲ್ಲಿ ಬೀಳುವ ಸಂಭವ. ಅಪಾಯ ಒದಗಿದಾಗ ಪಕ್ಕದಲ್ಲಿರುವವರು ನೆರವಿಗೆ ಬರದಿದ್ದರೆ ವಿನಾಶ ತಪ್ಪಿದ್ದಲ್ಲ. ಹಾಗಾಗಿ ಒಬ್ಬರಿಗೊಬ್ಬರು ಸಹಾಯ ಹಸ್ತ ನೀಡುವ ಜೀವನ ಕ್ರಮ ನಮಗೆ ಬದುಕುಳಿಯುವ ಅಗತ್ಯವಾಗಿದೆ'' ಅಂದ ಪ್ರದೀಪ್.

ಸಾಮ್ಗೋ ಸರೋವರ ಹನ್ನೆರಡು ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಕಾರಿನಿಂದ ಇಳಿದಾಗ ನಡುಗುವಷ್ಟು ಚಳಿ. ಹಿಮಗಿರಿಗಳಿಂದ ಕರಗಿ ಬರುವ ನೀರಿನ ತೊರೆಗಳಿಂದ ಬರುವ ನೀರು ಈ ಸರೋವರವನ್ನು ತುಂಬುತ್ತದೆ. ಇಲ್ಲಿನ ಜನರಿಗೆ ಇದೊಂದು ಪವಿತ್ರವಾದ ಸರೋವರ ಹಾಗೂ ಯಾತ್ರಾಸ್ಥಳ. ಇದರ ದಂಡೆಯಲ್ಲಿ ಯಾಕ್ ಮೃಗಗಳನ್ನು ಕುದುರೆಗಳಂತೆ ಪ್ರವಾಸಿಗರಿಗೆ ಸವಾರಿ ಮಾಡಿಸಲು ಬಳಸುತ್ತಾರೆ. ಹಿಂದೆ ಟಿಬೆಟ್ಟಿನ ಲ್ಹಾಸಾದಿಂದ ಭಾರತದ ಕಲ್ಕತ್ತಾಗೆ ನಡೆದು ಬರುತ್ತಿದ್ದ ವ್ಯಾಪಾರಿಗಳು ಈ ಸರೋವರದ ಹತ್ತಿರ ವಿಶ್ರಮಿಸುತ್ತಿದ್ದರಂತೆ. ಪ್ರದೀಪ್ ನಮ್ಮನ್ನು ತನ್ನ ಪರಿಚಯದ ಪೆಟ್ಟಿಗೆ ಅಂಗಡಿಗೆ ಕರೆದುಕೊಂಡು ಹೋಗಿ ಟೀ ಕುಡಿಯಲು ವ್ಯವಸ್ಥೆ ಮಾಡಿದ. ನಟಿ ಮತ್ತು ಮೂರ್ತಿ ಯಾಕ್ ಸವಾರಿ ಮಾಡಲು ಮುಂದಾದರು. ಧ್ಯಾನ ಮಾಡಲು ಪ್ರಶಸ್ತವಾದ ಜಾಗ ಎನ್ನುತ್ತಾ ಪ್ರಕಾಶ್ ಧ್ಯಾನಮಗ್ನನಾದ. ನಾನು ಸರೋವರದಲ್ಲಿ ಇದ್ದ ಬ್ರಾಹ್ಮಣೀ ಬಾತುಕೋಳಿಗಳನ್ನು ನೋಡುತ್ತಾ ಕುಳಿತೆ. ಈಜುವಾಗ ಹೊಳೆಯುವ ಕಂದುಗೆಂಪಗಿರುವ ಈ ಬಾತುಗಳು ಹಾರಾಡುವಾಗ ತಮ್ಮ ಹಸಿರು, ಕೆಂಪು ಬಣ್ಣಗಳಿಂದ ಕೂಡಿದ ವರ್ಣರಂಜಿತ ರೆಕ್ಕೆಗಳನ್ನು ಹರಡಿ ಹಾರುವ ದೃಶ್ಯ

ನಿಜಕ್ಕೂ ವಿಸ್ಮಯ ಮೂಡಿಸುತ್ತದೆ. ಹಿಂತಿರುಗುವ ಮುಂಚೆ ಮತ್ತೆ ಪೆಟ್ಟಿಗೆ ಅಂಗಡಿಗೆ ಹೋದೆವು. ಅಂಗಡಿಯ ಒಡತಿ ಮೋನಾ ನಮಗೆ ಮೌ ಮೌ ಎಂಬ ತಿಂಡಿಯನ್ನು ನೀಡಿದಳು. ಇದು ನಾವು ಗಣಪತಿ ಹಬ್ಬದಲ್ಲಿ ಮಾಡುವ ಕಡುಬುಗಳನ್ನು ಹೋಲುತ್ತದೆ. ಹಣ ಕೊಡುವಾಗ ನಾವು ಸ್ವಲ್ಪ ಹೆಚ್ಚು ಟಿಪ್ ಕೊಟ್ಟಾಗ ಮೋನಾಳ ಮುಖ ಸಂತಸದಿಂದ ಅರಳಿದ್ದನ್ನು ನಾನು ಎಂದಿಗೂ ಮರೆಯುವಂತಿಲ್ಲ ಎಂದು ಮೂರ್ತಿ ಉದ್ಗರಿಸಿದ.

ಪೆಲ್ಲಿಂಗ್‌ನಲ್ಲಿ ನಾವು ನೇವಾ ರೀಜೆನ್ಸಿ ಎಂಬ ಹೋಟೆಲಿನಲ್ಲಿ ಚೆಕ್‌ಇನ್ ಮಾಡಿದೆವು. ನಮ್ಮ ರೂಮಿಗೆ ಹೋದಾಗ ಟಿ.ವಿ. ರಿಮೋಟ್ ಇಲ್ಲದ್ದನ್ನು ಪ್ರಕಾಶ್ ಗಮನಿಸಿದ. ಅಷ್ಟು ಹೊತ್ತಿಗೆ ಪಕ್ಕದ ರೂಮಿನಿಂದ ನಟಿ ಬಂದು ''ನಮ್ಮ ಬಾತ್‌ರೂಮಿನಲ್ಲಿ ನೀರು ಬರುತ್ತಿಲ್ಲ'' ಎಂದು ಒಂದು ಹೇಳಿಕೆ ನೀಡಿದ. ನಾನು ನಮ್ಮ ಬಾತ್‌ರೂಮಿನ ಸ್ಥಿತಿಯನ್ನು ನೋಡಲು ಅಲ್ಲಿಗೆ ಹೋದೆ. ಟವೆಲ್ ರ‍್ಯಾಕ್ ಮುರಿದು ಒಂದೇ ಮೊಳೆಯಲ್ಲಿ ನೇತಾಡುತ್ತಿತ್ತು ಅದು. ಅಷ್ಟು ಹೊತ್ತಿಗೆ ಪ್ರಕಾಶ್ ಮಾಡಿದ್ದ ಕರೆಗೆ ಸ್ಪಂದಿಸಿ ಹೋಟೆಲಿನ ಅಸಿಸ್ಟೆಂಟ್ ಮ್ಯಾನೇಜರ್ ನಮ್ಮ ರೂಮಿಗೆ ಬಂದ. ಅವನ ಕೋಟಿನ ಮೇಲೆ ಗೋಪಾಲ್ ದಾಸ್ ಥಾಪಾ ಎಂಬ ನಾಮಫಲಕ ರಾರಾಜಿಸುತ್ತಿತ್ತು. ನಾನು ಅತ್ಯಂತ ನಿಯಂತ್ರಿತ ದನಿಯಲ್ಲಿ ನಮ್ಮ ಅಹವಾಲನ್ನು ಮಂಡಿಸಿದೆ. ಮಾತನ್ನು ಮುಗಿಸುತ್ತಾ, ''ನಾನು ಇದನ್ನೆಲ್ಲಾ ಹೇಳಿದ್ದು ನಿಮ್ಮ ಹೋಟೆಲ್‌ನ ಸೇವೆ ಮುಂದೆಯಾದರೂ ಚೆನ್ನಾಗಿರಲಿ ಅಂತ ಅಷ್ಟೇಹೊರತು ನಿಮ್ಮಲ್ಲಿ ತಪ್ಪು ಕಂಡುಹಿಡಿಯುವ ಉದ್ದೇಶದಿಂದಲ್ಲ'' ಅಂತಲೂ ಸೇರಿಸಿದೆ.

ಗೋಪಾಲ್ ನನ್ನ ಅಹವಾಲನ್ನು ಬಹು ಸಾವಧಾನದಿಂದ ಕೇಳಿಸಿಕೊಂಡ. ಅನಂತರ ''ಮೊಟ್ಟಮೊದಲಿಗೆ ನಮ್ಮ ಸೇವೆ ನಿಮಗೆ ಕಹಿ ಅನುಭವವನ್ನು ಉಂಟುಮಾಡಿದ್ದಕ್ಕಾಗಿ ಕ್ಷಮಾಪಣೆ ಕೋರುತ್ತೇನೆ. ಈಗಲೇ ರಿಮೋಟ್‌ಗೆ ವ್ಯವಸ್ಥೆ ಮಾಡುವೆ. ನೀವು ಊರು ನೋಡಿಬರುವಷ್ಟರಲ್ಲಿ ಟವೆಲ್ ರ‍್ಯಾಕ್ ಸಿದ್ಧವಾಗಿರುತ್ತದೆ. ಪಕ್ಕದ ರೂಮಿನ ಬಾತ್‌ರೂಮಿನ ಸಿಂಕ್ ಕೆಳಗಿರುವ ನಲ್ಲಿಯನ್ನು ತಿರುಗಿಸಿದರೆ ನೀರು ಹರಿಯುತ್ತದೆ. ದಯವಿಟ್ಟು ನಮ್ಮ ತಪ್ಪಿನಿಂದಾದ ಅಚಾತುರ್ಯ ವಿಹಾರಕ್ಕೆ ಬಂದ ನಿಮಗೆ ಅಶಾಂತಿಯನ್ನುಂಟುಮಾಡದಿರಲಿ'' ಅಂತ ಗೋಪಾಲ್ ಹೇಳಿದ. ಅವನ ಮಾತಿಗಿಂತ ಅವನ ಶಾಂತ ಮನೋಭಾವ, ಅವನ ದನಿಯಲ್ಲಿದ್ದ ಪ್ರಾಮಾಣಿಕತೆ ಮತ್ತು ಕಳಕಳಿ ಇವುಗಳು ನನ್ನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು.

ಮಾರನೆಯ ಬೆಳಗ್ಗೆ ಪೆಲ್ಲಿಂಗಿನಿಂದ ಸುಮಾರು ಮೂವತ್ತು ಕಿಲೋಮೀಟರ್ ದೂರದಲ್ಲಿರುವ ಕೇಛೋಪಾಲ್ರಿ ಸರೋವರವನ್ನು ನೋಡಲು ಹೋದೆವು. ಇದು ಇಲ್ಲಿನ ಜನರಿಗೆ ಅತ್ಯಂತ ಪವಿತ್ರವಾದ ಯಾತ್ರಾಸ್ಥಳ. ಈ ಕೊಳದ ಬಳಿ ನಿಂತು ಶ್ರದ್ಧೆಯಿಂದ ಪ್ರಾರ್ಥನೆ ಮಾಡಿದರೆ ನಿಮ್ಮ ಮನೋಭೀಷ್ಟ ನೆರವೇರುವುದೆಂಬ ಪ್ರತೀತಿಯಿದೆ. ಈ ಸರೋವರದ ಸುತ್ತ ಇರುವ ಕೇಛೋಪಾಲ್ರಿ ಬೆಟ್ಟಗಳ ಮೇಲೆ ನಿಂತು ನೋಡಿದರೆ ಈ ಕೊಳದ ಅಂಚು ಒಂದು ಪಾದದ ಆಕಾರದಲ್ಲಿರುವುದು ಕಾಣುತ್ತದೆ. ಇದನ್ನು ಹಿಂದೂಗಳು ಶಿವನ ಪಾದದ ಗುರುತು ಎಂದು ನಂಬಿದರೆ, ಬೌದ್ಧರು ಇದು ಪದ್ಮಸಂಭವ ಗುರುವಿನ ಪಾದದ ಚಿಹ್ನೆ ಎಂದು



ಕೇಛೋಪಾಲ್ರಿ ಸರೋವರ

ಹೇಳುತ್ತಾರೆ. ನಾವು ಕೊಳದ ಬಳಿ ಹೋದಾಗ ಮಳೆ ತೆಳ್ಳನೆ ಜಿನುಗುತ್ತಿತ್ತು. ಸರೋವರ ಅತ್ಯಂತ ಶುಭ್ರವಾಗಿ ಕಾಣುತ್ತಿತ್ತು. ಸುತ್ತ ಗಿಡಮರಗಳಿದ್ದರೂ ಕೊಳದಲ್ಲಿ ಒಂದು ಎಲೆಯಾಗಲೀ ಕಡ್ಡಿಯಾಗಲೀ ತೇಲುತ್ತಿರುವುದು ಕಾಣಲಿಲ್ಲ. ಹತ್ತಿರದಲ್ಲಿ ನಿಂತಿದ್ದ ಬೌದ್ಧ ಭಿಕ್ಷುವೊಬ್ಬನಿಂದ ಇದಕ್ಕೆ ಕಾರಣ ತಿಳಿಯಿತು. ಸರೋವರದ ಸುತ್ತ ಇರುವ ಗಿಡಮರಗಳಲ್ಲಿ ವಾಸಿಸುವ ಹಕ್ಕಿಗಳು ಸರೋವರದಲ್ಲಿ ಬೀಳುವ ಎಲೆ ಕಸಗಳನ್ನು ಬಿದ್ದ ತಕ್ಷಣ ತಮ್ಮ ಕೊಕ್ಕಿನಿಂದ ತೆಗೆದು ಅದರ ಪವಿತ್ರತೆಯನ್ನು ಕಾಪಾಡುವಂತೆ. ಒಟ್ಟಿನಲ್ಲಿ ಕೇಛೋಪಾಲ್ರಿ ಭೇಟಿ ಬಹುವಾಗಿ ಮುದ ನೀಡಿತು.

ಆ ದಿನವೆಲ್ಲಾ ನನಗೆ ಹಿಂದಿನ ದಿನ ಗೋಪಾಲ್‌ನೊಂದಿಗೆ ನಡೆದ ಸಂಭಾಷಣೆಯೇ ನೆನಪಿಗೆ ಬರುತ್ತಿತ್ತು. ನನ್ನ ಮಾತು ಸಮಾಧಾನದಿಂದ ಆಡಿದ್ದಾದರೂ ಅದರ ಹಿಂದೆ ಇದ್ದ ದರ್ಪದ ಛಾಯೆ, ಅದಕ್ಕೆ ಉತ್ತರ ನೀಡಿದ ಗೋಪಾಲ್ ಥಾಪನ ನಮ್ರತೆ, ಪ್ರಾಮಾಣಿಕತೆ ಹಾಗೂ ಎದ್ದುಕಾಣುತ್ತಿದ್ದ ಪ್ರೀತಿ ಇವುಗಳು ನನ್ನ ರಜೋಗುಣಕ್ಕೆ ಕನ್ನಡಿ ಹಿಡಿದಿದ್ದವು.

ಹೋಟೆಲಿನಿಂದ ಹೊರಡುವಾಗ ಬಿಲ್ ತುಂಬಲು ರಿಸೆಪ್ಷನ್‌ಗೆ ಹೋದೆ. ಅಲ್ಲಿ ಥಾಪಾ ನಿಂತಿದ್ದ. ನಗುಮುಖದಿಂದ ನನಗೆ ವಿದಾಯ ಹೇಳಿದ. ಅನಂತರ ನನ್ನನ್ನು ಪಕ್ಕಕ್ಕೆ ಕರೆದು ''ವ್ಯಥೆಪಡಬೇಡಿ. ನಿಮ್ಮ ಮಾತಿನಿಂದ ನನಗೇನೂ ಕೆಟ್ಟದು ಅನಿಸಿಲ್ಲ. ನಮ್ಮೊಡನೆ ಸಂಪರ್ಕಿಸುವ ಎಲ್ಲ ವ್ಯಕ್ತಿಗಳನ್ನು ಬೋಧಿಸತ್ವನಂತೆ ಕಾಣಬೇಕೆಂದು ನಮ್ಮ ಧರ್ಮ ಹೇಳುತ್ತದೆ. ನೀವು ಸಜ್ಜನರಂತೆ ಕಾಣುತ್ತೀರಿ. ಎಲ್ಲರಲ್ಲೂ ಭಗವಂತನನ್ನು ಕಾಣುವ ಅಭ್ಯಾಸವನ್ನು ಬೆಳೆಸಿಕೊಳ್ಳಿ. ನಿಮ್ಮ ನಾಲಿಗೆಯ ತೋಟದಲ್ಲಿ ಸದಾ ಒಳ್ಳೆಯ ಮಾತಿನ ಹೂವುಗಳು ಅರಳಲಿ'' ಅಂತ ಹೇಳಿ ನನ್ನನ್ನು ಬೀಳ್ಕೊಂಡ.

ಡಾರ್ಜಿಲಿಂಗ್ ನಮ್ಮ ಉದಕಮಂಡಲದಂತೆ ಒಂದು ಹಿಲ್‌ಸ್ಟೇಷನ್. ಇಲ್ಲಿನ ಪುಟಾಣಿ ರೈಲು ಬಹಳ ಹೆಸರುವಾಸಿ. ಇಲ್ಲಿಗೆ ಬಂದ ಮಾರನೆಯ ಬೆಳಗ್ಗೆ ನಾವು ನಾಲ್ಕು ಗಂಟೆಗೇ ಎದ್ದು ಟೈಗರ್ ಹಿಲ್‌ಗೆ ಹೋಗಿ ಕಾಂಚನಜುಂಗಾ ಸೂರ್ಯೋದಯವನ್ನು ನೋಡುವುದಿತ್ತು. ನಾಲ್ಕು ಗಂಟೆಗೇನೋ ಎದ್ದೆವು. ಹೊರಗೆ ಜೋರು ಮಳೆ ಮಂಜು. ಪ್ರವಾಸದ ನಿಯಂತ್ರಕ

ಫೋನ್ ಮಾಡಿ ಬೆಳಗಿನ ಕಾರ್ಯಕ್ರಮ ರದ್ದಾಗಿರುವುದಾಗಿ ಹೇಳಿದ. ನಾಲ್ಕೂವರೆಗೆ ಪುನಃ ಮಲಗಿದೆವು. ನಮ್ಮೆಲ್ಲರಿಗೂ ಎಂಥಾ ಒಳ್ಳೇ ನಿದ್ದೆ ಬಂತೂ ಅಂತೀರಿ.

ಡಾರ್ಜಿಲಿಂಗಿನಿಂದ ಬಾಗ್ಡೋಗ್ರಾಕ್ಕೆ ಪ್ರಯಾಣ ಹೊರಟಾಗ, ಏಳುದಿನಗಳ ಪ್ರಯಾಣದಲ್ಲಿ ನಮಗೆ ಮೊಟ್ಟಮೊದಲ ಬಾರಿ ಕಾರಿನ ಹಾರನ್ ಕೇಳಿಸಿತು. ಒಂದು ಕಾರು ನಮ್ಮ ಹಿಂದಿನಿಂದ ಬಂದು ಹಾರನ್ ಮಾಡಿ ಓವರ್ ಟೇಕ್ ಮಾಡಿಕೊಂಡು ಹೊರಟುಹೋಯಿತು. ಪಶ್ಚಿಮ ಬಂಗಾಳದ ರಿಜಿಸ್ಟ್ರೇಷನ್ ಕಾರು ಅದು. ನಮ್ಮ ನೇಪಾಲೀ ಚಾಲಕ ''ಅದೊಂದು ನಾಯಿ'' ಎಂದು ಅವನನ್ನು ಪರಿಚಯಿಸಿದ.

ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಇಳಿದಾಗ ಸಂಜೆ ಆಗಿತ್ತು. ನನ್ನ ಸೂಟ್‌ಕೇಸನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಅದರ ಮೇಲಿನ ಹಿಡಿಯಮೇಲೆ ಒಂದು ಕೆಂಪು ಪ್ಲಾಸ್ಟಿಕ್ ಫಲಕವನ್ನು ಕಟ್ಟಿದ್ದೆ. ಅಲ್ಲದೇ ವಿಮಾನದ ಅಧಿಕಾರಿಗಳು ಕಟ್ಟಿದ್ದ ಗುರುತಿನ ಚೀಟಿಯೂ ಆ ಹಿಡಿಯ ಮೇಲಿತ್ತು. ಇನ್ನೊಂದು ಪಕ್ಕದ ಹಿಡಿಗೆ ಹಿಂದೆ ಎಂದೋ ಕಟ್ಟಿದ್ದ ಹಸಿರು ಟೇಪ್ ಹಾಗೇ ಉಳಿದಿತ್ತು. ಕರುಸಾಲಿನಲ್ಲಿ ಬ್ಯಾಗುಗಳು ಬರಲು ಪ್ರಾರಂಭವಾಯಿತು. ಮೊದಲ ಹಲವು ಬ್ಯಾಗುಗಳಲ್ಲೇ ನನ್ನ ಬ್ಯಾಗು ಕಾಣಿಸಿಕೊಳ್ಳಬೇಕೆ. ಬಹು ಸಂತಸದಿಂದ ಅದನ್ನು ಎತ್ತಿ ಪಕ್ಕಕ್ಕಿಟ್ಟುಕೊಂಡೆ. ನನ್ನದೇ ಅಂತ ಖಾತ್ರಿ ಮಾಡಿಕೊಳ್ಳಲು ಮುಂದಿನ ಹಿಡಿಯ ಮೇಲಿದ್ದ ಕೆಂಪು ಫಲಕ ಹಾಗೂ ಏರ್‌ಲೈನಿನವರು ಹಾಕಿದ್ದ ಗುರುತು ಚೀಟಿಗೆ ಹುಡುಕಿದೆ. ಎರಡೂ ಕಾಣಲಿಲ್ಲ. ಯಾರೋ ದುರಾತ್ಮರು ಮುಂದಿನ ಹಿಡಿಯನ್ನೇ ಕಿತ್ತುಹಾಕಿದ್ದರು. ಹಳೆಯ ಹಸಿರು ಟೇಪಿನ ಆಧಾರದ ಮೇಲೆ ಸೂಟ್‌ಕೇಸನ್ನು ನನ್ನದೆಂದು ಭಾವಿಸಿ ಅದನ್ನು ಮನೆಗೆ ತಂದೆ. ಸಧ್ಯ ನನ್ನ ಭಾವನೆ ಸುಳ್ಳಾಗಿರಲಿಲ್ಲ.

**ಶಿವಕುಮಾರ್**

---


**ಪುಸ್ತಕ ಬಿಡುಗಡೆ ಸಮಾರಂಭ**

**ಅಪರಂಜಿ ಬರಹಗಾರ ಬಳಗದ**

**ಶ್ರೀಮತಿ ಚಿತ್ರಾ ರಾಮಚಂದ್ರನ್ ಅವರ ಪುಸ್ತಕ**

**ಕೀರ್ತಿ ನಿಧಿ ಕೇಸರಿ ಸಿಂಘ**

(ಒಂದು ಚಾರಿತ್ರಿಕ ಕಲ್ಪನೆ)

ಅಧ್ಯಕ್ಷತೆ : **ಶ್ರೀ ಬೇಲೂರು ರಾಮಮೂರ್ತಿ**

ಪುಸ್ತಕ ಬಿಡುಗಡೆ : **ಶ್ರೀ ಎಂ. ಶಿವಕುಮಾರ್**

ಪುಸ್ತಕ ಪರಿಚಯ : **ಶ್ರೀ ಕೃಷ್ಣ ಸುಬ್ಬರಾವ್**

**ಸ್ಥಳ:** ಅಲಿಯಾನ್ಸ್ ಫ್ರಾನ್ಸೇಸ್ ಸಭಾಂಗಣ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು

**ದಿನಾಂಕ:** ಆಗಸ್ಟ್ 4ನೇ ತಾರೀಖು (ಭಾನುವಾರ)

**ಸಮಯ:** ಬೆಳಗ್ಗೆ ಹತ್ತು ಘಂಟೆಗೆ

**ಎಲ್ಲರಿಗೂ ಆದರದ ಸ್ವಾಗತ**

**ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಲೇಖನ**

# ಮುಂಬೈಯಲ್ಲೂ ಅದೇ - ತುಮಿ ಆಸಕರಾ!

**- ಎಚ್. ಶಾಂತರಾಜ ಐತಾಳ್**

**ಹಿಂ**ದೆ ಒಬ್ಬ ಆಂಗ್ಲ ಜಿಲ್ಲಾಧಿಕಾರಿಗೆ ಮೈಸೂರು ಜಿಲ್ಲೆಯ ಹೋಬಳಿ ಒಂದರಲ್ಲಿ ಭಾರೀ ಸಾಧನೆಗೈದ ರೈತನೊಬ್ಬನ ಕೃಷಿಭೂಮಿಯನ್ನು ನೋಡಲು ಮನಸ್ಸಾಯಿತಂತೆ. ಅವರು ಶಿರಸ್ತೇದಾರ್ ಜೊತೆ ಸಾರೋಟಿನಲ್ಲಿ ಆ ಹೋಬಳಿಯ ಹತ್ತಿರ ಒಂದು ಸರ್ಕಾರಿ ಬಂಗ್ಲೆಗೆ ಬಂದಿಳಿದರು. ಅಲ್ಲಿಂದ ಮುಂದೆ ಅವರನ್ನು ಕರೆದೊಯ್ಯುವ ಜವಾಬ್ದಾರಿ ಅಲ್ಲಿನ ಶಾನುಭಾಗರದ್ದು.

ಶಾನುಭಾಗರ ಬಳಿ 'ಎಷ್ಟು ದೂರ ಆಗುತ್ತೆ' ಎಂದು ಸಾಹೇಬರು ಕೇಳಿದಾಗ ಶಾನುಭಾಗ ನಾರಣಪ್ಪ 'ಇಲ್ಲೇ ಹತ್ತಿರ ಸ್ವಾಮಿ' ಅಂತ ಹೇಳ್ತಾರೆ.

'ಸರಿ' ಎನ್ನುತ್ತಾ ಡಿ.ಸಿ. ಸಾಹೇಬರು ಕೈಯಲ್ಲಿ ಸಣ್ಣ ಬೆತ್ತ ಬೀಸುತ್ತಾ ನಡೆಯಲುದ್ಯುಕ್ತರಾಗುತ್ತಾರೆ. ನಾರಣಪ್ಪ ಮುಂದಿನಿಂದ ಭಯಭಕ್ತಿ ತೋರುತ್ತಾ ಬೇಗ ಬೇಗ ದಾರಿ ತೋರುತ್ತಾ ಸಾಗುತ್ತಿದ್ದರೆ, ಸಾಹೇಬರು ಮಂದಗತಿಯಲ್ಲಿ ಬೀಗುತ್ತಿದ್ದರು. ವೃದ್ಧ ಶಿರಸ್ತೆದಾರರು ಹಿಂದೆ ಬಿದ್ದಿದ್ದರು. ಸುಮಾರು ಅರ್ಧ ಗಂಟೆ ಕಾಲ ನಡೆದ ಮೇಲೆ ಸಾಹೇಬರು ಮತ್ತೆ ಕೇಳ್ತಾರೆ 'ಸ್ಪಾಟ್ ಎಲ್ಲಿರೀ ಮಿ. ನಾರಣಪ್ಪಾ?' - ಅಂತ.

'ಬಂದ್ಬಿಟ್ಟು ಮಹಾಸ್ವಾಮಿ - ಇಲ್ಲೇ ಹತ್ತಿರ' ಅಂತಾರೆ ಶಾನುಭಾಗರು. ನಡೀತಾ, ನಡೀತಾ ತಗ್ಗು, ದಿಣ್ಣೆ, ತಿರುವುಗಳಲ್ಲಿ ಸ್ವಲ್ಪ ಸುಸ್ತಾದ ಸಾಹೇಬರು ಶಾನುಭಾಗರಿಗೆ ಮತ್ತೊಮ್ಮೆ ಏರುದನಿಯಲ್ಲಿ ಕೇಳಿದ್ರಂತೆ - 'ವಾಟ್ ಈಸ್ ಯುವರ್ ಹತ್ತಿರ ಐ ಸೇ - ನಿಮ್ಮ ಒಂದು ಹತ್ತಿರ ಅಂದ್ರೆ ಎಷ್ಟು ಮೈಲು - ಮಿಸ್ಟರ್?' ಅಂತ.

ಅಷ್ಟರಲ್ಲಿ ಸ್ಥಳ ಬಂತು. ಶಾನುಭಾಗರು ಕಷ್ಟದಿಂದ ಪಾರಾದರು.

ಈಗಲೂ ಈ ಶಾನುಭಾಗರ ಪರಂಪರೆಯವರು ಎಲ್ಲ ನಗರಗಳಲ್ಲೂ ಕಾಣಸಿಗುತ್ತಾರೆ. ಬೆಂಗಳೂರಿನ ಒಂದು ಬಡಾವಣೆಯಲ್ಲಿ ಐದನೇ ಫೇಸ್, ಮೂರನೇ ಬ್ಲಾಕ್, ಏಳನೇ ಮೈನ್, 13/14ನೇ ಕ್ರಾಸ್ - ಎಂಬಿತ್ಯಾದಿ ವಿವರಗಳನ್ನೊಳಗೊಂಡ ವಿಳಾಸ ಹಿಡಿದು ಸಂಬಂಧಿಯೊಬ್ಬರ ಮನೆಯ ಶೋಧನಾ ಮಗ್ನನಾಗಿದ್ದೆ ನಾನು. ನನ್ನ ಗ್ರಾಮೀಣ ಕನ್ನಡ, ಹರಕು ಮುರುಕು ಇಂಗ್ಲೀಷ್ ಭಾಷೆಗಳನ್ನು ಅರ್ಥ ಮಾಡಿಕೊಳ್ಳುವವರ ತಲಾಶ್‌ನಲ್ಲಿಯೇ ತಾಸೊಂದು ಕಳೆಯಿತು. ಇನ್ನೇನು ಕತ್ತಲಾಗುತ್ತಾ ಬಂತು - ಯಾವುದಾದರೊಂದು ಬಸ್‌ಸ್ಟಾಪ್‌ಗೆ ಹೋಗಿ ಮೆಜೆಸ್ಟಿಕ್ ಬಸ್ಸನ್ನಾದರೂ ಹಿಡಿಯೋಣವೆಂದು ಯೋಚಿಸುವಾಗ

'ಶಿವರಾಮಯ್ಯನವರ ಕಿರಾಣಿ ಅಂಗಡಿ' ಎಂಬ ಹಳೆಯ ಬೋರ್ಡು ತಗಲಿಸಿಕೊಂಡ – ಕೆಂಪೇಗೌಡನ ಕಾಲದ್ದೇ ಇರಬೇಕು – ಪುರಾತನ ದಿನಸಿ ಅಂಗಡಿಯೊಂದು ಕಣ್ಣಿಗೆ ಬಿತ್ತು. ಅಲ್ಲಿ ದಪ್ಪ ಕನ್ನಡಕಧಾರಿ ವೃದ್ಧರೊಬ್ಬರನ್ನು ನೋಡಿ ಪರಮಾನಂದವಾಯಿತು. ಮೆಟ್ಟಲೇರಿ ಹೋದಾಗ ಅವರೇ 'ರಾಂಡಿ, ರಾಂಡಿ, ಏಮಿ ಕಾವಲ' ಅಂದಾಗ ಅಪ್ರತಿಭನಾದೆ. ಆಮೇಲೆ ತಿಳಿಯಿತು. ಅವರು ಅಪ್ಪಟ ಕನ್ನಡಿಗರೇ ಆಗಿದ್ದರೂ ಈ ಏರಿಯಾದಲ್ಲಿ ತೆಲುಗು ತಮಿಳರೇ ಇರೋದ್ರಿಂದ – ಆ ಭಾಷೆಗಳಲ್ಲೇ ವ್ಯವಹಾರ ಮಾಡೋದು ಅನಿವಾರ್ಯವಾಗಿದೆ ಅಂತ. ನಾನು ನನ್ನ ವ್ಯಸನ ತೋಡಿಕೊಂಡೆ. ಕೈಲಿದ್ದ ಎಡ್ರೆಸ್ ಪೇಪರ್ ಅವರಿಗೆ ತೋರಿಸಿದೆ.

ಅವರು, 'ನೋಡಿ ರಾಯ್ರೇ – ನೀವೊಂದು ಕೆಲಸ ಮಾಡಿ – ಈ ರಸ್ತೇಲಿ ಸೀದಾ ಹೋಗಿ, ಅಲ್ಲೊಂದು ಆಂಜನೇಯ ಗುಡಿ ಇದೆ. ಅದರ ಪಕ್ಕದಲ್ಲಿ ಸೀದಾ ಎಡಕ್ಕೆ ಹೊಡ್ಕೊಳ್ಳಿ. ಅಲ್ಲಿಂದ ಎರಡು, ಮೂರು, ನಾಲ್ಕು ಐದನೇ ಕ್ರಾಸ್‌ನಲ್ಲಿ ಬಲಕ್ಕೆ ಹೊಡೀರಿ – ತಿಳೀತಾ? ಆಮೇಲೆ ನೀವೊಂದು ಕೆಲ್ಸಾ ಮಾಡಿ – ಏಕ್‌ದಂ ಸೀದ ಹೋದ್ರೆ ರಸ್ತೆ ಕೊನೇಲಿ ಸದ್ಗುರ್ ಬಾರ್ ಎಂಡ್ ರೆಸ್ಟಾರೆಂಟ್ ಸಿಗ್ತದೆ – ಇಲ್ಲೇ ಹತ್ತಿರ' ಅವರು ಇಷ್ಟು ಹೇಳುವಾಗ ಎಲ್ಲೋ ಇದ್ದ ಅವರ ಮೊಮ್ಮಗ ಹಾಜರಾದ – ಕಾಲೇಜು ಹುಡುಗನ ಹಾಗೆ ಕಾಣ್ತಿದ್ದ – 'ಈಗ ನಿಮ್ಮ ಸದ್ಗುರು ಬಾರ್ ಇಲ್ಲ ಅಜ್ಜ. ಅಲ್ಲಿ ಹತ್ತು ವರ್ಷದಿಂದ 'ನೈಟ್ ಕ್ವೀನ್ ಪಬ್' ನಡೀತಾ ಇದೆ – ಡಿಸ್ಕೊ ಪಬ್ – ನೀವು ಯಾವ ಕಾಲದಲ್ಲಿ ಇದ್ದೀರಿ' ಅಂತ ಅಜ್ಜನ್ನ ರಿಪೇರಿ ಮಾಡಿದ.

ನಾನು ಅರ್ಧ ಸುಸ್ತಾಗಿದ್ದೆ – 'ಆಗ್ಲಿ ಸಾರ್ ಮುಂದೆ ನಾನು ಕೇಳ್ಕೊಂಡು ಹುಡುಕ್ತೀನಿ' ಅಂದೆ. ಅದಕ್ಕೆ ಅವರು 'ಒದ್ದು ಒದ್ದು – ನೋಡಿ ಅದ್ಯಾವ ಸುಡುಗಾಡು ಕ್ವೀನ್ ಬಾರೋ – ಅದು ಸಿಗುತ್ತೆ. ಅಲ್ಲಿ ನೀವೊಂದು ಕೆಲ್ಸಾ ಮಾಡಿ – ಮತ್ತೆ ಲೆಫ್ಟ್‌ಗೆ ಹೊಡ್ಕೊಳ್ಳಿ. ಮೂರು ಕ್ರಾಸ್ ದಾಟಿ – ಸೀದಾ ಹೋದ್ರೆ – ನೀವು ಹೇಳಿದ ಎಡ್ರೆಸ್ ಸಿಗ್ತದೆ – ಇಲ್ಲೇ ಹತ್ರ – ತಿಳೀತಾ' ಅಂತ ಮುಗಿಸುವಾಗ ನಾನು 'ತಿಳೀತು' ಅಂತ ಹೇಳಿದೆ. ಅವರು ಹೇಳಿದ ಒಂದೊಂದು ಕೆಲಸಗಳನ್ನೆಲ್ಲ ಬಾಯಿಪಾಠ ಮಾಡ್ಕೊಂಡಾಗಿತ್ತು. ಒಂದೊಂದೇ ಕೆಲ್ಸ ಪೂರೈಸುತ್ತಾ ಇದ್ದವನಿಗೆ ಬಣ್ಣ ಬಣ್ಣದ ಲೈಟುಗಳಿಂದ ಕಂಗೊಳಿಸುತ್ತಿದ್ದ ನೈಟ್‌ಕ್ವೀನ್ ಪಬ್‌ನ ಬೋರ್ಡ್ ಗೋಚರಿಸಿತು. ಅದರೊಳಗೆ ಟೂ ಪೀಸ್ ಸುಂದರಿಯರು ಸೋಮರಸಾನುಭವ ಪಡೆಯುತ್ತಿರುವ ಏಕ್ಶನ್ ಚಿತ್ರಗಳನ್ನು ನೋಡುತ್ತಾ ನಿಂತೆ. ಮೈಮರೆತೆ – ಮತ್ತೆ ಬಂದ್ಕೆಲಸವನ್ನು ನೆನಪಿಸಿಕೊಂಡು – ಬಂದ್ಕೆಲಸ ಮಾಡುತ್ತಾ ಮುನ್ನಡೆದೆ. ದೂರದಲ್ಲಿ ಮಿಣಿ ಮಿಣಿ ಲೈಟ್‌ನಲ್ಲಿ ಮಬ್ಬಾಗಿ ಒಂದು ಬೋರ್ಡು ಕಾಣುತ್ತಿತ್ತು. ಸಮೀಪ ಹೋಗಿ ನೋಡಿದರೆ – ಅರೆ ಅದು ಮತ್ತೆ ಶಿವರಾಮಯ್ಯನವರ ಕಿರಾಣಿ ಅಂಗಡಿ! ಅಂತೂ ಒಂದು ಪ್ರದಕ್ಷಿಣೆ ಮುಗಿದಿತ್ತು. ಕತ್ತಲೂ ಕವಿದಿತ್ತು. ಆಚ್ಚರಿ ಎಂಬಂತೆ ಎದುರಿನಿಂದಲೇ ಬಂದ ಬಸ್ಸು ಅಲ್ಲೇ ನಿಂತಿತು. ನಿರ್ವಾಹಕ 'ಮೆಜೆಸ್ಟಿಕ್ ಯಾರ್ರೀ ಮೆಜೆಸ್ಟಿಕ್' – ಎನ್ನುತ್ತಿರುವಾಗಲೇ 'ಬದುಕಿದೆಯಾ ಬಡ ಜೀವವೇ' ಎನ್ನುತ್ತಾ ಆ ಬಸ್ಸನ್ನು ಏರಿಯೇ ಬಿಟ್ಟೆ.

ಈ ಒಂದ್ಕೆಲಸಾ ಮಾಡಿ ಅನ್ನೋದು ನಮ್ಮವರಿಗೆ ಮಾತ್ರ ಸೀಮಿತವಲ್ಲ ಎನ್ನೋ ಸತ್ಯ ನನಗೆ ಮುಂಬೈಗೆ ಹೋದಾಗ ಆಗಿತ್ತು.

ಮುಂಬೈ ಮಹಾನಗರದಲ್ಲಿ ಚುಂಚು ಪುಕೋಲಿ ಎಂಬ ಉಪನಗರ ಇದೆ. ಈ ಹೆಸರನ್ನು ಓದುವಾಗ ಹೇಳುವಾಗ ನನಗೇನೋ ಕೌತುಕ, ಮುಜುಗರ ಎಲ್ಲ ಆಗುತ್ತಿತ್ತು. ನನ್ನ ಚಿಕ್ಕಪ್ಪನ ಮನೆ ಎನ್ನುವ ಗೂಡು ಇದ್ದುದು ಇದೇ ಚುಂಚು ಪುಕೋಲಿ ರೇಲ್ವೆ ಸ್ಟೇಷನ್‌ನ ಹತ್ತಿರ – ಇಲ್ಲೇ ಹತ್ತಿರ – ಎನ್ನುವಷ್ಟು ದೂರದಲ್ಲಿ. ಈ ಮಾಯಾನಗರಿಯ ಒಳಗೆ ಬೈಕುಳ್ಳ, ದಾದರ್, ಮಾಟುಂಗ, ಕಲ್ವಾಗಳಂತೆಯೇ ಚುಂಚು ಪುಕೋಲಿ ಸಹ ಒಂದು ಮಿನಿ ಶಹರ್ ಎಂದು ಚಿಕ್ಕಪ್ಪ ಸಾರಿ ಸಾರಿ ಪಾಠ ಹೇಳಿದ್ದರು. ರೈಲ್ವೇ ಸ್ಟೇಷನ್‌ನಿಂದ ಕನಿಷ್ಠ ಹತ್ತು ಸಲ ನನ್ನನ್ನು ಸುಮಾರು ಒಂದು ಮೈಲಿ ನಡೆಸಿಕೊಂಡು ಆ ಕೇಡಾ ಮೇಡಾ ರಸ್ತೆಗಳ ತಿರುವುಗಳ ನಡುವೆ ಹದಿನೈದನೆಯ ಅಂತಸ್ತಿನಲ್ಲಿರುವ ತಮ್ಮ ಫ್ಲಾಟ್‌ನ ದರ್ಶನ ನನಗೆ ಮಾಡಿಸಿದ್ದರು.

ಒಮ್ಮೆ ನಾನೊಬ್ಬನೇ ಧೈರ್ಯ ಮಾಡಿ ಅವರ ಮನೆಯಿಂದ ಕಲ್ಯಾಣ್ ಎಂಬ ಉಪನಗರದವರೆಗೆ ನನ್ನ ಹಳೇ ಮಿತ್ರನೊಬ್ಬನನ್ನು ನೋಡಲು ಹೋಗಿದ್ದೆ. ಕಲ್ಯಾಣ್ ಸ್ಟೇಷನ್‌ನಲ್ಲಿ ಇಳಿಯುತ್ತಲೇ ಅಲ್ಲಿಯೂ ಸೇರಿದ ಜನ ಜಂಗುಳಿಯನ್ನು ನೋಡಿ ಇಲ್ಲಿ ನಾನು ಬಂದ ಕೆಲಸ ಕಲ್ಯಾಣವಾದಂತೆಯೇ ಎಂದುಕೊಂಡೆ. ನನ್ನ ಮಿತ್ರ ಶಂಭು ಜೋಷಿಯ ವಿಳಾಸ ಇದ್ದ ಕಾರ್ಡ್ ನನ್ನ ಬಳಿ ಇತ್ತು. ಒಬ್ಬರು ಮಹನೀಯರಿಗೆ ಅದನ್ನು ತೋರಿಸಿದೆ.

'ಸರ್' ಎಂದೆ

'ಮದ್ರಾಸಿ ಹೋಕಾ' ಅಂದ ಆತ

'ನೋ ಸರ್ – ಮೈಸೂರಿ' ಅಂದೆ

'ಬರ್–ಬರ್' ಎನ್ನಲು ಶುರು ಮಾಡಿದನಾತ. ಏನೋ ವಾಯುದೇವರ ಆಪ್ತನಿರಬೇಕು ಎಂದ್ಕೊಂಡೆ.

'ಸರ್ ಪ್ಲೀಸ್ ಹಿಂದಿ ಮೆ ನಹಿತೊ ಅಂಗ್ರೇಜಿ ಮೆ ಬೋಲಿಯೆ' ಅಂದೆ.

'ಅಸಕಾ' ಅನ್ನುತ್ತಾ ಮತ್ತೆ 'ಬರ್' ಅಂದ.

'ತುಮೀ ಅಸಾ ಕರಾ ಮ್ಹ್‌ಣೆ ಝ್ – ಯು ಡೂ ಲೈಕ್ ದಿಸ್...' ಸರಿ ದಾರಿಗೆ ಬರುವ ಲಕ್ಷಣ ಕಾಣಿಸಿತು ಅವರ ಮಾತು. ಆದರೆ ಇಲ್ಲಿ ಕೂಡಾ ಅದೇ ರಾಗ – 'ನೀವು ಹೀಗೆ ಮಾಡಿ – ಒಂದ್ಕೆಲಸಾ ಮಾಡಿ' ಅನ್ನೋ ಪ್ರಲಾಪ.

ನಾನು ತಲೆಯಾಡಿಸಿದೆ. ಎಷ್ಟು ದೂರ ಹೋಗಿ ಎಡಕ್ಕೆ – ಆ ಮೇಲೆ ಬಲಕ್ಕೆ – ಆ ಮೇಲೆ ಅಲ್ಲೊಂದು ಶನೀಶ್ವರ ಮಂದಿರಕ್ಕೊಂದು ಪ್ರದಕ್ಷಿಣೆ ಹಾಕಬೇಕು – ಅಲ್ಲಿಂದ ಒಂದು ಕೆಲ್ಸಾ

---

**1870ರಲ್ಲಿ ಪ್ರಪಂಚದಾದ್ಯಂತ ಹರಿದಾಡಿದ ಟೆಲಿಗ್ರಾಫ್‌ಗಳ ಸಂಖ್ಯೆ 91,58,000.**

**160 ವರ್ಷಗಳ ಇತಿಹಾಸವುಳ್ಳ ಟೆಲಿಗ್ರಾಫ್ ಸೇವೆ ಜುಲೈ 15ರಂದು ಕೊನೆಗೊಳ್ಳಲಿದೆ.**

ಮಾಡಬೇಕು – ಅಲ್ಲೊಂದು ಚಾಲ್‌ನ ಬದಿಯ ಗಲ್ಲೀ ಒಳಗೆ ನುಗ್ಗಬೇಕು ಇವುಗಳನ್ನೆಲ್ಲ ನೋಟ್ ಮಾಡಿಕೊಂಡೆ. ಮಧ್ಯೆ ಮಧ್ಯೆ ಆ ಮಹಾಶಯ ಬರಕಾ ಬರಕಾ ಅಂತಿದ್ದ – ನಾನು ಬರಕೊಂಡೆ ಬರಕೊಂಡೆ ಅನ್ನುತ್ತಾ ಪೇಪರ್ ಮೇಲೆ ನೋಟ್ ಮಾಡಿದ್ದೇ ಮಾಡಿದ್ದು. ಮನೆಗೆ ಹಿಂದಿರುಗಿದ ಮೇಲೆ ಚಿಕ್ಕಪ್ಪ ತಲೆ ತಲೆ ಹೊಡಕೊಂಡ್ರು – ನೀನು ಬರ್ ಬರ್ ಅಂತ ಅಷ್ಟೇ ಹೇಳಬೇಕಿತ್ತು. ಸರಿ ಸರಿ ಎಂಬ ಅರ್ಥದಲ್ಲಿ ಅಂತ.

ಆದರೆ ಶಂಭೂ ಜೋಷಿ ಮನೆ ಮಾತ್ರ ನನಗೆ ಸಿಗಲೇ ಇಲ್ಲ. ಮುಂಬೈ ಎಂಬ ಗೊಂಡಾರಣ್ಯದ ಈ ಉಪನಗರದಲ್ಲಿ ಸುಮಾರು ಒಂದು ಗಂಟೆ ಕಾಲ ಆ ಮಹಾಶಯರು ತಿಳಿಸಿದ ಪಥದಲ್ಲೇ ನಡೆದೆ. ಅಲ್ಲೊಂದು ಬಂಗ್ಲೆ ಕಾಣಿಸಿತು. 'ಸುಖ್‌ವಿಲ್ಲಾ' ಅಂತ, ದೇವರೇ ನನಗೆ ಈ ಹೆಸರು ತೋರಿಸಿದ್ರು ಅಂದುಕೊಂಡು ರೇಲ್ವೆ ಸ್ಟೇಷನ್ನಿಗೆ ಹಿಂದಿರುಗುವ ಮನಸ್ಸು ಮಾಡಿದೆ. ಬಂದ ದಾರಿಯಲ್ಲೇ ಹಿಂದೆ ಹೋಗಲು ಪ್ರಯಾಸ ಪಡುತ್ತಿರುವಾಗ, ಇನ್ನೊಮ್ಮೆ ಬರುವಾಗ ಅರ್ಧಾಂಗಿಯನ್ನು ಜತೆಯಲ್ಲಿ ಕರೆತರಲು ನಿಶ್ಚಯಿಸಿದೆ. ರಸ್ತೆಗಳನ್ನು ಕನ್‌ಫ್ಯೂಸ್ ಮಾಡುವುದರಲ್ಲಿ ಅವಳು ಎತ್ತಿದ ಕೈ. ಅವಳು ಸಹಕರಿಸಿದ್ದರೆ ನಾನು ವಾಪಾಸು ಕಲ್ಯಾಣ್‌ಗೆ ಸೇರುವ ಬದಲು ಪಕ್ಕದ ದೊಂಬಿವಿಲಿಗಾದರೂ ಹೋಗಬಹುದಿತ್ತು. 'ಇದರಿಂದ ಅನುಕೂಲವೇ ಆಯ್ತಲ್ಲ' ಎನ್ನುವ ಸಮಜಾಯಿಷಿಯನ್ನೂ ಕೊಡುತ್ತಿದ್ದಳೋ ಏನೋ ಅಂದ್ಕೊಂಡೆ.

ಚಿಕ್ಕಪ್ಪನ ಮನೆಗಂತೂ ವಾಪಸಾಗಲೇ ಬೇಕಲ್ಲಾ. ಕಲ್ಯಾಣ್‌ನಲ್ಲೇ, ಗಿಜಿಗಿಜಿಸುತ್ತಿದ್ದ ಬೋಗಿಯ ಒಳಗೆ ಜಿಗಿದು ಬಾಗಿಲ ಹತ್ತಿರ ಸ್ಥಿರವಾಗಿ ನಿಂತ್ಕೊಂಡು ಬಿಟ್ಟೆ. ಥಾಣೆ ಸ್ಟೇಷನ್ ದಾಟುತ್ತಲೇ ನನಗೆ ತವಕ – ತಲ್ಲಣ ಆರಂಭವಾಯಿತು. ಪಕ್ಕದವರ ಬಳಿ ಕೇಳಿದೆ.

'ಭಾಯಿ ಸಾಬ್ ಚುಂಚ್ ಪುಕೋಲಿ ಬಂತಾ?' ಎಂದು

'ಆಗೇ ಹೆ' ಎಂದನಾತ. ಆಮೇಲೆ ಮುಲುಂದು ಅಂತೆ – ಭಾಂಡುಪ್, ವಿಕ್ರೋಲಿ – ಯೂ ಬಂತು. ನನಗೆ ತಡೆಯಲಾಗಲಿಲ್ಲ. ಮೊದಲಿನವನ ಹತ್ತಿರ ಕೇಳಿ ದಬಾಯಿಸಿಕೊಳ್ಳಲು ನನ್ನ ಮನಸ್ಸೊಪ್ಪಲಿಲ್ಲ. ಇನ್ನೊಬ್ಬ ಟೈ–ವಾಲರ ಬಳಿ ಕೇಳಿದೆ. 'ಸರ್ ಚುಂಚ್ ಪುಕೋಲಿ....' ಅವರೂ 'ಪುಢೆ–ಪುಢೆ' ಅಂತ ನನ್ನ ಕೋರಿಕೆಯನ್ನು ಪೂರ್ತಿ ಕೇಳುವ ಮೊದಲೇ ಉತ್ತರಿಸಿದರು. ಈ ಬೋಗಿಯಲ್ಲಿರುವವರೆಲ್ಲ ಹೆಚ್ಚಿನವರು ವಿ.ಟಿ.ಗೆ ಹೋಗುವವರೇ ಆಗಿದ್ದರಿಂದ ನಾನು ಪ್ರತೀ ಸ್ಟೇಷನ್‌ನಲ್ಲೂ ನನ್ನ ಪ್ರವರ–ಚೊಂಚ್ ಪುಕೋಲಿ–ಅಂತ ಶುರು ಮಾಡುವಾಗ 'ಅರೇ ಚುಪ್‌ರಹೋ ಭಾಯಿ' – ಎಂದು ಸರದಿಯ ಮೇಲೆ ಒಬ್ಬೊಬ್ಬರೇ ಗದರಲಾರಂಭಿಸಿದರು.

ಅಂತೂ ಮಾಟುಂಗಾ, ದಾದರ್, ಪರೇಲ್ ಎಲ್ಲ ದಾಟಿದ ಮೇಲೆ ಕೋರಸ್‌ನಲ್ಲಿ ಅವರೆಲ್ಲ – 'ಅರೇ ಚೊಂಚು ಪೋಕಲಿ ವಾಲೇ – ಮದರಾಸೀ – ಉತರ್ ಜಾ' – ಎಂದು

---

**ಟೆಲೆಕ್ಸ್, ಟೆಲಿಫೋನ್, ಫ್ಯಾಕ್ಸ್ ಮುಂತಾದ ಆಧುನಿಕ ಸಂದೇಶ ವಾಹಕಗಳ ಪ್ರಾರಂಭದಿಂದ 1970ರಲ್ಲಿ ಟೆಲಿಗ್ರಾಫ್ ಸಂದೇಶಗಳ ಸಂಖ್ಯೆ 6,96,700ಕ್ಕೆ ಇಳಿಯಿತು.**

ಗೇಲಿ ಮಾಡುತ್ತಾ ನನ್ನನ್ನು ಬೀಳ್ಕೊಟ್ಟರು. ನನ್ನನ್ನು ಮದ್ರಾಸೀ ಅಂತ ಅವರೆಲ್ಲ ಕರೆದದ್ದರಿಂದ ನಾನು ಉಬ್ಬಿಹೋಗಿದ್ದೆ – ಯಾವ ಅಣ್ಣಾ ದೊರೈ – ಎಂ.ಜಿ.ಆರ್. ರಾಧಾಕೃಷ್ಣನ್‌ರಿಗೂ ನಾನು ಕಮ್ಮಿ ಅಲ್ಲ ಎಂಬ ಭಾವನೆಗಳೊಂದಿಗೆ ಹೆಚ್ಚು ತಡವರಿಸದೆ ಚಿಕ್ಕಪ್ಪನ ಫ್ಲಾಟನ್ನು ಸೇರಿದೆ.

ಆ ರಾತ್ರಿ ಊಟವಾದ ಮೇಲೆ ಚಿಕ್ಕಪ್ಪನ ಬಳಿ ಒಂದು ಸಲಹೆಯನ್ನೂ ನೀಡಿದೆ. ಈ ಮಹಾನಗರದಲ್ಲಿ ಬಾಂದ್ರಾ, ಗೋರೆಗಾಂವ್, ಮೀರಾರೋಡ್, ಸಾಂತಾಕ್ರೂಜ್ – ಈ ಉಪನಗರಗಳಲ್ಲಿ ಮನೆ ಸಿಗೋದು ಕಷ್ಟ ಇದೆಯಾ ಚಿಕ್ಕಪ್ಪ! ಅಂತ ಕೇಳಿದೆ.

'ಸದ್ಯಕ್ಕೆ ಅಷ್ಟು ಕಷ್ಟವಿಲ್ಲ. ಯಾಕೆ ನಮ್ಮದು ಇಲ್ಲಿ ಹದಿನೈದನೇ ಮಹಡಿ ಅಂತ ಹೇಳ್ತಾ ಇದ್ದೀಯಾ' ಅಂತ ಅವರು ಕೇಳಿದರು.

'ಅದಕ್ಕಲ್ಲ – ನಿಮ್ಮ ಊರಿನ ಹೆಸರು ಹೇಳುವಾಗ....'

'ಓಹೋ ತಿಳೀತು ಬಿಡು ಇದು. ಚೂಂಚ್ ಪುಕೋಲಿಯ ಪ್ರಭಾವವೋ ಡೋಂಟ್ ವರಿ ನೀನು ಇನ್ನೊಂದು ಸಲ ಬರುವಾಗ ಮೆರೀನ್ ಡ್ರೈವ್‌ನಲ್ಲಿ ನನಗೊಂದು ಫ್ಲಾಟ್ ಅಲಾಟ್ ಆಗಿದೆ. ನಾನು ಅಲ್ಲಿಗೆ ಶಿಫ್ಟ್ ಆಗ್ತೀನಿ' ಎಂದು ಬೊಗಳೆ ಬಿಟ್ರು.

ನಾನು ನಂಬಿದವನಂತೆ ನಟಿಸಿದೆ. ಆದರೂ ನನಗೆ ಈ ಮಹಾನಗರಕ್ಕೂ, ನಮ್ಮೂರಿಗೂ ಕಂಡು ಬಂದ ಸ್ವಾಮ್ಯದ ಬಗ್ಗೆಯೂ ಚಿಕ್ಕಪ್ಪನಲ್ಲಿ ಹೇಳೇ ಬಿಟ್ಟೆ 'ಅಲ್ಲಿ ಒಂದ್ಕೆಲ್ಸ ಮಾಡಿ ಅಂತ ಹೇಳೋ ಮಾತನ್ನ ಇಲ್ಲೂ ತುಮಿ ಆಸಕರಾ ಅಂತಲೇ ಹೇಳ್ತಾರೆ ಇದೊಂದೇ ಮಾತು ಸಾಕು ಉತ್ತರ ದಕ್ಷಿಣವನ್ನು ಬೆಸೆಯಲು ಏನಂತೀರಾ' ಅಂದೆ.

ಅದಕ್ಕೆ ಚಿಕ್ಕಪ್ಪ ಹೇಳಿದರು – 'ನೀನೊಂದು ಕೆಲ್ಸ ಮಾಡು – ಭಾರತ್ ಜೋಡೋ ಆಂದೋಲನಕ್ಕೆ ಸೇರಿ ಈ ಪಾಯಿಂಟಿಗೆ ಪ್ರಚಾರ ಕೊಡು' ಅಂತ ಈ ಕೆಲಸ ಮಾಡೋದಕ್ಕೆ ಏನೆಲ್ಲ ಹತ್ಯಾರುಗಳು ಬೇಕಾದಾವು ಎಂದು ಈಗ ಲೆಕ್ಕ ಹಾಕ್ತಾ ಇದ್ದೇನೆ.

☆

---

ಹೆಂಡತಿಯನ್ನು ಡೆಲಿವರಿಗೆ ಮಾವನ ಮನೆಗೆ ಕಳಿಸಿದ್ದವನಿಗೆ ಮಾವನಿಂದ ಅವಳನ್ನು ಮೆಟರ್ನಿಟಿ ಹೋಂಗೆ ಅಡ್ಮಿಟ್ ಮಾಡಿದಾರೆ ಅಂತ ಟೆಲಿಗ್ರಾಂ ಬಂತು.

ಅದಕ್ಕೆ ಅವನು ಖುಷಿಯಿಂದ I AM COMING FOR DELIVERY ಅಂತ ಟೆಲಿಗ್ರಾಂ ಕೊಟ್ಟ.

ಅದಕ್ಕೆ ಉತ್ತರ ಏನು ಬಂತು ಗೊತ್ತೇ?

YOU NEED NOT DELIVER. SHE WILL DO THAT. YOU ONLY BRING MONEY TO PAY DELIVERY CHARGES.

# ನಾನು ಸತ್ತಾಗ!

**- ಎಚ್.ಜಿ. ಸೋಮಶೇಖರ ರಾವ್**

**ದೆ**ಹಲಿಯಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಸುದ್ದಿ ಕೇಳಿ ತುಂಬ ನೊಂದಿದ್ದೆ. ಪ್ರಾಥಮಿಕ ವೈದ್ಯೋಪಚಾರ ದೆಹಲಿಯ ಆಸ್ಪತ್ರೆಯಲ್ಲಾಯಿತಾದರೂ ಆಕೆಯ ಸ್ಥಿತಿ ಸುಧಾರಿಸಲಿಲ್ಲವೆಂದು ವಿಶೇಷ ಚಿಕಿತ್ಸೆಗಾಗಿ ಆಕೆಯನ್ನು ಸಿಂಗಪೂರಕ್ಕೆ ಕರೆದೊಯ್ದರು. ದೆಹಲಿ ಹಾಗೂ ದೇಶದ ಇನ್ನಿತರ ಕಡೆ ಭಾರಿ ವಿರೋಧದ ಸಭೆಗಳಾದವು. ಅಷ್ಟರಲ್ಲಿ ಆಕೆಯ ನಿಧನದ ಸುದ್ದಿ ತಿಳಿದು ತುಂಬ ಖೇದವಾಯಿತು. ಆಗ 'ಆವಿಷ್ಕಾರ್' ಎಂಬ ಸಾಂಸ್ಕೃತಿಕ ಸಂಸ್ಥೆಯಿಂದ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಿ ಅದಕ್ಕೆ ಡಾ.ಯು.ಆರ್. ಅನಂತಮೂರ್ತಿಯ ನೇತೃತ್ವದಲ್ಲಿ ಬೆಂಗಳೂರಿನ ಮೈಸೂರ್ ಬ್ಯಾಂಕ್ ಚೌಕದಲ್ಲಿ ಸಭೆ ನಡೆಯಿತು. ನಾನು ಒಬ್ಬ ಭಾಷಣಕಾರನಾಗಿ ಹೋಗಿದ್ದೆ. ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಘೋಷಣೆಗಳನ್ನು ಕೂಗುತ್ತಿದ್ದರು. ನಾನು ಹೋದಾಗ ಹಾಜರಿದ್ದ ಮಾಧ್ಯಮದವರು ನನ್ನನ್ನು ಸುತ್ತುವರಿದು ನನ್ನ ಪ್ರತಿಕ್ರಿಯೆ ಕೇಳಿದರು. ನನ್ನ ಆಗಿನ ದುಗುಡದ ಮನಃಸ್ಥಿತಿಯಲ್ಲಿ ನನಗೆ ಅನಿಸಿದ್ದನ್ನು ಹೇಳಿದೆ. ಅಷ್ಟರಲ್ಲಿ ಡಾ.ಯು.ಆರ್. ಅನಂತಮೂರ್ತಿಯವರೂ ಬಂದರು. ಸಾಹಿತಿಗಳೂ, ಹಿರಿಯರೂ, ಕಲಾವಿದರೂ ಬಂದು ಸೇರಿದರು. ಭಾಷಣಗಳಾಯಿತು. ಕ್ಯಾಮರಾಗಳನ್ನು ಕ್ಲಿಕ್ಕಿಸಿದರು. ಸ್ಲೋಗನ್‌ಗಳ ಕೂಗು ಜೋರಾಗಿ ನಡೆದಿತ್ತು.

**ನಾನು ಹುಟ್ಟಿದ್ದು ಡಿಸೆಂಬರ್ ತಿಂಗಳಲ್ಲಿ; ಸತ್ತಿದ್ದೂ ಡಿಸೆಂಬರ್‌ನಲ್ಲೇ!**

ಶ್ರದ್ಧಾಂಜಲಿ ಕಾರ್ಯಕ್ರಮ ಮುಗಿದಾಗ ಮಧ್ಯಾಹ್ನ ಒಂದು ಗಂಟೆ ಮೀರಿತ್ತು. ಕಾರಿನಲ್ಲಿ ಮನೆಯ ಕಡೆ ಹೊರಟಾಗ ನನಗೊಂದು ಮೊಬೈಲ್ ಕರೆ ಬಂತು. ಬಹಳ ದಿನಗಳಿಂದ ಸಂಪರ್ಕದಲ್ಲಿರದ ಗೆಳೆಯನೊಬ್ಬ ''ಹೇಗಿದ್ದೀಯ... ಬಹಳ ದಿನವಾಯಿತು.. ಹೆಲ್ತ್ ಹೇಗಿದೆ?'' ಅಂತ ಉಸಿರು ಹಿಡಿದು ಒಂದೇ ಸಾರಿಗೆ ಕೇಳಿದ. ''ಫಸ್ಟ್ ಕ್ಲಾಸ್'' ಅಂತ ಹೇಳಿ, ''ಏನು ಸಮಾಚಾರ? ಇದ್ದಕ್ಕಿದ್ದಂತೆ ಜ್ಞಾಪಿಸಿಕೊಂಡ್ಬಿಟ್ಟಿದ್ದಿ?'' ಎಂದೆ. ''ಏನಿಲ್ಲ, ಸುಮ್ಮನೆ ಜ್ಞಾಪಕ ಬಂತು... ಮಾಡಿದೆ.'' ಇನ್ನೆರಡು ನಿಮಿಷಾನಂತರ ಮತ್ತೊಬ್ಬ ರಂಗಭೂಮಿ ಮಿತ್ರನಿಂದ ಕರೆಬಂತು. ಖುಷಿಯಾಯ್ತು 'ಹೇಗಿದ್ದೀಯಾ?' 'ಚೆನ್ನಾಗಿದ್ದೇನೆ... ಏನು ಧಡಕ್ ಅಂತ ಫೋನ್?' 'ಏನಿಲ್ಲ... ಸುಮ್ಮನೆ' ಫೋನ್ ಕಟ್ ಆಯ್ತು. ಕೂಡಲೆ ಇನ್ನೊಂದು ಫೋನ್‌ಕಾಲ್ ಮನೆಯಿಂದ.... ಮಾತಾಡಿದ ವ್ಯಕ್ತಿ ನನ್ನ ಹೆಂಡತಿ. ''ಏನು ಕಾರ್ಯಕ್ರಮ ಮುಗಿಯಲಿಲ್ಲವೆ?'' ''ಮುಗೀತು... ಮನೆ ಹತ್ತಿರಕ್ಕೆ ಬಂದಿದ್ದೀನಿ'' ಅಂತ ಹೇಳಿ - ''ಏನಿದು ಫೋನ್‌ಕರೆಗಳು, ಒಂದರ ಮೇಲೊಂದರಂತೆ! ಪುನಃ ಬೊಂಬಾಯಿ, ಹೈದರಾಬಾದ್,

ಮೈಸೂರು ಮತ್ತಿತರ ಊರುಗಳಿಂದ ಕರೆಗಳು. 'ಚೆನ್ನಾಗಿದ್ದೀರಾ... ಆರೋಗ್ಯ ಹೇಗಿದೆ.... ವೆರಿಗುಡ್' ಇಷ್ಟೆ''

ನನಗೆ ಏನೇನೋ ಯೋಚನೆಗಳು ಬಂದವು. ಯಾರಿಗಾದರೂ ಏನಾದರೂ ಅನಾಹುತವಾಗಿದೆಯೇ ಅಥವಾ ತೀರಿಕೊಂಡಿದ್ದಾರೆಯೇ – ಸ್ವಲ್ಪ ಅಧೀರನಾಗಿಯೇ ಮನೆಗೆ ಬಂದು ಕಾರು ಇಳಿಯುತ್ತಿದ್ದಾಗ ಗೇಟಿನ ಮುಂದೆ ನನ್ನ ತಮ್ಮ – ನನ್ನ ಹೆಂಡತಿ ನಿಂತಿದ್ದರು. ಆಂತಕದಲ್ಲಿದ್ದ ಹಾಗಿತ್ತು. ನನ್ನ ತಮ್ಮ ಹೇಳಿದ, ''ಟಿ.ವಿ.ಯ ಒಂದು ಛಾನೆಲ್‌ನಲ್ಲಿ ನಿಮ್ಮ ಫೋಟೋ ಹಾಕಿ ನೀವು ನಿಧನರಾದಿರಿ'' ಎಂಬ ಸುದ್ದಿ ಬಂದಿತ್ತು. ಅಂದಾಗ ನಾನು ತಡಬಡಾಯಿಸಿದೆ, ಮೊಬೈಲ್ ಕರೆಗಳ ಹಿನ್ನಲೆ ಫಕ್ಕನೆ ಹೊಳೆಯಿತು. ದೆಹಲಿಯಲ್ಲಿ ಸತ್ತ ವಿದ್ಯಾರ್ಥಿನಿಗಾಗಿ ಒಂದು ಫ್ರೇಮ್‌ನಲ್ಲಿ ''ನಿಧನ'' ಎಂದು ಪ್ರಕಟವಾಗುತ್ತಿದ್ದಾಗ, ನಾನು ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತಾಡುವಾಗ ನನ್ನ ಭಾವಚಿತ್ರ ಪ್ರಸಾರದ ಜೊತೆ 'ನಿಧನ' ರಂಗಭೂಮಿ ಹಿರಿಯ ನಟ ಎಂದು ನನ್ನ ಹೆಸರನ್ನೂ ಪ್ರಕಟಿಸಿದ್ದರಂತೆ.

ಇಂತಹ ಸುಳ್ಳುಸುದ್ದಿಯ ಪ್ರಸಾರ ಯಾರ ತಪ್ಪಿನಿಂದೇ ಆಗಿರಲಿ. ಅದನ್ನು ನೋಡುವ ಅವಕಾಶ ನನಗಿಲ್ಲವಾಯಿತು! ಸಾಯದಿದ್ದರೂ ಪರವಾಗಿಲ್ಲ, ಸತ್ತ ಸುಳ್ಳುಸುದ್ದಿಯನ್ನು ನೋಡಿ – ಕೇಳಬಹುದಾಗಿತ್ತಲ್ಲ!! ''ಇದೆಲ್ಲಾ ಇರಲಿ. ಊಟ ಮಾಡಿ ನನ್ನ ಮಧ್ಯಾಹ್ನದ ನಿದ್ದೆಯೂ ಸಾಧ್ಯವಾಗದಂತೆ ಫೋನ್ ಕರೆಗಳು ಬರುತ್ತಲೇ ಇದ್ದವು. ನನಗೆ 'ನಿಜಸ್ಥಿತಿ' ಗೊತ್ತಿದ್ದರಿಂದ ಫೋನ್ ಮಾಡಿದವರಿಗೆಲ್ಲ ''ನಾನು ಸತ್ತಿಲ್ಲ.... ನಾನೇ ಮಾತಾಡುತ್ತಿರುವುದು ನನ್ನ ಪ್ರೇತವಲ್ಲ!'' ಎಂದು ನಗುತ್ತಲೇ ಹೇಳಿದೆ. ನನ್ನ ಸಾವಿಗೆ ಸುದ್ದಿಯ ಮೇಲೆ ಜೋಕ್ ಮಾಡುತ್ತ ನಕ್ಕು ನಗಿಸಿದೆ.

ಸಂಜೆಯಾಗುತ್ತ ಮೈಸೂರಿನಿಂದ ನನ್ನ ಹಿರಿಯ ರಂಗಮಿತ್ರ ಫೋನ್ ಮಾಡಿದ. ನನ್ನ ಸಾವು ಸುಳ್ಳೆಂದು ಅವನಿಗೆ ಆಗಲೇ ಗೊತ್ತಾಗಿತ್ತು. ಅವನು ಮಾತಾಡುತ್ತಾ ''ಗುರುಗಳೇ, ಸಂಜೆ ಮೈಸೂರಿನ ಕೆಲವು ರಂಗಕರ್ಮಿಗಳು ಸೇರಿ ಒಂದು ''ಶ್ರದ್ಧಾಂಜಲಿ'' ಕಾರ್ಯಕ್ರಮ ಏರ್ಪಡಿಸಬೇಕೆಂದು ತೀರ್ಮಾನಿಸಿ ನನ್ನನ್ನೂ ಒಬ್ಬ ಮಾತುಗಾರನಾಗಿ ಆಯ್ಕೆ ಮಾಡಿದ್ದರು. ಗುರುಗಳ ಬಗ್ಗೆ ನನ್ನ ದುಃಖ ತೋಡಿಕೊಳ್ಳುತ್ತ, ನಿಮ್ಮ ಬಗ್ಗೆ ಐದಾರು ಪುಟದ ಭಾಷಣ ತಯಾರು ಮಾಡಿಕೊಂಡಿದ್ದೆ'' ಎಂದು ಹೇಳುತ್ತಿರುವಾಗಲೇ ಅವನ ಮಾತು ನಿಲ್ಲಿಸಿ... ''ಛೇ... ಐಯಾಮ್ ಸಾರಿ...'' ಪಾಪ, ನಿನಗೆ ಸಿಕ್ಕಿದ್ದ ಛಾನ್ಸ್ ಮಿಸ್ ಆಯಿತಲ್ಲೋ? ನೀವೆಲ್ಲ ನನ್ನ ಸಾವು–ವ್ಯಕ್ತಿತ್ವದ ಮಾತಾಡುವುದನ್ನು ನಾನೇ ಸಭೆಯಲ್ಲಿ ಖುದ್ದಾಗಿ ಕೂತು ಕೇಳುವ ಹಾಗಿದ್ದಿದ್ದರೆ – ಎಷ್ಟು ಚೆನ್ನ! ಹೋಗಲಿ ಬಿಡು, 'ಬೆಟರ್ ಲಕ್, ನೆಕ್ಸ್ಟ್ ಟೈಂ' ಅಂದು – ''ನೀನು ಬರೆದದ್ದು ವ್ಯರ್ಥವಾಗಬಾರದು, ನಿನ್ನ ಬರಹ ಯಾವ ತಿದ್ದುಪಡಿಗಳಿಲ್ಲದೆ ನನಗೆ ನಾಳೆಯೇ ಕೊರಿಯರ್ ಮೂಲಕ ಕಳಿಸು... ಓದಿಯಾದರೂ ಸಂತೋಷ ಪಡುತ್ತೇನೆ... ನೋಡೋ, ನನ್ನ

---

**ಟೆಲಿಗ್ರಾಫ್ ಸೇವೆಯನ್ನು ಜಗತ್ತಿಗೆ ಮೊಟ್ಟ ಮೊದಲನೆಯದಾಗಿ ಸ್ಯಾಮುಯಲ್ ಮೋರ್ಸ್ ಎನ್ನುವವನು 1844ರಲ್ಲಿ ಪರಿಚಯಿಸಿದ.**

ಬಗ್ಗೆ ಯಾರ್‍ಯಾರು ಏನು ಹೇಳುತ್ತಾರೆ – ಕೆಟ್ಟದ್ದೇನು, ಒಳ್ಳೆಯದೇನು ಅಂತ ತಿಳಿದುಕೊಳ್ಳಲು ಇದ್ದ ಒಂದು ಅವಕಾಶದಿಂದ ವಂಚಿತನಾದೆ...'' ಆಮೇಲೆ ನಾನೇ ಯೋಚನೆ ಮಾಡಿದೆ – ಸತ್ತ ಮೇಲೆ (ಅಂದ್ರೆ ನಿಜವಾಗಿ ಸತ್ತಾಗ) ಯಾವ ಸುಧಾರಣೆಗೂ ಅವಕಾಶವಿಲ್ಲ! ನಮ್ಮೆಲ್ಲಾ ಕೆಡುಕುಗಳು – ಒಳಿತುಗಳು ನಾವು ಸತ್ತ ಮೇಲೆ ನಮ್ಮೊಡನೆ ಸುಟ್ಟು/ಹೂತು ಕಣ್ಮರೆಯಾಗುತ್ತೆ.... ಆಸ್ತಿ–ಹಣ–ಮಡದಿ–ಮಕ್ಕಳು–ಒಂದಿಷ್ಟು ಮಾಡಿದ ಒಳ್ಳೆ/ಕೆಟ್ಟ ಕೆಲಸಗಳಷ್ಟೇ ಉಳಿಯುವುದು.... ಏಕೆ, ಅದೂ ಅನುಮಾನವೇ... Public Memory is short...

ಅದೇ ಸಂಜೆ ನನ್ನ ಟಿ.ವಿ. ಮತ್ತು ಸಿನಿಮಾ ಜಗತ್ತಿನ ಕೆಲವು ಗೆಳೆಯರು ನನ್ನನ್ನು ಆಹ್ವಾನಿಸಿ ''ಬನ್ನಿ – ನಿಮ್ಮ ಹೆಸರಿನಲ್ಲಿ ಒಂದು ಸಂತೋಷ ಕೂಟ ಇದೆ'' ಅಂದಾಗ ಖುಷಿಯಾಗಿ ಹೋದೆ.... Let us celebrate life...

ಏನೇ ಆಗಲಿ ಬದುಕಿರುವಾಗಲೇ 'ಸಾಯುವುದು' ಸತ್ತವನು 'ಬದುಕಿ ಬರೋದು' ಒಂದು ವಿಶಿಷ್ಟವಾದ ಅನುಭವ. ಮಾರ್ಕ್ ಟ್ವೈನ್ ಎಂಬ ಲೇಖಕನ ಬಗ್ಗೆಯೂ ಆದದ್ದು ಈ ಥರಹದ್ದೆ. ಆಗ ಅವನು ಹೇಳಿದ್ದು My death is & lightly exaggerated. ನಾನು ಸಂಬಂಧಪಟ್ಟ ಟಿ.ವಿ. ಚಾನೆಲ್ ಅವರಿಗೆ ಹೇಳಬೇಕೆಂದು ಕೊಂಡದ್ದು – ''ನಿಮಗೇಕೆ ನನ್ನ ಸಾವಿನ ಬಗ್ಗೆ ಇಷ್ಟೊಂದು ಅವಸರ?'' ನಾನು ರಂಗ ಕರ್ಮಿ... ಪರದೆ ಬಿದ್ದ ಮೇಲೆ, ಬಣ್ಣ ಅಳಿಸಿದ ಮೇಲೆ 'ಸೈಡ್‌ವಿಂಗ್ಸ್'ಗಳಿವೆ... ಕಲಾವಿದರಿಗೆ ''ಸಾವಿಲ್ಲ''! ಇರುವುದೆಂದರೆ ಮೆಲ್ಲಗೆ ಇಲ್ಲವಾದುದಷ್ಟೆ.. Leave the world with quiet dignity!!

ಸಾವು ಎಷ್ಟು Interesting ಅಲ್ವಾ? ಸಾಯುವ ಮೊದಲೇ ನಮ್ಮ ಬಗ್ಗೆ ಯಾರ್‍ಯಾರು ಏನೇನು ಹೇಳಬಹುದು. ಅನ್ನೋದನ್ನ ತಿಳಿಯುವುದರಲ್ಲಿ ಎಷ್ಟು ಮಜ ಇದೆ!! ಇಂಥಹ ಆಲೋಚನೆಗಳು ನಿರಾಶಾವಾದಕ್ಕೆ ದಾರಿಯಾಗಬಾರದು. ಸಾವು ನಿಶ್ಚಿತ, ಹಾಗೆಂದು ನಾವು ಸ್ಥಗಿತರಾಗಿ ಕೈಕಟ್ಟಿ ಕೂಡುವುದೇ? ಇಲ್ಲ, ಬದುಕಿನ ಕಲೆಯಲ್ಲಿ ನಿಷ್ಣಾತರಾಗಬೇಕು; ಅದು ಹರಿಯುವ ತೊರೆಯಾಗಬೇಕು; ನಿಂತು ಕೊಳೆತು ನಾರುವ ನೀರಾಗಬಾರದು ಎಂಬುದು ಪ್ರಾಜ್ಞರ ಮಾತು. ಕೊನೆಯೆಂಬುದು ಖಂಡಿತ; ಆದರೆ ಪರಿಪೂರ್ಣತೆಯ ಕಡೆ ಮುಖವಿಟ್ಟು ಊರ್ಧ್ವಮುಖಿಗಳಾಗಿ ಬದುಕಬೇಕು.

ಡಿ.ವಿ.ಜಿ.ಯವರ 'ಮಂಕುತಿಮ್ಮ'ದಲ್ಲಿ ''ಅಂತೊ ಇಂತೊ ಎಂತೊ ಜೀವಕಥೆ ಮುಗಿಯುವುದು; ಅಂದೊ ಇಂದೊ ಎಂದೊ ಜನುಮ ಕಳೆಯುವುದು...'' ಎಂಬ ಸತ್ಯವಾಕ್ಯವಿದೆ. ಆದರೆ ಸಾವಿನ ಚಿಂತೆಯಲ್ಲಿ ಬದುಕುವುದನ್ನು ಮರೆಯಬಾರದು. ಬದುಕು ದೊಡ್ಡದು; ಅದರ ಬಣ್ಣಗೆಡಿಸಬಾರದು; ಶ್ರದ್ಧೆಬೇಕು, ಸಾಹಸವಿರಬೇಕು, ಗುರಿಯೊಂದಿರಬೇಕು ಎನ್ನುವುದು ತಿಳಿದವರ ಮಾತು ನಿಜ, ಒಂದು ಕಡೆ ಚಿಗುರುವೆವು, ಮತ್ತೊಂದೆಡೆ ಬಾಡುವೆವು. ಡಿ.ವಿ.ಜಿ.ಯವರ ಮಂಕುತಿಮ್ಮದಲ್ಲಿ

ಸತ್ತೆನೆಂದನಬೇಡ; ಸೋತನೆಂದನಬೇಡ,
ಬತ್ತಿತೆನ್ನೊಳು ಸತ್ತ್ವದೂಟಿಯೆನಬೇಡ ॥
ಮೃತ್ಯುವೆನ್ನುವುದೊಂದು ತೆರೆಯಿಳಿತ;
ತೆರೆಯೇರು । ಮತ್ತೆ ತೋರ್ದುದು ನಾಳೆ ॥
ಮಂಕುತಿಮ್ಮ ॥

ಸಾವಿನ ಬಗ್ಗೆ ಅನೇಕ ಚಿಂತಕರು ಆಳವಾಗಿ ಯೋಚಿಸಿದ್ದಾರೆ. ಒಬ್ಬ ಚಿಂತಕ ಸಾವಿನ ಬಗ್ಗೆ ಹೀಗೆನ್ನುತ್ತಾನೆ.

''ನಾನು ಸಾವನ್ನು ದ್ವೇಷಿಸುತ್ತೇನೆ, ಹೆದರುವುದಿಲ್ಲ. ಬದುಕನ್ನು ತೀವ್ರವಾಗಿ ಪ್ರೀತಿಸುವ ನನಗೆ ಸಾವು ನಿಶ್ಚಿತವೆಂದು ಗೊತ್ತಿದ್ದೂ ಅದನ್ನು ದ್ವೇಷಿಸುತ್ತೇನೆ. ನಾನು ಬದುಕಬೇಕು; ನನಗೆ ಎಷ್ಟು ವರ್ಷಗಳ ಕಾಲ ಕ್ರಿಯಾಶೀಲನಾಗಿರಲು ಸಾಧ್ಯವೋ ಅಲ್ಲಿಯವರೆಗೂ ಜೀವಿಸಬೇಕು. ಆದರೆ ಈ ದೀರ್ಘಕಾಲಿಕ ಬದುಕು ನೋವು-ನರಳಿಕೆಯಿಂದ ದೂರವಿರಬೇಕು; ಬೇಡ ನಡೆಯಲು ಊರುಗೋಲು, ಕಣ್ಣು ಮಂಜಾಗುವುದು, ಕಿವಿ ಕೇಳಿಸದಿರುವುದು, ಕೈಕಾಲುಗಳ ನಡುಕ = ಎಲ್ಲಕ್ಕಿಂತ ಹೆಚ್ಚಾಗಿ ಇತರರು ನನ್ನನ್ನು ತಿರಸ್ಕರಿಸುವ ಹಾಗೆ.''

ಸಾವಿಗಿಂತ ಸಾವಿನ ಭಯ ಭಯಂಕರವಾದ್ದು. ಸಾಕ್ರಟೀಸ್ ಹೇಳಿದ್ದು - ''ನೀನು ಸಾಯುವ ಕಲೆಯನ್ನು ಸದಾ ಅಭ್ಯಾಸ ಮಾಡುತ್ತಿರಬೇಕು'' ಎಂದು. ಆದೇನೇ ಇರಲಿ - ನನ್ನ ಸಾವಿನ ಸುಳ್ಳು ಸುದ್ದಿ ಸಾಯುವ ಅಭ್ಯಾಸಕ್ಕೆ ನೆರವಾಯಿತೆ? ಹೌದು, ಬದುಕಿರುವುದನ್ನು - ಬದುಕಿನ ಕಲೆಯನ್ನು ಕಲಿಸಿತು!!

☆

---



ಚಿಕ್ಕಪ್ಪ ಬಲು ಆಸ್ತಿವಂತನಾಗಿದ್ದ. ಅವನಿಗೆ ಹೆಂಡ್ತಿ ಮಕ್ಕಳು ಯರೂ ಇರಲಿಲ್ಲ. ಇವನಿಗೇ ಆಸ್ತಿ ಬರೆದುಕೊಟ್ಟಿದ್ದ. ಈ ಚಿಕ್ಕಪ್ಪ ಊರಿನಲ್ಲಿ ಹುಷಾರು ತಪ್ಪಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದ. ಇವನು ಆಸ್ಪತ್ರೆಯ ಸೂಪರಿಂಟೆಂಡೆಂಟ್‌ಗೆ ನಮ್ಮ ಚಿಕ್ಕಪ್ಪನ ಬಗ್ಗೆ ಏನಾದರೂ ಒಳ್ಳೆ ಸುದ್ದಿ ಇದ್ದರೆ ತಿಳಿಸಿ ಅಂತ ಟೆಲಿಗ್ರಾಂ ಕೊಟ್ಟರೆ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಕಳಿಸಿದ ಟೆಲಿಗ್ರಾಂ ಹೀಗಿತ್ತು.

GLAD TO INFORM YOU THAT YOUR UNCLE IS SUCCESSFULLY DISCHARGED FROM I.C.U. AND IS NOW SAFE IN COLD STORAGE. PLEASE ORGANISE CREMATION AT THE EARLIEST.

# ಅನಂತೂವಿನ ಶ್ವಾನ, ಮಾರ್ಜಾಲ ಪ್ರಸಂಗ

**- ಎಚ್.ಆರ್. ಹನುಮಂತ ರಾವ್**

**ಗು**ರುಗೋವಿಂದನಗರದ ರಾಮಮಂದಿರ ರಸ್ತೆಯನ್ನು ದಾಟಿ, ಸ್ವಲ್ಪ ದೂರ ಎಡಕ್ಕೆ ನಡೆದು, ಮತ್ತೆ ಬಲಕ್ಕೆ ತಿರುಗಿದರೆ ಕಾಣಸಿಗುವ ಏಕೈಕ ಬಹು ಮಹಡಿ ಕಟ್ಟಡವೇ ಆನಂದ ವಿಹಾರ ಕ್ಲಬ್ಬಿನ ಆಶ್ರಯಧಾಮ. ನಮ್ಮ ಚಿಟಿಕೆ ಸಂಘದವರ ಆನಂದ ಧಾಮ ಹಾಗೂ ನಿತ್ಯವಿನೂತನ ಚಟುವಟಿಕೆಗಳ ಕೇಂದ್ರ. ಈ ವರದಿಗಳ ಉಗಮಕ್ಕೆ ಮೂಲವೂ ಕೂಡ. ಮೊದಲನೆ ಉಪ್ಪರಿಗೆಯ ಈಶಾನ್ಯ ದಿಕ್ಕಿಗಿರುವ ಪುಟ್ಟ ಹಜ಼ಾರವೇ ನಮ್ಮ ಗುಂಪಿನ ಮನರಂಜನಾ ಕೇಂದ್ರ. ಶಂಕರ ಸಿದ್ಧಾಂತಿಗಳ ಪೀಠವೇ ಇಲ್ಲಿಯ ವಿಶೇಷ ಕೇಂದ್ರ ಬಿಂದು. ಶ್ರಾವಣದ ಕೊನೇ ಶನಿವಾರದ ಆ ಸಂಜೆಯೂ, ಎಂದಿನಂತೆ ಸಭೆ ಸೇರಿತ್ತು.

ಸಂಜೆ ಏಳು ಗಂಟೆಯಾಗುತ್ತಿದ್ದಂತೆ ಸಿದ್ಧಾಂತಿಗಳ ಆಗಮನ. ನಮ್ಮ ಗರಡಿ ಪೈಲ್ವಾನ್ ಸೈದ್ ಮಹಮದ್ ಪೀರ್. 'ರಾಯರೆ, ನಿಮ್ಮ ಆಗಮನದ ಬಾಬ್ತು, ನಮ್ಮ ಕಪ್ಪಣ್ಣ ಅವರಿಗೆ ಸ್ವಲ್ಪ ಅಸಮಾಧಾನವಿದ್ದಂತೆ ಮುರ್ಝು ಸಮ್ಜಾತಾ' ಎನ್ನುತ್ತಾ ಮೀಸೆ ತುದಿಯಲ್ಲೇ ಸಣ್ಣದಾಗಿ ನಕ್ಕರು. 'ನೀವು ಈ ದಿನ ತಡವಾಗಿ ಬರುತ್ತೀರೆಂದು ಪೈಲ್ವಾನರೊಡನೆ ಬಾಜಿ ಕಟ್ಟಿದ್ದು, ಸೋಲಾಗಿ ಕಪ್ಪಣ್ಣಾ ಅವರಿಗೆ (ನಮ್ಮ ಆಡು ಭಾಷೆಯಲ್ಲಿ ಅವರು ಎ.ಎನ್.ಕೆ. – ಎಳೆನಿಂಬೆಕಾಯಿ) ಬೇಸರವಷ್ಟೆ!' ಎಂದು ಪ್ರೊ. ಹಂಚಿಕಡ್ಡಿಯವರು ವ್ಯಾಖ್ಯಾನಿಸಿದರು. 'ನಿಜ, ನಾನು ಅವರಿಗೆ ನಿನ್ನೆ ಸಿಕ್ಕಿ ಈ ದಿನ ತುರ್ತು ಕಾರ್ಯ ನಿಮಿತ್ತ ಕ್ಲಬ್ಬಿಗೆ ತಡವಾಗಬಹುದೆಂದು ಹೇಳಿದ್ದೆ. ಆದರೆ, ಬೇಗನೆ ಎಲ್ಲಾ ಮುಗಿದು, ತಡವಿಲ್ಲದೆ ಬಂದೆ. ಪೈಸಾ ವಸೂಲ್ ಬೇಡವೆನಿಸುತ್ತದೆ ಪೈಲ್ವಾನ್ರೆ. ಅದು ಹಾಗಿರಲಿ, ನೋಡಿ, ಈ ಬಾಜಿಕಟ್ಟುವುದು ಅಪಾಯಕಾರಿ ಮತ್ತು ಅವಮಾನಕ್ಕೂ ಕಾರಣವಾಗಬಹುದು. ನನ್ನ ಸೋದರತ್ತೆ ಮಗನ ಸಹಪಾಠಿ ಅನಂತು ಈ ರೀತಿ ದ್ವೇಷಕ್ಕಾಗಿ ಬಾಜಿ ಕಟ್ಟಿ, ಒಂದು ರಾತ್ರಿ ಪೋಲೀಸರ ಅತಿಥಿಯಾಗಿದ್ದ' ಎಂದು ಪಾನೀಯವನ್ನು ಸವಿಯುತ್ತಾ ಎಲ್ಲರ ಕಡೆ ದೃಷ್ಟಿ ಹಾಯಿಸಿದರು. 'ಅದೇನು ಸಾರ್, ಯಾಕೆ ಹೇಳಿರಲ್ಲ? ಅಂದರೆ, ಅನಂತು ನಿಮ್ಮ ಪರಂಧಾಮಯ್ಯನ ಸಹಪಾಠಿ. ಅಲ್ಲವೆ ಸಾರ್?' ಎಂದು ಪಿಲ್ಲು ಪ್ರಶ್ನಿಸಿದರು. ಅಲ್ರೀ, ಪರಂಧಾಮಯ್ಯ ಸಾರ್ಗೆ ಮಾವ. ''ಸೋದರತ್ತೆ ಮಗ ಭಾವ ಇಲ್ಲ ಭಾವಮೈದ ಆಗಬೇಕಲ್ವೇನ್ರೀ, ಅಂದಮೇಲೆ ಸಿದ್ಧಾಂತಿಗಳ ಮಾವನ ಸಹಪಾಠಿ ಹೇಗೆ ಸಾಧ್ಯ?'' ಎಂದು ಹೊಸದಾಗಿ ಸಂಶೋಧನೆ ಮಾಡಿದಂತೆ ಉಲಿದರು ಭೀಮಣ್ಣ ಗಿರಿಜಾ ಮೀಸೆ ತಿರಿಗಿಸುತ್ತಾ (ಈ ಪರಂಧಾಮಯ್ಯ ''ದೆವ್ವ ಭೂತಗಳ ಸಂಗದಲ್ಲಿ'' ವೃತ್ತಾಂತದಲ್ಲಿ ಪರಿಚಯವಾಗಿರಬಹುದಲ್ಲವೆ?). 'ಅದು ಸರಿ. ನನ್ನ ಭಾವ ಸುಮತೀಂದ್ರ ಹಾಗು ಅನಂತು ಇಂಜಿನೀಯರಿಂಗ್ ವ್ಯಾಸಂಗ ಒಂದೇ ಕಾಲೇಜಿನಲ್ಲಿ ಮಾಡಿದವರು' – ಮುಂದುವರಿಸಿದರು ಸಿದ್ಧಾಂತಿಗಳು – 'ಡಿಗ್ರೀ ಮುಗಿಸಿ, ನನ್ನ ಭಾವ ಅಮೇರಿಕಾಗೆ ಹೋಗಿ ಅಲ್ಲೇ ನೆಲಿಸಿದ್ದಾರೆ. ಆಗಾಗ್ಗೆ ಇಲ್ಲಿಗೆ ಬರುವುದುಂಟು. ಅನಂತು ಮುಂದೆ ಉದ್ಯಮಿಯಾಗಿ ಕಾರ್ಪೊರೇಟ್ ಬಳಗ ಸೇರಿದ. ಹೈಸ್ಕೂಲಿನಲ್ಲಿ ಅನಂತು ಜೊತೆಜೊತೆಗೆ ಸದಾ

ಇರುತ್ತಿದ್ದವರೆಂದರೆ ಆ ಊರಿನ ಪಂಚಾಯ್ತಿ ನಂಬ್ರು ಓಬ್ಲೇಶಪ್ಪನ ಮಗ ಸದಾನಂದ ಹಾಗೂ ಶಾನುಭೋಗರ ವಂಶದ ನಿರ್ಭೀತ ಪಟ್ಟಾಭಿಯ ಒಬ್ಬನೇ ಮಗ ವೆಂಕಟಾಚಲಯ್ಯ. ಸಿದ್ಧಾಂತಿಗಳ ಗ್ಲಾಸು ಖಾಲಿಯಾಗಿದ್ದನ್ನು ನೋಡಿ ಬೇರರ್ ವಾಸು ಕೂಡಲೇ ತುಂಬಿಸಿ, ಆನತಿ ದೂರದಲ್ಲಿ ನಿಂತ. ಎಲ್ಲೆಲ್ಲೂ ಮೌನ.

'ನೋಡಿ, ಮಾನವನ ಸಹಜ ಗುಣ – ದೌರ್ಬಲ್ಯವೆನ್ನಿ. ಸಹಾಯ ಪಡೆದಿದ್ದನ್ನು ಸುಲಭವಾಗಿ ಮರೆತರೂ, ಪಟ್ಟ ಅವಮಾನವನ್ನು ಮಾತ್ರ ಸಹಿಸುವುದೂ ಇಲ್ಲ, ಮರೆತುಬಿಡಲೂ ವಲ್ಲ. ಸಿದ್ಧಾಂತಿಗಳು 'ನಾನು ಹೇಳಬಯಸಿದ್ದು ದ್ವೇಷ, ಅಸೂಯೆ ಬಗ್ಗೆ ಹೊರತು ಯಾವ ಪಾತ್ರದ ಬಗ್ಗೆಯೂ ಅಲ್ಲ' – ಮುಂದುವರೆಸಿದರು – 'ಸದಾನಂದನಿಗೆ ವಿದ್ಯೆ ಕಲಿಸಲು ಪಟ್ಟ ಪ್ರಯತ್ನಗಳೆಲ್ಲಾ ವ್ಯರ್ಥವಾಗಿ, ಅವನಪ್ಪನ ಹಣ, ದೌಲತ್ತು, ವಶೀಲ್‌ಬಾಜಿ ಮುಖೇನ ರಾಜಕೀಯದಲ್ಲೇ ಬೇರು ಬಿಟ್ಟ, ಆ ಊರಿನ ಜನಗಳಿಗೆ ಕೆಟ್ಟಕಾಲ ಕೂಡಿ ಬಂದು, ಒಂದು ದಿನ ಎಮ್ಮೆಲ್ಲೆಯಾಗಿಯೂ ಬಿಟ್ಟ. ಅನಂತು ಉದ್ಯಮಿಯಾಗಿ ರಾಜಕಾರಿಣಿಗಳ ಸಹವಾಸ ಅನಿವಾರ್ಯವಾಗಿ ಮತ್ತೆ ಅವನ, ಅನಂತುವಿನ ಸಮಾಗಮ ಷಹರಿನಲ್ಲಿ ಆಗುತ್ತಿತ್ತು. ವೆಂಕಟನು ಮಾತ್ರ ಉತ್ತಮ ವಿದ್ಯಾರ್ಥಿಯಾಗಿ, ಡಿಗ್ರಿಗಳನ್ನು ಪಡೆದು, ಅನೇಕ ವರುಷಗಳ ನಂತರ, ಅದೇ ಸ್ಕೂಲಿಗೆ ಹೆಡ್ಮಾಸ್ತರನಾಗಿ, ಉನ್ನತ ಅಧಿಕಾರಿಯೂ ಆಗಿ, ಊರಿನವರಿಗೆಲ್ಲಾ ಪ್ರಿಯನಾಗಿ ನಿವೃತ್ತಿಯನ್ನು ಪಡೆಯುವ ದಿನವೂ ಬಂದೇಬಿಟ್ಟಿತು. ಊರಿನ ಸಮಸ್ತರೆಲ್ಲಾ ಹಳೆ ವಿದ್ಯಾರ್ಥಿಯಾಗಿ, ಜನಪ್ರತಿನಿಧಿಯೂ ಆಗಿದ್ದ ಸದಾನಂದನ ಅಧ್ಯಕ್ಷತೆಯಲ್ಲಿ ಸನ್ಮಾನಿಸಲು ಮತ್ತು ಸ್ಕೂಲಿನ ಮುಂಭಾಗದಲ್ಲಿ ಸದಾನಂದನಿಂದಲೇ ವೆಂಕಟನ ವರ್ಣಚಿತ್ರದ ಕಟೌಟನ ಅನಾವರಣಕ್ಕೆ ಮುಹೂರ್ತವನ್ನು ನಿಗದಿಪಡಿಸಿದರು. ಅನಂತುವಿಗೆ ವಿಶೇಷ ಆಹ್ವಾನ.'

ಷಹರಿನಲ್ಲಿದ್ದ ಅನಂತ್‌ಗೆ ಸದಾನಂದನಿಂದ ಒಂದು ರಾತ್ರಿ ಫೋನ್ ಬಂತು ''ಅನಂತೂ ದೇರ್? ನಾನು ಎಮ್ಮೆಲ್ಲೆ ಸದಾ ಕಣ್ಲೆ,'' ''ಗೊತ್ತಾಯ್ತು, ಫೋನ್ ಕಿವಿಯಿಂದ ದೂರ ಇಟ್ಕಂಡ್ ಮಾತಾಡ್ಲೆ, ಬಡ್ಕೊಬ್ಯಾಡ, ಏನ್ ವಿಷಯ ಈಟೋತ್ನಾಗ್ಗೇ?'' ''ಒಳ್ಳೆ ಗರಿಗರಿಯಾದ ಷರ್ಟು, ಪ್ಯಾಂಟು ಐತಾ, ಹಾಗೇನೂವೆ ಕಲಾಪತ್ತಿನ ಶಾಲು ಎರಡು, ಬುಕೆ ಎಲ್ಲಾ ರೆಡಿ ಮಾಡು,'' ''ಒಂದಲ್ಲ ನಾಲ್ಕು ಜೊತೆ ಇವೆ, ಶಾಲು, ಬುಕೆ ನಿನಗೆ ಯಾಕ್ಲೆ?'' ''ಹಾಗೆ ಎರಡು ಫಾರಿನ್ ಸ್ಪೆಷಲ್ ದೊಡ್ಡದು, ಎಲ್ಲಾ ಹಾಕ್ಕೊಂಡು ನಿನ್ನ ಹೊಂಡಾದಲ್ಲಿ ನಾಳೆ ಇಲ್ಲಿಗೆ ಬಂದ್ಬಿಡು, ಮರ್ಯಾದೆ ಮಾಡೊ ಟೈಂ ಬಂದದೆ,'' ''ನಿನಗ ಮರ್ಯಾದೆ? ಅದ್ಬೇರೆ ಕೇಡು, ಅದೇನ್ ಕಣಪ್ಪ, ಬಲೇ ಒಗಟ್ನಾಗ ಮಾತಾಡ್ತೀ?'' ''ಇಲ್ಲೀಗೆ ಬಂದಮೇಲೆ ತಿಳಿಯುತ್ತೆ, ಮರೀಬ್ಯಾಡ ಎರಡು ಸ್ಕಾಚ್‌ಸ್ಪೆಷಲ್'' – ಆ ಕಡೆ ಫೋನ್ ಕಟ್ ಆಯ್ತು. ಒಂದಿನ ಸದಾನಂದ ಮತ್ತು ಅನಂತು ಮದಿರೆಯ ಸೇವನೆಯಲ್ಲಿದ್ದಾಗ, ಈ ವಿಷಯ ಚರ್ಚೆಗೆ ಬಂತು – ಮಾತು ಮುಂದುವರಿಸಿದರು ಸಿದ್ಧಾಂತಿಗಳು – 'ಇದೀಗ ಸರಿಯಾದ ಸಮಯ. ನಿನಗೆ ತಾಕತ್ತಿದ್ದರೆ, ಸೇಡು ತೀರಿಸ್ಕೊ' ಎಂದು ಅನಂತು ಸದಾನಂದನಿಗೆ ಸವಾಲೆಸದ. 'ನಿನಗೂ ದಂ ಇದ್ದರೆ, ನೀನೆ ಆ ಕೆಲಸ ಮಾಡು, ನಾನು ಎಮ್ಮೆಲ್ಲೆ ಎನ್ನೋದು ಮರೀಬ್ಯಾಡಾ, ಇಲ್ಲದಿದ್ರೆ ನಾನು ಯಾವಾಗ್ಲೋ ಈ ಕೆಲ್ಸ ಮಾಡಿ ತೋರಿಸ್ತಿದ್ದೆ. ನಾನ್ ಗಂಡೆದೆಯವ್ನು ಲೇ, ನೀನೂ ನನ್ನಷ್ಟೇ ಏಟು ತಿಂದಿದ್ದೀ, ಮರೀಬ್ಯಾಡ ಅಣ್ಣಯ್ಯ' ಎಂದು ಮರಳಿ ಸ್ನೇಹಿತನಿಗೇ ತಿರುಮಂತ್ರ

ಹೇಳಿದ. ಆ ವೇಳೆಗೆ ಇಬ್ಬರೂ ಸಾಕಷ್ಟು ಮದಿರೆಯನ್ನ ತುಂಬಿಸಿದ್ದರು. ಅನಂತು ಸದಾನಂದನ ಮಾತು ಕೇಳಿ ಹಠಕ್ಕೆ ಬಿದ್ದ. ಅವನು ಇವನಿಗೆ ಪುಕ್ಲ ಎಂದ, ಇವನು ಅವನ್ನ ಹೆಣ್ಣೆಕ್ಸ್ ಎಂದ. ಇಬ್ಬರು ಧನವಂತರು ಕುಡಿದಾಗ ಬಾಜಿಗೆ ಬಿದ್ದರೆ ಏನಾಗಬಹುದೋ, ಅದೇ ಆಯಿತು. 'ಸರಿ, ಅವನ್ನ ನಾನು ನೋಡ್ಕೊತೀನಿ. ತುಂಬಿದ ಸಭೇಲಿ, ಎಷ್ಟು ಬೆಟ್ ಕಟ್ತೀ? ಸ್ಕೆಚ್ ಹಾಕು ಮೊದಲು' ಎಂದ.

ಇಲ್ಲಿ ನಾನು ಅನಂತು ಬಗ್ಗೆ ಒಂದು ಮಾತು ಹೇಳಲೇಬೇಕು. ಅವನು ಒಬ್ಬನೇ ಇದ್ದಾಗ, ಸ್ವಭಾವತಃ ಪುಕ್ಕಲ. ನಾಯಿಗಳನ್ನು ಕಂಡರಂತೂ ಮೈಲಿ ದೂರ ಹಾರುವವ. ಒಂದು ಬಾರಿ, ಹೆಂಡತಿಯೊಡನೆ ಆಕೆಯ ಸ್ನೇಹಿತಳ ಮನೆಗೆ ಹೋಗಬೇಕಾಯ್ತಂತೆ. ಗೇಟನ್ನು ನೂಕಿ, ಒಳಗೆ ಹೋಗಲು ಪ್ರಯತ್ನಿಸುತ್ತಿದ್ದಂತೆ, ಒಳಗಿಂದ ಕರ್ಕಷವಾಗಿ ಬೊಗಳುತ್ತಾ ಬೇಟೆ ನಾಯಿಯೊಂದು ಇವನನ್ನು ಹಿಡಿಯಲೆಂದೇ ಛಂಗನೇ ಹಾರಿ ಬಂದು, ಇವನ ಕೈಯಲ್ಲಿದ್ದ ಕೊಡೆಯನ್ನು ಕಚ್ಚಿ ಹಿಡಿಯಿತು, ಅವನ ದೇಹ ಇನ್ನೂ ಗೇಟಿನಾಚೆಗೇ ಇದ್ದುದರಿಂದ. ಇವನಿಗೆ ಎಲ್ಲಿಲ್ಲದ ಭಯ ಮೂಡಿ, ಸ್ಪುಟ್ನಿಕ್ ವೇಗದಲ್ಲಿ ಓಡಲು ಪ್ರಯತ್ನಿಸಿದ್ದಾಗಲೇ ಅವನ ಹೆಂಡತಿ ಪರಿಸ್ಥಿತಿಯನ್ನು ಕೂಡಲೇ ಅರಿತು, ಗೇಟು ಪೂರ್ತಿ ತೆಗೆಯದಂತೆ, ತನ್ನ ಶಕ್ತಿಯೆಲ್ಲವನ್ನೂ ವಿನಿಯೋಗಿಸಿ ಭದ್ರ ಮಾಡಿದಳು. ನಾಯಿಯ ಆರ್ಭಟ ಕೇಳಿ ಕೊನೆಗೂ, ನಾಲ್ಕೈದು ನಿಮಿಷಗಳ ನಂತರ – ಅವರಿಗೆ ಆಗಿನ ಸ್ಥಿತಿಯಲ್ಲಿ ನಾಲ್ಕೈದು ಗಂಟೆಗಳೆನ್ನಿಸಿತ್ತಂತೆ – ಒಬ್ಬ ವೃದ್ಧ – ಅದರ ಮಾಲೀಕನೊ ಯಾರೊ ಬಂದು ಅಲ್ಲಿಂದಲೇ 'ಯಾರು, ನೀವು, ಏನು ಬೇಕು?' ಕೂಗಿದ. ನನ್ನ ಹೆಂಡತಿ ಸ್ನೇಹಿತೆಯನ್ನ ನೋಡಬೇಕೆಂದಳು. ನಾಯಿಯನ್ನು ಕಟ್ಟಿಹಾಕಿ, ಬಾಯಿ ಮುಚ್ಚಿಸಿ, ವಿಚಾರಿಸದೆ 'ನೀವು ಯಾರು? ಏನಾಗಬೇಕಿತ್ತು?' ಎಂದೆಲ್ಲಾ ತಲೆಹರಟೆಯ ಮಾತಾಡಿದ. 'ನಾನು ಅವಳು ಒಟ್ಟಿಗೇ ಓದಿದವರು, ಮಗನ ಮದುವೆಗೆ ಕರೆಯಲು ಬಂದೆವು, ಇದ್ದಾಳ?' 'ಇಲ್ಲ ಅವಳು ಮಕ್ಕಳ ಜೊತೆ ಪಿಕ್ನಿಕ್ ಹೋಗಿದ್ದಾಳೆ, ಮತ್ತೆ ಫೋನು ಮಾಡಿ ಬನ್ನಿ.' ನನ್ನ ಹೆಂಡತಿಗೆ ನಖಶಿಖಾಂತ ಕೋಪ ಬಂತು ಈ ಮುದಿಯನ ಮಾತಿಗೆ, 'ಬಿಡಿ, ಸುಮ್ನೆ ತೊಂದರೆ ಕೊಟ್ಟೆ' ಎಂದು ಕೂಗಿ ಹೇಳಿ, ಹೇಗೋ ನಾಯಿಯಿಂದ ತಪ್ಪಿಸಿಕೊಂಡು, ಹರಿದ ಕೊಡೆ ಸಮೇತ ವಾಪಸ್ಸು ಬಂದಿದ್ದರಂತೆ.

ಸಿದ್ಧಾಂತಿಗಳು ಮುಂದುವರೆಸಿದರು 'ನೋಡು ಅನಂತು, ಆ ಸಭೆಯಲ್ಲಿ ವೇದಿಕೆಯ ಮೇಲೆ ನನ್ನ ಜೊತೆಗೆ ಬೇರೆ ಬೇರೆ ಮಂದಿ ಕೂರ್ತಾರೆ. ವೆಂಕಟನ ಕಟೌಟ್ನ ಬರೆಸೋ ಕೆಲಸ ನನ್ಗೆ ತಗಲಾಕವ್ರೆ. ಸಭೆಗೆ ಹಿಂದಿನ ದಿನ ರಾತ್ರಿ 10 ಗಂಟೆಗೆ ರೆಡಿಯಾಗ್ತದೆ, ಅಲ್ಲಿಂದ ಸ್ಕೂಲಿನ ಆವರ್ಣಕ್ಕೆ ತಂದು, ಕ್ಯಾನ್ವಾಸ್ ಬಟ್ಟೆನಾಗ ಮುಚ್ಚಿಡಕ್ಕೆ ಅರೇಂಜ್ ಮಾಡಿವ್ನಿ. ಅಲ್ಲಿಂದ ಮುಂದಕ್ಕೆ ನಿನ್ಕೆಲಸ. ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಸಭೆ ಸೇರಿದ ಮೇಲೆ, 10.30ಕ್ಕೆ ನಾನು ಕಟೌಟ್‌ನ ಹೊದಿಕೆ ತೆಗೆದು ಅನಾವರಣ ಮಾಡ್ಬೇಕು, ಆವಾಗ ನಿನ್ನ ಕೆಲ್ಸದ ರಿಸಲ್ಟ್ ತಿಳೀತದೆ. ಅದ್ಕೆ ನಿನ್ಗೆ ಸ್ಪೇರ್ ಬಟ್ಟೆ ತಗೊಂಬಾ ಅಂತ ಹೇಳಿದ್ದು.' ಸನ್ಮಾನದ ಹಿಂದಿನ ರಾತ್ರಿ ಹತ್ತುಗಂಟೆ ನಂತರ ಅನಂತು ಉಳ್ಕೊಂಡಿದ್ದ ಹೋಟೆಲ್ನಿಂದ ಯಾರ್ಗೂ ಗೊತ್ತಾಗ್ದಂತೆ, ಒಬ್ಬನೇ ಸ್ಕೂಲಿನ ಆವರಣಕ್ಕೆ ಹೋಗಿ, ಸಮಯ ನೋಡಿ, ತನ್ನನ್ನು ಯಾರು ಗುರ್ತು ಹಿಡಿಯದಂತೆ ಜೊತೆಗಿದ್ದ ಬೇರೆ ಬಟ್ಟೆ ಧರಿಸಿ ವೆಂಕಟನ ಕಟೌಟ್ಗೆ ಪೈಂಟನ್ನು ಸಾಕಷ್ಟು ಬಳಿದು, ಧರಿಸಿದ್ದ ಬಟ್ಟೆಯನ್ನು ಅಲ್ಲೇ ಬಿಟ್ಟು, ವಾಪಸ್ ತನ್ನ ಹೋಟೆಲ್ ಸೇರಿಕೊಳ್ಳಬೇಕಾಗಿತ್ತು. ನಮ್ಮ ಅನಂತು ಕುಡಿಯದೆ

ಇದ್ದಿದ್ದರೆ, ಈ ದುಃಸಾಹಸಕ್ಕೆ ಒಪ್ಪಿಕೊಳ್ಳುತ್ತಿದ್ದುದು ಅನುಮಾನವೆ. ಕುಡಿದು ತೂರಾಡುವ ವೇಳೆ ದ್ವೇಷದ ಕಿಡಿಗೆ ಆಹುತಿಯಾಗಿ, ಬಾಜಿಗೆ ಸಾಕಷ್ಟು ದೊಡ್ಡ ಮೊತ್ತವನ್ನೇ ಕಟ್ಟಿ ಗಾಳಕ್ಕೆ ಬಿದ್ದವ. ಈಗ ಬೇರೆ ದಾರಿಯೇ ಇರಲಿಲ್ಲ. ಆ ರಾತ್ರಿ, ಹತ್ತು ಗಂಟೆಗೆ ಸರಿಯಾಗಿ ಹೋಟೆಲಿನಿಂದ ಖಾಕಿ ಬಟ್ಟೆ ಮತ್ತು ಟೋಪಿಯೊಂದಿಗೆ ಹೊರಟ. ಸ್ಕೂಲಿನ ಬಳಿ ಬಂದು ಕಟೌಟ್ ಸಿದ್ಧವಾಗಿದ್ದನ್ನು ನೋಡಿದ. ಸುತ್ತಮುತ್ತ ಯಾರೂ ಇಲ್ಲದಿರುವುದನ್ನು ಖಾತರಿ ಮಾಡಿಕೊಂಡ ಅನಂತು ಕಟೌಟ್‌ನ ಹಿಂಬದಿಗೆ ಬಂದು, ತಾನು ತಂದಿದ್ದ ಬಟ್ಟೆ ಹಾಗು ಟೋಪಿಯನ್ನು ಧರಿಸಿ ತನ್ನ ಪಾಲಿನ ಕೆಲಸ ನಿರ್ವಹಿಸಲು ಆರಂಭಿಸಿದ. ಹೇಗಾದರೂ ಜೊತೆಗೆ ಇರಲಿ ಎಂದು ಚಳಿಗೆ ಮತ್ತು ಭಯವನ್ನು ಹತ್ತಿಕ್ಕಲು ತಂದಿದ್ದ ವಿಸ್ಕಿಯನ್ನು ಸ್ವಲ್ಪ ಸುರಿದುಕೊಂಡ. ಚಿತ್ರದಲ್ಲಿ ವೆಂಕಟನ ಮೈ ಬಣ್ಣ ಅವನನ್ನೇ ಗುರ್ತು ಹಿಡಿಯಲಾರದಷ್ಟು ವಿಕಾರವಾಗಿಸಿತ್ತು. ದ್ವೇಷ ಸಾಧಿಸಿದ್ದಲ್ಲದೆ ಪಣವನ್ನೂ ಗೆದ್ದೆನೆಂಬ ಖುಷಿಗೆ ಇನ್ನಷ್ಟು ವಿಸ್ಕಿ ಸುರಿದುಕೊಂಡ. ತೊಟ್ಟಿದ್ದ ಖಾಕಿ ವಸ್ತ್ರ ಬಿಚ್ಚಿಟ್ಟು, ತನ್ನ ಸ್ವಂತ ಉಡುಪನ್ನು ಧರಿಸಿದ. ಯಾವ ನರಪ್ರಾಣಿಯೂ ಅಲ್ಲಿಗೆ ಬರದಿದ್ದುದು ಅವನಿಗೆ ಹುಚ್ಚು ಧೈರ್ಯ ಬಂದಂತಾಗಿ, ಹೊರಡುವ ತಯಾರಿ ಬಿಟ್ಟು, ಎಡ್ಮಂಡ್ ಹಿಲರಿ ಹಿಮಾಲಯ ಪರ್ವತವನ್ನೇರಿದಷ್ಟೇ ಸಂತೋಷದಿಂದ ಅಲ್ಲಿಯೇ ಇದ್ದ ಕಲ್ಲಿನ ಮೇಲೆ ಕೂತು ಇನ್ನಷ್ಟು ಸುರಿದುಕೊಂಡ.

ಅನಂತುವಿಗೆ ಕುಡಿದ ಮಂಪರಿನಿಂದ ಹೊರ ಬಂದು, ತಾನು ಇದ್ದ ಸ್ಥಳ ಪೋಲಿಸ್ ಸ್ಟೇಷನ್‌ನ ಒಂದು ಮೂಲೆಯ ಬೆಂಚಿನಮೇಲಿದ್ದುದು ಗೊತ್ತಾದಾಗ, ಜಂಘಾಬಲವೇ ಉಡುಗಿಹೋಯಿತು. ಅಲ್ಲಿದ್ದ ಪೇದೆಯೊಬ್ಬನನ್ನು ಅಲ್ಲೇಕೆ ತನ್ನನ್ನ ಕರೆತಂದಿರಿ ಎಂದು ಕೇಳಿದ. 'ಏನ್ ಸ್ವಾಮಿ ತಾವು ದೊಡ್ಮನುಷ್ಯರು ರಸ್ತೆನಾಗೆ ಎದ್ವಾತದ್ವಾ ಕುಡಿದು ಓಡೋಡಾದಾ. ಯಾರೊ ಕೆಟ್ಟ ಮಂದಿ ಆ ಕಟೌಟ್ಗೆ ಬಣ್ಣ ಬಳಿದು ಹೊಲಸು ಮಾಡ್ಬಿಟ್ಟವ್ರೆ, ತಾಳಿ ನೀವು ಸರಿಯಾಗ್ತಾ ಇದ್ದಂಗೆ, ನಿಮ್ಮ ಹೋಟೆಲ್ಗೆ ಬಿಟ್ಬಿಟ್ ಬರಾಕೆ ದೊಡ್ಡ ಸಾಹೇಬ್ರಿಂದ ಫೋನ್ ಬಂದಾಯ್ತು. ಎದ್ದೇಳಕ್ಕಾಯ್ತದಾ ಸಾರ್?' ಕಟೌಟ್ಗೆ ಇವನ್ದೇ ಕೆಲ್ಸ ಅಂತ ಪೋಲಿಸರಿಗೆ ಅನುಮಾನವಿದ್ದರೂ, ಇವನು ಕುಡಿದ ಮತ್ತಿನಲ್ಲಿ ಎಮ್ಮೆಲ್ಲೆ ಹೆಸ್ರು, ಫೋನ್ ನಂಬರ್ ಬಡಬಡ್ಸಿದ್ದು ಕೇಳಿ, ಸದಾನಂದನ್ಗೆ ವಿಷಯ ಹೋಯ್ತು. ಆ ಕೂಡ್ಲೆ, ಅವನು ಇದನ್ನ ಹಾಗೇ ಪೋಲಿಸರ್ಗೇ ಬಿಟ್ಟರೆ ಇವನ ಬುಡಕ್ಕೇ ಅನಂತು ತಂದು ಎಮ್ಮೆಲ್ಲೇ ಹೆಸರಿಗೇ ಬಣ್ಣ ಬಳಿಯೋದು ಗ್ಯಾರಂಟೀ ಅಂತ ತಿಳಿದ. 'ವೆಂಕಟನ ಅಭಿಮಾನಿ' ಎಂತೆಲ್ಲಾ ಹೇಳಿ ಇವ್ನು ನಾಯಿಗೆ ಹೆದರ್ಕೊಂಡು ಆ ಕಟೌಟ್ನ ಬಳಿ ಬಂದವನು ಅಷ್ಟೇ ಎಂದು ಪೊಲೀಸರಿಗೆ ಕಥೆ ಕಟ್ಟಿದ. ಆ ತಕ್ಷಣ ಅನಂತೂನ ಹೋಟೆಲ್ಗೆ ಕಳ್ಸಿ , ಸಭೆ ಪ್ರಾರಂಭಕ್ಕೆ ಮುಂಚೆಯೇ ಊರಿಗೆ ಸಾಗಹಾಕಿದ. ಮಾರ್ನೆ ದಿನ ಸಭೆಯಲ್ಲಿ ಕಟೌಟು ಅನೇಕ ಕಾರಣಗಳಿಂದಾಗಿ ಪೂರ್ಣವಾಗಿಲ್ಲ ಅಂತ ನಿರೂಪಕರಿಂದ ಹೇಳ್ಸಿ (ಅವರೂ ಇದೇ ಬಾಬ್ತೂ ಅಂತ ಹೇಳಬೇಕಾಗಿಲ್ಲವಷ್ಟೇ) ವೆಂಕಟನಿಗೆ ಸನ್ಮಾನ ಸಮಾರಂಭದಲ್ಲಿ ಹೊಗಳಿ ಹೊಗಳಿ, ಅಟ್ಟಕ್ಕೇರ್ಸಿ, ನೀರಸ ವಾತಾವರಣದಲ್ಲಿ, ಕಾರ್ಯಕ್ರಮ ಮುಗಿಸಿಕೊಂಡನಂತೆ.

ಕ್ಲಬ್ಬಿನಲ್ಲಿ ಎಲ್ಲೆಡೆ ಮೌನ. ರಾತ್ರಿ ಸರಿಹೊತ್ತಾಗಿ, ಸದಸ್ಯರು ಒಬ್ಬೊಬ್ಬರೇ ಟೇಬಲ್ಲು, ಗ್ಲಾಸುಗಳನ್ನು ಬಿಟ್ಟು, ಅವರವರ ಮನೆಯ ದಾರಿ ಹಿಡಿದರು.

☆

# ಮಗನಿಗೆ ನಾಯಿ ಮರಿ ಕಚ್ಚಿದಾಗ.....

**- ಯಶವಂತ ವಾಜಂತ್ರಿ, ರಬಕವಿ.**

**ಸು**ಮ್ಮನಿದ್ದ ನಾಯಿ ಕುನ್ನಿಗೆ ಕಲ್ಲು ಒಗೆಯದೇ ನನ್ನ ದೊಡ್ಡ ಮಗ ನಾಯಿಕುನ್ನಿಯಿಂದ ಕಚ್ಚಿಸಿಕೊಂಡ. ಬಿಸ್ಕೀಟು ತಿನ್ನಿಸಲು ಹೋಗಿದ್ದಕ್ಕೆ ಅದು ಕಚ್ಚಿತ್ತು. ನಾಯಿ ಎಂದರೆ ಅದೇನು ದೊಡ್ಡ ನಾಯಿಯಾಗಿರಲಿಲ್ಲ. ನಾವೇ ಸಾಕಿದ್ದ ಸಣ್ಣ ಕುನ್ನಿ. ಅದು ಕಚ್ಚಿ ದೊಡ್ಡ ಗಾಯವೂ ಆಗಿರಲಿಲ್ಲ. ಸುಮ್ಮನೆ ಸ್ವಲ್ಪ ಗೀರಿದಂತಾಗಿತ್ತು. ಸ್ವಲ್ಪ ರಕ್ತ ಬಂದಿತ್ತು. ಅವನನ್ನು ದವಾಖಾನೆಗೆ ಕರೆದು ತೋರಿಸಿ ಒಂದು ಟಿ.ಟಿ.ಇಂಜಕ್ಷನ್ ಮಾಡಿಸಿದೆ. ಇಲ್ಲಿಗೆ ಈ ವಿಷಯ ಕ್ಲೋಜ್ ಮಾಡಿದ್ದರೆ ಈ ಬಗ್ಗೆ ಬರೆಯುವ ಪ್ರಮೇಯವೇ ಬರುತ್ತಿರಲಿಲ್ಲ. ಬೇರೆ ಜಿಲ್ಲೆಯಲ್ಲಿ ನೌಕರಿ ಮಾಡುತ್ತಿರುವ ನನ್ನ ಹೆಂಡತಿಗೆ ವಿಷಯ ಹೇಳಿದೆ.

''ಹೌದ್ಯಾ ವಿಕ್ರಮ್ ಗ ಹುಷಾರ್ ಅಂತ ಹೇಳ್ರಿ'' ಎಂದಳು.

ಮರುದಿನ ನಾನು ಇನ್ನೂ ಹಾಸಿಗೆಯಿಂದ ಎದ್ದಿರಲಿಲ್ಲ. ನನ್ನ ಮೊಬಾಯಿಲ್ ಬಡಿದುಕೊಳ್ಳತೊಡಗಿತು. ಇದು ನನ್ನವಳಿಂದಲೇ ಬಂದ ಕರೆ ಎಂದು ಅದರ ರಿಂಗ್ ಟೋನ್‌ದಿಂದಲೇ ಗೊತ್ತಾಯಿತು. ಬೇರೆ ಯಾವುದಾರೂ ಫೋನ್ ಬಂದಿದ್ದರೆ ಸ್ವಿಚ್ ಆಫ್ ಮಾಡಿ ಇನ್ನಷ್ಟು ಮುಸುಕು ಹಾಕಿ ಮಲಗುತ್ತಿದ್ದೆ. ಆದರೆ ಈ ಕರೆಯನ್ನು ಸ್ವೀಕರಿಸದಿದ್ದರೆ ಹೇಗೆ? ಲಗುಬಗೆಯಿಂದ ಫೋನನ್ನು ಕೈಗೆತ್ತಿಕೊಂಡೆ. ಬಂದ್ ಮಾಡಿ ನಾನೇ ಪುನಃ ರಿಂಗ್ ಮಾಡಿದೆ. ಇದು ನಾನು ನನ್ನವಳಿಗೆ ಮೊಬಾಯಿಲ್ ಕೊಡಿಸಿದಾಗಿನಿಂದಲೂ ನಡೆದುಕೊಂಡು ಬಂದ ರೀತಿ.

''ಹಲೊ ಏನಾತು'' ಎಂದೆ.

''ವಿಕ್ರಮಗ ಇಂಜೆಕ್ಷನ್ ಮಾಡಿಸಿದ್ರಿ?'' ಪ್ರಶ್ನೆ ಸರಳವಾಗಿತ್ತು.

''ಹೌದು ಮಾಡಿಸಿದ್ನಿ'' ನಾನೂ ಸರಳವಾಗಿಯೇ ಹೇಳಿದೆ.

''ಯಾವ ಡಾಕ್ಟರ್ರಿಗೆ ತೋರಿಸಿದ್ರಿ?'' ಎಂದಳು. ನಾನು ಡಾಕ್ಟರರ ಹೆಸರು ಹೇಳಿದೆ. ಅವಳು ಸುಮ್ಮನಾದಳು.

ಮಧ್ಯಾಹ್ನ ಮತ್ತೆ ಫೋನ್ ರಿಂಗಾಯಿತು. ಪುನಃ ನಾನು ಫೋನ್ ಬಂದ್ ಮಾಡಿ ಮತ್ತೆ ಹಚ್ಚಿದೆ.

''ಹಲೊ'' ಎಂದಳು.

''ಏನು'' ಎಂದೆ.

''ವಿಕ್ರಮಗ ಆರ ಇಂಜೆಕ್ಷನ್ ಮಾಡಸಬೇಕ ಅಂತ ನೋಡ್ರಿ'' ಎಂದಳು.

---

**ಹಳ್ಳಿಗಳಲ್ಲಿ ಟೆಲಿಗ್ರಾಮನ್ನು ಸಾವಿನ ಧೂತ ಅಂತ ಕರೆಯುತ್ತಿದ್ದರು.**

''ಹುಚ್ಚ ನಾಯಿ ಕಡದ್ರ ಆರ ಇಂಜೆಕ್ಷನ್ ಮಾಡಸ್ತಾರ, ನಮ್ಮ ನಾಯಿ ಕುನ್ನಿಗೆ ಏನ ಹುಚ್ಚ ಹಿಡದೈತೇನ? ಮೇಲಾಗಿ ನಾಯಿ ಕುನ್ನಿ ಕಡಿದೇಯಿಲ್ಲ, ಸ್ವಲ್ಪ ಗೆರಿ ಮೂಡಿದಂಗ ಆಗೇತಿ'' ಎಂದೆ.

''ರಕ್ತ ಬಂದೈತಿಲ್ರಿ?'' ಮತ್ತೊಂದು ಪ್ರಶ್ನೆ.

''ಸ್ವಲ್ಪ ಬಂದೈತಿ'' ಎಂದೆ.

''ನೀವು ಮನಸ್ಯಾರ ಅದೀರೊ ಮತ್ತೇನರ ಅದಿರೊ?'' ಧ್ವನಿ ಖಾರವಾಗಿತ್ತು. ನಾನು ತೊದಲಿದೆ.

''ನಮ್ಮ ಸಾಲ್ಯಾಗ ಸ್ವಲ್ಪ.... ಗಾಯ್ ಆಗಿ, ರಕ್ತ..... ಬರದಿದ್ರೂ ಇಂಜೆಕ್ಷನ್ ಮಾಡಿಸ್ಯಾರ. ನೀವು ರಕ್ತ ಬಂದೈತಿ ಅಂತೀರಿ, ಇಂಜೆಕ್ಷನ್ ಮಾಡ್ಸಾಂಗಿಲ್ಲಾ? ನೀವು ಹುಡುಗನ್ನ ಎಲ್ಲ್ಯರ ಸಾಯ್ ಹೊಡದೀರಿ. ಮೊದಲ ಹೋಗಿ ಇಂಜೆಕ್ಷನ್ ಮಾಡಸ್ಕೊಂಡ ಬರ್ರಿ, ಇಲ್ಲಂದ್ರ ನಾನ ಬರಬೇಕಾಗತೈತಿ'' ಎಂದಳು. ನಾನು ಸಂಪೂರ್ಣ ಹೆದರಿದೆ.

''ನಿಮ್ಮ ಮಮ್ಮಿ ನಾಯಿ ಇಂಜೆಕ್ಷನ್ ಮಾಡಸಾಕ ಹೇಳ್ಯಾಳಪಾ, ನಡಿ ವಿಕ್ರಮ'' ಎಂದೆ.

''ನಾಯಿ ಕಡದ ವಿಷಯ ಮಮ್ಮಿಗೆ ಯ್ಯಾಕ ಹೇಳಿದಿ? ನಾಯೇನ್ ಬರೂದಿಲ್ಲ ಹೋಗ್'' ಎಂದು ಕಡ್ಡಿ ಮುರಿದಂತೆ ಹೇಳಿದ. ಅವನಿಗಿರುವ ಧೈರ್ಯ ನನಗಿಲ್ಲವಲ್ಲ ಎನ್ನಿಸಿತು.

''ಸುಮ್ಮ ನಡಿಯೋ ಮಾರಾಯಾ, ಹಂಗ.. ಡಾಕ್ಟರ್ ಹಂತೇಕರೆ ಹೋಗಿ ಸಲಹಾ ತಗೊಳುನು. ಅವ್ರೇನ ಇಟ ಕುನ್ನಿ ಸಲುವಾಗಿ ಇಂಜೆಕ್ಷನ್ ಮಾಡಸ್ರಿ ಅಂತಾರೇನ? ಅದು ಸಾಕಿದ ನಾಯಿ, ಅದಕೇನ ಹುಚ್ಚ ಹಿಡದೈತೇನ?'' ಎಂದು ಅವನನ್ನು ರಮಿಸಿ ಕರೆದುಕೊಂಡು ಹೋದೆ. ನಮ್ಮ ಫ್ಯಾಮಿಲಿ ಡಾಕ್ಟರರು ಇರಲಿಲ್ಲ, ಬೇರೊಬ್ಬ ಪರಿಚಯದ ವೈದ್ಯರ ಬಳಿಗೆ ಹೋದೆ. ಅವರು ನಾಯಿ ಕಡಿತದ, ಹಾವು ಕಡಿತದ ಇಂಜೆಕ್ಷನ್ನಗಳನ್ನು ಸ್ಟಾಕ್ ಇಟ್ಟಿರುತ್ತಾರೆ ಎಂದು ಕೇಳಿದ್ದೆ. ಪೇಸೆಂಟನ್ನು ನೇರವಾಗಿ ಅವರ ಮುಂದೆ ನಿಲ್ಲಿಸಿದರೆ ಇಂಜೆಕ್ಷನ್ನ ಮಾಡಿಯೇ ಬಿಡಬಹುದೆಂದು ಹೆದರಿ, ಅವನನ್ನು ಹೊರಗೆ ಕೂಡ್ರಿಸಿ, ನಾನೇ ವೈದ್ಯರ ಬಳಿ ಹೋದೆ.

''ಸ್ವಲ್ಪ ಮಾಹಿತಿ ಬೇಕಾಗಿತ್ರಿ?'' ಎಂದೆ.

''ಹೆಳ್ರಿಲಾ ಏನ ಮಾಹಿತಿ ಬೇಕಾಗಿತ್ತು?'' ಎಂದರು ವೈದ್ಯರು.

''ಸಾಕಿದ ನಾಯಿ ಕಡದ್ರ ಟಿ.ಟಿ. ಇಂಜೆಕ್ಷನ್ ಮಾಡ್ಸಿದ್ರ ನಡೀತೈತಿಲ್ರಿ?''

''ನಡೀತೈತಿ ಆದ್ರ ನಾಯಿಗೆ ಹುಚ್ಚ ಹಿಡಿದಿಲ್ಲ ಅಂತ ನೀವ... ಹೆಂಗ ಡಿಸೈಡ್ ಮಾಡತೀರಿ?'' ಎಂದರು.

''ಅದೇನೊ ಹುಚ್ಚ ಹಿಡದಿದ್ರ ಹತ್ತ ದಿನದಾಗ ನಾಯಿ ಸಾಯತೈತಿ ಅಂತ್ರಿಲಾ?'' ಎಂದೆ.

''ಹೌದು ನಾಯಿ ಸಾಯತೈತಿ, ಆದ್ರ ಅಲ್ಲೀತನಕಾ ಮನಸ್ಯಾಗ ರೇಬೀಸ್ ಬರೂದಿಲ್ಲ ಅಂತ ಏನ ಗ್ಯಾರಂಟಿ? ಪೇಶಂಟನ್ನ ಕರಕೊಂಡ ಬಂದರೇನು?'' ಎಂದರು. ನಾನು ಹೌದೆಂದು ಗೋಣು ಹಾಕಿದೆ.

''ಒಳಗ ಕರೀರಿ ಎಂದು ಹೇಳಿ, ಕಂಪೌಂಡರ್ ಕಡೆಯಿಂದ ಮಗನನ್ನು ಒಳಗೆ ಕರೆಸಿಕೊಂಡರು. ಮತ್ತೆ ಮಾತು ಮುಂದುವರಿಸಿ ಈಗ ಇಂಜೆಕ್ಷನ್ ಬಾಳ ಚಲೊ ಬಂದಾವು, ಸೂಜಿನೂ ಅಗದಿ ಸಣ್ಣ ಇರತೈತಿ. ನೂವೂ ಆಗೂದಿಲ್ಲ'' ಎಂದು ಹೇಳಿದರು.

''ಇಂಜೆಕ್ಷನ್ ಕಿಮ್ಮತ್ತ ಎಷ್ರಿ?'' ಎಂದೆ.

''ಅದೇನ ಬಹಳ ಇಲ್ಲ, ಒಟ್ಟ... ಮೂರ ನೂರಾ ಎಪ್ಪತ್ತೈದು'' ಒಮ್ಮೆ ಮಾಡಿಸಿದ್ರ ನಿಶ್ಚಿಂತಿ ಎಂದರು. ನನಗೂ ಅವರ ಸಲಹೆ ಒಳ್ಳೆಯದೆನಿಸಿತು. ಕೇವಲ ಒಂದು ಇಂಜೆಕ್ಷನ್ ಮಾಡಿಸಿದರೆ ಮುಗಿಯಿತಲ್ಲ ಅಂದುಕೊಂಡೆ. ಮೊದಲೆಲ್ಲ ಐದಾರು ಎಂದು ಹೇಳುತ್ತಿದ್ದರು. ಈಗ ಹೊಸದು ಬಂದಂತೆ ಕಾಣುತ್ತದೆ ಎಂದು ಅಂದುಕೊಂಡೆ.

''ಆಗಲ್ರಿ ಒಂದ ಇಂಜೆಕ್ಷನ್ ಮಾಡಿಯೇ ಬಿಡ್ರಿ'' ಎಂದೆ.

''ಈ ಇಂಜೆಕ್ಷನ್ನ ನಾ ಒಬ್ನ ಸ್ಟಾಕ್ ಇಟ್ಟಿರತಿನ, ಬಡಬಗ್ಗರಿಗೆ ಅನುಕೂಲ ಆಗಲಿ ಅಂತ. ನನ್ನ ಬಿಟ್ರ ಈ ರಬಕವಿ ಬನಟ್ಯಾಗ ಯಾರ ಕಡೆನೂ ಈ ಇಂಜೆಕ್ಷನ್ನ ಸಿಗೂದಿಲ್ಲ'' ಎಂದರು.

''ಹೊಸ ಪ್ಯಾಕನ್ನು ನನ್ನ ಮುಂದೆಯೆ ಹರಿದರು. ಇಂಜೆಕ್ಷನ್ ಮಾಡಿದರು'' ಹೊರಡಲು ಅನುವಾದೆ.

''ಕುಂದರ್‍ರಿ ಸ್ವಲ್ಪ ಎಂದು ಹೇಳಿ ಆ ಇಂಜೆಕ್ಷನ್ ಪ್ಯಾಕಿಂಗ್‌ದಲ್ಲಿ ಇದ್ದ ಸೂಚನಾ ಚೀಟಿಯನ್ನು ಹೊರ ತೆಗೆದರು. ಅದರಲ್ಲೊಂದು ಟೇಬಲ್ ಇತ್ತು ಆ ಪ್ರಕಾರ ಚೌಕಗಳಲ್ಲಿ ದಿನಾಂಕಗಳನ್ನು ತುಂಬಿದರು. ಇನ್ನ ಮೂರ ದಿವಸದ ನಂತರ ಮತ್ತೊಂದ ಇಂಜೆಕ್ಷನ್, ಒಂದ ವಾರ ಬಿಟ್ಟು ಇನ್ನೊಂದ ಇಂಜೆಕ್ಷನ್. ನಂತರ ಹದಿನೈದ ದಿನಾ ಬಿಟ್ಟು ಮತ್ತೊಂದ ಇಂಜೆಕ್ಷನ್, ಆಮ್ಯಾಲ ಒಂದ ತಿಂಗಳು ಬಿಟ್ಟು ಒಂದ ಇಂಜೆಕ್ಷನ್, ಆಮ್ಯಾಲ ಆರ ತಿಂಗಳು ಬಿಟ್ಟು ಇನ್ನೊಂದ ಇಂಜೆಕ್ಷನ್'' ಹನುಮಂತನ ಬಾಲದಂತೆ ಹೇಳತೊಡಗಿದರು. ನನ್ನ ಮಗ ಕೆಂಗಣ್ಣಿನಿಂದ ನನ್ನನ್ನೇ ನೋಡುತಿದ್ದ.

''ಒಂದ... ಇಂಜೆಕ್ಷನ್ ಅಂದಾಂಗಾಗಿತ್ತಲ್ರಿ?'' ಎಂದೆ.

''ಒಂದ... ಇಂಜೆಕ್ಷನ್ ಅಲ್ರಿ? ಒಂದ... ಡೋಜ ಅಂತ ಹೇಳೆನ್ರಿ? ನೀವೂ ಮಾಸ್ತರ್ ಅದೀರಿ ಇದರಾಗ ಏನ ಬರದಾರ ನೋಡ್ರಿಲಾ?'' ಎಂದರು.

''ನಾವು ಒಂದ.... ಇಂಜೆಕ್ಷನ್ ಮಾಡಿಸಿ ಮುಂದ ಬಿಟ್ರ ಏನ ಆಗತೈತ್ರಿ?'' ಎಂದೆ.

''ನೋಡ್ರಿ, ರೊಖ್ಖಕ್ ಶ್ಯಾನ್ಯಾತನಾ ಮಾಡಬ್ಯಾಡ್ರಿ, ಜೀಂವಾ ಮುಖ್ಯ, ರೊಖ್ಖಾ ಕಳಕೊಂಡ್ರ ಮತ್ತ ಗಳಸಬಹುದು. ಜೀಂವಾ ಕಳಕೊಂಡ್ರ ಸಿಗತೈತೇನ್ರಿ?'' ಎಂದು ಮರು ಸವಾಲು ಎಸೆದರು. ಇಂಜೆಕ್ಷನ್ ಮಾಡಿಸದೇ ನೆಗೆದವರ, ತೊಂದರೆಗೆ ಒಳಗಾದವರ ಪಟ್ಟಿಯನ್ನೇ ಹೇಳತೊಡಗಿದರು.

''ಮೂರ ದಿವ್ಸ ಬಿಟ್ಟು ಮತ್ತ ಬರತನ್ರಿ ಎಂದು ಹೇಳಿ ಹೊರ ಬಂದೆವು.''

ಸ್ವಿಚ್ ಆಫ್‌ಮಾಡಿದ್ದ ಮೊಬಾಯಿಲನ್ನು ಸ್ವಿಚ್ ಆನ್ ಮಾಡಿದೆ. ಮೊದಲು ನನ್ನವಳಿಗೆ ಫೋನ್ ಹಚ್ಚಿದೆ. ಅವಳು ತುಂಬಾ ಗರಮ್ ಆಗಿದ್ದಳು.

''ನಾ ಬ್ಯಾಸ್ರ ಆಗಿದ್ರ ಹೇಳಿಬಿಡ್ರಿ, ಎತ್ಲಾಗರ ಹಾಳಗಿ ಹೊಕ್ಕೆನಿ, ನಾ ಫೋನ್ ಮಾಡಿದ್ರ ಸ್ವಿಚ್ ಆಫ್ ಯಾಕ್ ಮಾಡತೀರಿ. ಏನ ಇನ್ನೊಬ್ಬಕಿ ಯಾವಕೆರ ಹೇಂತಿ ಅದಾಳೊ'' ನನ್ನ ಸಮಜಾಯಿಸಿಯನ್ನೂ ಕೇಳದೇ ಅವಳು ಬೈಗುಳಗಳ ಮಳೆ ಸುರಿಸತೊಡಗಿದಳು. ದೇವರೆ ನನ್ನನ್ನು ಗಂಡಸಾಗಿಯಾದರೂ ಯಾಕೆ ಹುಟ್ಟಿಸಿದೆ. ಹೋಗಲಿ ಈ ಗಂಡನನ್ನಾಗಿ ಯಾಕಾದರೂ ಮಾಡಿದೆ ಎಂದು ದೇವರನ್ನು ಶಪಿಸುತ್ತಲೇ ಇಂಥ ಸಂಕಟದಿಂದ ಪಾರು ಮಾಡಲು ಪ್ರಾರ್ಥಿಸಿದೆ. ಅರ್ಧ ಕರೆನ್ಸಿ ಖಾಲಿ ಮಾಡಿಯೇ ಅವಳ ಬಾಯಿ ತಣ್ಣಗಾಯಿತು. ಸಮಾಧಾನದಿಂದ ಮಾತು ಹೊರಬಂತು.

''ವಿಕ್ರಮಗ ಇಂಜೆಕ್ಷನ್ ಮಾಡ್ಸಿದ್ರ್ಯೊ ಇಲ್ಲೊ?'' ಪ್ರಶ್ನೆ ನೇರವಾಗಿತ್ತು.

''ವಿಕ್ರಮಗ ಇಂಜೆಕ್ಷನ್ ಮಾಡಿಸೇನಿ. ನಿನ್ನ ಫೋನ ಬಂದಾಗ ನಾವು ದವಾಖಾನ್ಯಾಗ ಇದ್ದಿವು. ಅದಕ್ಕ... ಫೋನ ಸ್ವಿಚ್ ಆಫ್ ಮಾಡಿದ್ನಿ'' ಎಂದೆ.

''ಆಗ ಹೇಳಾಕ ಏನ ಆಗಿತ್ತ ನಿಮಗ ದಾಡಿ? ನಾ ಇಷ್ಟೆಲ್ಲ ಯ್ಯಾಕ ಒದರತಿದ್ನಿ?'' ಎಂದಳು.

''ನೀ ನನಗ ಮಾತಾಡಾಕ ಬಿಟ್ರ ನಾ ಮಾತಾಡತಿದ್ನಿ, ಬರೀ ನೀನ... ಒದರಾಕತ್ತಿ ಒದರ್‍ಲಿ ಬಿಡ ಅಂತ ನಾನೂ ಸುಮ್ಮ ಆದ್ನಿ'' ಎಂದು ಹೇಳಬೇಕೆಂದು ಮಾಡಿದೆ ಧೈರ್ಯ ಬರಲಿಲ್ಲ.

''ಇಂಜೆಕ್ಷನ್ ಮಾಡಿಸೀರೋ ಇಲ್ಲೊ ಖರೇ ಹೇಳ್ರಿ? ನೀವು ಕೆಟ್ಟ ಜೀನತನಾ ಮಾಡತೀರಿ. ನಾಳೆ ಶನಿವಾರ ಬರೂಮುಂದ ಬಂಗಾರ ಗುಂಡಾ ಹೇಳಿದ್ನಿಲಾ ಅವುತರ್‍ನ ತಗೊಂಡ ಬರ್‍ರಿ, ನನ್ನ ಪಗಾರ ಇಲ್ಲಿ ಯಾವುದಕ್ಕೂ ಸಾಲವಲ್ತು. ಮನಿ ಬಾಡಗಿ ಲೈಟ ಬಿಲ್ಲ. ಎಲ್ಲಾ ನನ್ನ ಪಗಾರದಾಗ ಕೊಡಬೇಕು. ನಿಮಗಂತೂ ಒಬ್ಬಾಕಿ ಹೇಂತಿ ಅದಾಳ ಅನ್ನೂ ಖಬರೂ ಇಲ್ಲ. ಹಂಗ ಎಲ್ಲೆಲ್ಲರ ಚೈನಿ ಮಾಡಕೊಂಡ ತಿರಗತೀರಿ. ಇಲ್ಲಿ ಕಾಯಿಪಲ್ಲೆ ಬಾಳ ತುಟ್ಟಿ ಬರೂಮುಂದ ತಾಜಾ ಕಾಯಪಲ್ಲೆ ತಗೊಂಡ ಬರ್‍ರಿ, ಗೋದಿ ಹಿಟ್ಟು, ಜ್ವಾಳದ ಹಿಟ್ಟು ತಗೊಂಡ ಬರ್‍ರಿ'' ಎಂದಳು. ನಾನು ಎಲ್ಲದಕ್ಕೂ ಹುಂ ಎಂದೆ.

''ಹಂಗ... ಹಸಿ ಮೆಣಸಿನಕಾಯಿ ಮರ್‍ತ ಬರಬ್ಯಾಡ್ರಿ'' ಎಂದು ಚುರುಕು ಮುಟ್ಟಿಸುವುದನ್ನು ಮರೆಯಲಿಲ್ಲ.

''ಇಲ್ಲಿ ಏನೂ ಸೊವಿ ಇಲ್ಲ ಎಲ್ಲಾ ತುಟ್ಟಿನ.. ನೀವಂತು ಮನಿ ಬಾಡಗಿ ಇಲ್ದ ಸ್ವಂತ ಮನ್ಯಾಗ ಆರಾಮ ಅದೀರಿ. ನಾ ಇಲ್ಲಿ ಮನಿ ಬಾಡಗಿ ಕೊಡಬೇಕು. ಕರೆಂಟ ಬಿಲ್ಲ ತುಂಬಬೇಕು. ಕಿರಾಣಿ ಅಂಗಡಿ ರೊಕ್ಕಾ ಕೊಡಬೇಕು. ಅರವಿ ಅಂಗಡಿ ಉದ್ರಿ ಕೊಡಬೇಕು.

---

**1960ನೇ ಇಸವಿಯ ಹೊತ್ತಿಗೆ 12,43,19000 ಸಂಖ್ಯೆಯ ಟೆಲಿಗ್ರಾಫ್ ಸಂದೇಶಗಳು ಪ್ರಪಂಚದಾದ್ಯಂತ ಹರಿದಾಡಿದ್ದವು.**

ಒಂದ... ಎರಡ? ನೀವಂತು ಹೇಂತಿಗಿ ಏನ ಬೇಕು ಬ್ಯಾಡಾ ಒಂದೂ ವಿಚಾರ.... ಮಾಡಾಂಗಿಲ್ಲ, ಇರ್ಲಿ ಇದು ಒಂದ ನನ್ನ ನಸೀಬ..'' ಎನ್ನುತ್ತ ನಿಟ್ಟುಸಿರು ಬಿಟ್ಟಳು.

''ಈ ವಾರರಾ ಬರೂಮುಂದ ಸ್ವಲ್ಪ ರೊಖ್ಖಾ ಹೆಚ್ಚಿಗಿ ತಗೊಂಡ ಬರ್ರಿ. ಯಾವಾಗ ನೋಡಿದ್ರೂ ಬರೀ ರೊಖ್ಖ ಆದೂವ ಅಂತೀರಿ'' ಎಂದು ಹಂಗಿಸಿದಳು. ಅವಳ ಎಲ್ಲ ಮಾತುಗಳನ್ನೂ ಕವಲೆತ್ತಿನಂತೆ ಪಾಲಿಸುವುದೊಂದೆ ನನಗಿರುವ ದಾರಿ. ಸಾಲವಾದರೂ ಸರಿ. ಶೂಲವಾದರೂ ಸರಿ ದೂರದ ಊರಿನಲ್ಲಿ ನೌಕರಿ ಮಾಡುವ ಹೆಂಡತಿಯ ಮನಸ್ಸನ್ನು ನೋಯಿಸಬಾರದೆಂದು ಅವಳ ಎಲ್ಲಾ ಮಾತುಗಳನ್ನು ಪಾಲಿಸುತ್ತೇನೆ. ಹಾಗೆ ನೋಡಿದರೆ ಅವಳಿಗೆ ನೌಕರಿ ಬರುವ ಮೊದಲೂ ಸಹ ಅವಳು ಹೇಳಿದಂತೆಯೇ ಕೇಳಿದ್ದೇನೆ. ಏಕೆಂದರೆ ನಾನು ಗಂಡ.

''ಹೂಂ ಬ್ಯಾಳ ಹೊತ್ತಾತು ಫೋನ್ ಹಚ್ಚಿ ಇನ್ನ ಇಟ್ಟ ಬಿಡ್ರಿ, ವಿಕ್ರಮಗ ಕಡಿದಿರು ಆ ನಾಯಿ ಕುನ್ನಿ ಎತ್ತಲಾಗರ ಒಯ್ದು ಬಿಟ್ಟ ಬರ್ರಿ. ಆರೂ ಇಂಜೆಕ್ಷನ್ ತಪ್ಪದ ಮಾಡಸ್ರಿ'' ಎನ್ನುವ ಅವಳ ಮಾತು ಇನ್ನೂ ಮುಗಿದಿರಲಿಲ್ಲ ನನ್ನ ಕರೆನ್ಸಿ ಖಾಲಿ ಆಗಿ ಫೋನ್ ಕಟ್ಟ ಆಯಿತು.

☆

---

ಅದೊಂದು ಪೋಸ್ಟ್ ಆಫೀಸು. ಬೆಳಗ್ಗೆಯೇ ಜನ ಗಿಜಿಗುಟ್ಟುತ್ತಿದ್ದರು. ಆಗ ಒಬ್ಬ ಸುಂದರವಾದ ಯುವತಿ ಆತುರಾತುರವಾಗಿ ಟೆಲಿಗ್ರಾಫ್ ಕೌಂಟರಿಗೆ ಬಂದು ಪೋಸ್ಟ್ ಮಾಸ್ಟರ್ ಎಲ್ಲಿದ್ದಾರೆ ಅಂತ ಕೇಳಿದಳು. ಕೌಂಟರಿನಲ್ಲಿದ್ದವನು ಪೋಸ್ಟ್ ಮಾಸ್ಟರ್ ಛೇಂಬರ್ ತೋರಿಸಿದ. ಆ ಯುವತಿ ಅತ್ತ ಹೋಗುತ್ತಿರುವಾಗ ಅವಳ ಸೌಂದರ್ಯ ಕಂಡು ಆನಂದ ತಡೆಯಲಾರದೇ ಯಾರಿಗೂ ತಿಳಿಯದಿರಲಿ ಅಂತ ತನ್ನ ಟೆಲಿಗ್ರಾಫ್ ಯಂತ್ರದಿಂದ ಕಟ್ಟ ಕಟ್ಟ ಕರಗಟ್ಟ ಕಟ್ಟ ಅಂತ ಶಬ್ದ ಮಾಡಿ (ಯು ಆರ್ ಸೋ ಬ್ಯೂಟಿಫುಲ್ ಅಂತ) ತನ್ನ ಸಂತೋಷ ತೋಡಿಕೊಂಡ. ಕೆಲವು ಸಮಯ ಆಯಿತು. ಆ ಯುವತಿ ಮತ್ತೆ ಇವನ ಹತ್ತಿರ ಬಂದಳು. ಈಗ ಏನು ಕೇಳ್ತಾಳೋ ಅಂತ ಕುತೂಹಲದಿಂದ ಇದ್ದ. ಆ ಯುವತಿ ಟೆಲಿಗ್ರಾಫ್ ಯಂತ್ರವನ್ನು ತನ್ನತ್ತ ತಿರುಗಿಸಿಕೊಂಡು ಕಟ್ಟ ಕಟ್ಟ ಕಟ್ಟ ಅಂತ ಶಬ್ದ ಮಾಡಿ (ಥಾಂಕ್ಸ್ ಫಾರ್ ದ ಕಾಂಪ್ಲಿಮೆಂಟ್) ಅಂತ ಹೋದಳು. ಇವನು ದಂಗಾಗಿ ಕೂತ. ಹಾಗೆ ನೋಡಿದರೆ ಅವಳೂ ಇನ್ನೊಂದು ಪೋಸ್ಟ್ ಆಫೀಸಿನಲ್ಲಿ ಟೆಲಿಗ್ರಾಫ್ ಕಳಿಸೋ ಕೆಲಸದಲ್ಲಿದ್ದೋಳು.

*– ಸುಕೇಶವ*

# ಬ್ರಾಹ್ಮಿಯೂ ನೆನಪಿನ ಶಕ್ತಿಯೂ

**- ಕುಮುದಾ ಪುರುಷೋತ್ತಮ್**

**ಪಾ**ಪತ್ತೆಯ ಮನಸ್ಸು ಆತಂಕದ ಗೂಡಾಗಿತ್ತು. ಗಂಗಮ್ಮನ ಗೋಳಾಟ ಕೇಳಿದಂದಿನಿಂದ ಮನಸ್ಸೇ ಕೆಟ್ಟು ಹೋಗಿತ್ತು. ಪಾಪ ಗಂಗಮ್ಮ ಗಂಡನ ಅವಿವೇಕದ ನಡವಳಿಕೆಯಿಂದ ಜನಕ್ಕೆ ಮುಖತೋರಿಸಲೂ ನಾಚುತ್ತಿದ್ದಳು.

ಅವಳ ಗಂಡ ಮುಂಚಿನಿಂದಲೂ ತುಸು ಮರೆಗುಳಿಯೇ. ಆದರೆ ಅದು ವಿಪರೀತಕ್ಕೆ ಹೋಗಿದ್ದು ತೀರ ಈಚೆಗಂತೆ! ಒಂದು ಸಂಜೆ ಕೆಲಸದಿಂದ ವಾಪಸ್ಸಾಗುವಾಗ ಪಕ್ಕದ ವಠಾರಕ್ಕೆ ನುಗ್ಗಿ ಮನೆಯೊಂದರ ಆರಾಮಾಸನದಲ್ಲಿ ಕುಳಿತು ''ಲೇ ಇವ್ಳೇ, ಕಾಫಿ ತೊಗೊಂಡು ಬಾ'' ಎಂದು ಕೂಗು ಹಾಕಿದ್ರಂತೆ. ಆ ಮನೆಯೊಡತಿ ಹೊರಬಂದರೆ ''ನೀನ್ಯಾರಮ್ಮ? ಗಂಗ ಮನೇಲಿ ಇಲ್ವೇ?'' ಎಂದು ಕೇಳಿದ್ರಂತೆ. ಆಕೆ ಗಾಬರಿಯಿಂದ ಕಿರುಚಿಕೊಂಡರಂತೆ. ಮೊದಲೇ ಜನರಿಂದ ತುಂಬಿ ತುಳುಕುತ್ತಿದ್ದ ವಠಾರ. ಕ್ಷಣಮಾತ್ರದಲ್ಲಿ ಜನ ಜಮಾಯಿಸಿ ನಾಲ್ಕು ತಪರಾಕಿ ಬೀಳುವುದರಲ್ಲಿ ಈತನ ಮರೆಗುಳಿತನದ ಪರಿಚಯವಿದ್ದ ಯಾರೋ ಪುಣ್ಯಾತ್ಮ ಮಧ್ಯೆ ಪ್ರವೇಶಿಸಿ ಕಾಪಾಡಿದನಂತೆ. ವಿಷಯ ತಿಳಿದ ಗಂಗಮ್ಮ ನಾಚಿ ನೀರಾಗಿ ಈಗ ಮನೆ ಬಿಟ್ಟು ಬರುವುದೇ ಅಪರೂಪವಂತೆ.

ಗಂಗಮ್ಮನಿಗೊದಗಿದಂತಹ ಪರಿಸ್ಥಿತಿ ತನಗೇ ಎದುರಾದರೆ? ಆಗುವುದೇನು? ಆಗಿಯೇ ಆಗುತ್ತದೆಂಬುದು ಖಾತ್ರಿಯಾಗಿತ್ತು. ಮಾವಯ್ಯನ ಈಚಿನ ನಡವಳಿಕೆಯನ್ನು ನೋಡಿದರೆ ತನಗೂ ಗಂಗಮ್ಮನ ಗತಿಯೇ ಆಗುವುದರಲ್ಲಿ ಸಂದೇಹವೇ ಇರಲಿಲ್ಲ.

ಒಂದು ಭಾನುವಾರ ಮುಂಜಾನೆ ಉಪ್ಪಿಟ್ಟಿನ ಜೊತೆ ಗಟ್ಟಿ ಮೊಸರು ಬಾಯಿಗಿಡುತ್ತಾ ಮಾವಯ್ಯ ಪತ್ನಿಯನ್ನು ಕೇಳಿದ್ದರು. ''ನಾವು ಮದುವೆಯಾದ ಹೊಸತರಲ್ಲಿ ರಾಜಕುಮಾರ್ ನರಸಿಂಹರಾಜು ನಟಿಸಿದ ಚಿತ್ರ ಒಂದನ್ನು ಬೆಳಗಾವಿಯ ಥೇಟರ್ ಒಂದರಲ್ಲಿ ನೋಡಲು ಹೋಗಿದ್ದೆವಲ್ಲಾ ಅದರ ಹೆಸರೇನು?'' ಎಷ್ಟೋ ವರ್ಷಗಳ ಹಿಂದಿನ ಚಿತ್ರದ ಹೆಸರು ನೆನಪಿಟ್ಟುಕೊಳ್ಳಲು ಅವರೇನು ಕಂಪ್ಯೂಟರ್ರೆ? ''ಗೊತ್ತಿಲ್ಲ'' ಎಂದರು. ''ಅಯ್ಯೋ ಇಷ್ಟು ಬೇಗ ಮರ್ತುಹೋಯ್ತಾ? ಆವತ್ತು ನಿನ್ನ ಮೇಕಪ್‌ನಿಂದಾಗಿ ತಡವಾಗಿ ಹೋದೆವಲ್ಲಾ, ಹೌಸ್ ಫುಲ್ ಫಲಕ ತೂಗಿ ಹಾಕಿತ್ತು. ನೀನು ಈಗಿನಂತೆ ಆಗ್ಲೂ ಹಟಮಾರೀನೇ. ಇವತ್ತು ಈ ಸಿನಿಮಾ ನೋಡ್ದೆ ಮನೇಗೆ ಬರೋಲ್ಲ ಅಂತ ಧರಣಿ ಕೂತೆ. ನಿನ್ನ ಹಟಕ್ಕೆ ಮಣಿದು ಅದು ಕಾನೂನು ಬಾಹಿರ ಅಂತ ಗೊತ್ತಿದ್ರೂ ಬ್ಲ್ಯಾಕ್‌ನಲ್ಲಿ ಎರಡು ರೂಪಾಯಿ ಐವತ್ತು ಪೈಸೆ ಟಿಕೆಟ್ಟಿಗೆ ಹತ್ತು ರೂಪಾಯಿ ತೆತ್ತು ಚಿತ್ರ ನೋಡಿದೆವಲ್ಲಾ ಅದರ ಹೆಸ್ರು ನಾನು ಕೇಳಿದ್ದು.''

ಹೆಂಡತಿಯನ್ನು ಹಠಮಾರಿ ಎಂದು ಹೇಳಿದ್ದಲ್ಲದೆ ಬ್ಲ್ಯಾಕ್‌ನಲ್ಲಿ ಟಿಕೆಟ್ ಖರೀದಿಸಿದ್ದು ನಿನ್ನಿಂದಲೇ ಎಂದರೆ ಯಾವ ಸ್ವಾಭಿಮಾನಿ ಹೆಂಡತಿಗೆ ರೋಷ ಉಕ್ಕುವುದಿಲ್ಲಾ? ಪಾಪತ್ತೆಗೂ ಉಕ್ಕಿತು. ಏರು ಧ್ವನಿಯಲ್ಲಿ ''ನನಗೆ ಗೊತ್ತಿಲ್ಲಾಂದ್ರೆ ಗೊತ್ತಿಲ್ಲ'' ಎಂದಿದ್ದರು.

ಮತ್ತೊಮ್ಮೆ ಮಿಕ್ಸಿಯಲ್ಲಿ ಇಡ್ಲಿಗೆ ರುಬ್ಬುತ್ತಿರುವಾಗ ಅದರ ಶಬ್ದವನ್ನೂ ಮೀರಿಸುವಂತೆ ಗಟ್ಟಿಯಾಗಿ ಕೇಳಿದ್ದರು. ''ನಮ್ಮ ಶ್ಯಾಮಲಿ ಮದ್ವೇಲಿ ಆ ಗಂಡಿನಕಡೆಯ ತಲೆಹರಟೆ ಹುಡುಗ ಛತ್ರದಲ್ಲಿ ಅವಾಂತ್ರ ಎಬ್ಬಿಸಿದನಲ್ಲಾ. ಅವನ ಹೆಸ್ರೇನು?'' ಯೋಚಿಸಿ ಯೋಚಿಸಿ ರಾತ್ರೆಯಲ್ಲಾ ನಿದ್ದೆ ಇಲ್ಲಾ. ಪಾಪತ್ತೆ ಮಿಕ್ಸಿ ಆಫ್ ಮಾಡಿದರು.

''ಯಾವ ಹುಡ್ಗಾ? ನೀವು ಹಿಡ್ದು ನಾಲ್ಕು ಬಾರ್ಸಿದ್ರಲ್ಲಾ ಅವ್ನಾ?''

''ಅವ್ನೇ ಅವ್ನೇ.''

''ಆಮೇಲೆ ಗಂಡಿನವ್ರು ಕೋಪಿಸಿಕೊಂಡು ಮದ್ವೇನೇ ನಿಲ್ಲೋದ್ರಲ್ಲಿತ್ತಲ್ಲಾ ಅವ್ನಾ?''

''ಏನು ನೀನು ಹೇಳೋದು? ಅವ್ನು ಮಾಡಿದ ಘನಕಾರ್ಯಕ್ಕೆ ಸನ್ಮಾನ ಮಾಡಬೇಕಾಗಿತ್ತೇನು? ವರಪೂಜೆ ರಾತ್ರೆ ಒಂಬತ್ತು ಗಂಟೆ. ಮಳೆ ಸುರೀತಿದೆ. ಊಟ ಮುಗಿಸಿದ ಜನಕ್ಕೆ ಮನೆ ಸೇರೊ ತರಾತುರಿ. ಈ ಕ್ರಿಮಿನಲ್ಲು ಅಲ್ಲಿದ್ದ ಚಪ್ಪಲಿಗಳ ರಾಶಿಯಿಂದ ಎಡ ಚಪ್ಪಲಿಗಳೆಲ್ಲಾ ಒಂದು ಮೂಲೆ, ಬಲ ಚಪ್ಪಲಿಗಳೆಲ್ಲಾ ಮತ್ತೊಂದು ಮೂಲೇಲಿ ಪೇರ್ಸಿ ತಮಾಷೆ ನೋಡ್ತಿದ್ದ. ಪಾಪ, ಜನ ಚಪ್ಪಲಿಗಳನ್ನ ಹುಡುಕೋ ಆತುರದಲ್ಲಿ ಬಾಗಿಲ ಬಳಿ ಟ್ರ್ಯಾಫಿಕ್‌ಜ್ಯಾಮ್ ಆಗಿ ಗಲಭೆ ಆಗೋದ್ರಲ್ಲಿತ್ತು. ಅದಕ್ಕೇ ಹಿಡಿದು ನಾಲ್ಕು ಬಿಟ್ಟೆ''

''ಬಿಡೋದು ಬಿಟ್ರಿ. ಪರಿಣಾಮದ ಬಗ್ಗೆ ಯೋಚನೆ ಮಾಡಿದ್ರಾ? ಏನೋ ನಮ್ಮಪ್ಪ ಬಂದು ಪರಿಸ್ಥಿತಿ ಹದಕ್ಕೆ ತಂದ್ರು ಮದ್ವೆ ನಡೀತು. ನಿಮ್ಮನ್ನು ನೆಚ್ಚಿಕ್ಕೊಂಡಿದ್ದಿದ್ರೆ ನಮ್ಮ ಮಾನ ಮೂರು ಕಾಸಿಗೆ ಹರಾಜ್ ಆಗ್ತಿತ್ತು.''

''ಹಿಂದಿನ ಪುರಾಣ್ವೆಲ್ಲಾ ಈಗ್ಯಾಕೆ? ನನಗೆ ಆ ಹುಡುಗನ ಹೆಸ್ರು ಬೇಕಿತ್ತು ಅಷ್ಟೆ''

''ನನಗೆ ನೆನಪಿಲ್ಲ.'' ಇಡ್ಲಿ ರುಬ್ಬುವುದು ಮುಂದುವರೀತು.

ಮತ್ತೊಂದು ಮುಂಜಾನೆ ಬರಲಿರುವ ಅತಿಥಿಗಳಿಗೆ ಔತಣ ತಯಾರಿಸಬೇಕಿತ್ತು. ಸಾಮಾನಿನ ಪಟ್ಟಿ ಮಾವಯ್ಯನ ಕೈಗಿತ್ತು ಅಂಗಡಿಗೆ ಕಳುಹಿಸಿದರು. ಎರಡು ಗಂಟೆಗಳ ಬಳಿಕ ಒಂದು ಕೈನಲ್ಲಿ ದಂಟಿನಸೊಪ್ಪು, ಮತ್ತೊಂದರಲ್ಲಿ ಉದ್ದದ ಪಡವಲ ಹಿಡಿದು ಕಾಲೆಳೆಯುತ್ತಾ ಬಂದರು.

''ಹಳ್ಳಿ ಹೆಂಗ್ಸೊಬ್ಬು ರಸ್ತೆ ಬದಿ ಮಾರ್ತಿದ್ಲು. ಎಳೇದಾಗಿತ್ತು. ಹಾಗೇ ಹಿಡ್ಕೊಂಡು ಬಂದೆ'' ಎಂದರು ಪತ್ನಿಯಿಂದ ಶಹಬಾಸ್‌ಗಿರಿ ನಿರೀಕ್ಷಿಸುತ್ತ.

''ನಾ ಕೇಳಿದ್ದ ಸಾಮಾನು?'' ಮಾವಯ್ಯ ನಾಲಿಗೆ ಕಚ್ಚಿಕೊಂಡರು.

''ಮರೀತಿರಾಂತಾನೇ ಪಟ್ಟಿ ಕೊಟ್ಟಿದ್ನಲ್ಲಾ?''

''ಅದು ನೋಡೋದೇ ಮರ್ತುಬಿಟ್ಟೆ'' ಎಂದರು ಸ್ವಲ್ಪವೂ ಪಶ್ಚಾತ್ತಾಪಪಡದೆ!

---

**ಟೆಲಿಗ್ರಾಫ್ ಯಂತ್ರಗಳನ್ನು ತಯಾರು ಮಾಡುವ ಎಲೆಕ್ಟ್ರಿಕ್ ಟೆಲಿಗ್ರಾಫ್ ಕಂಪನಿ ಪ್ರಾರಂಭವಾದದ್ದು 1846ರಲ್ಲಿ.**

ಇದು ತಿಂಗಳ ಹಿಂದೆ ನಡೆದದ್ದು. ಮಾವಯ್ಯನ ಸಹೋದ್ಯೋಗಿಯ ಮನೆಯ ಗೃಹಪ್ರವೇಶದ ಸಂದರ್ಭ. ಆ ಗೆಳೆಯನಿಗೆ ಮೂರು ಗಂಡು ಮಕ್ಕಳು. ರಾಮು, ಕೃಷ್ಣ ಹಾಗೂ ಗೋವಿಂದ. ಎಲ್ಲರೂ ಮಾವಯ್ಯ ಎತ್ತಿ ಬೆಳೆಸಿದ ಮಕ್ಕಳೇ. ಸೊಸೆಯಂದಿರು ಕ್ರಮವಾಗಿ ಗೀತಾ, ಸೀತಾ ಹಾಗೂ ನಿವೇದಿತಾ. ಮಾವಯ್ಯನಿಗೆ ಈ ಮೂವರಲ್ಲಿ ಯಾರ ಪತ್ನಿ ಯಾರೆಂಬುದು ಮಹಾಗೊಂದಲದ ಸಂಗತಿಯಾಗಿತ್ತು. ಪಾಪತ್ತೆ ಅಂದು ಹೊರಡುವ ಮುನ್ನ ಈ ಬಗ್ಗೆ ಕ್ಲಾಸ್ ತೆಗೆದುಕೊಂಡಿದ್ದರು. ''ನೀನೊಳ್ಳೆ ಗಿರಾಕಿ. ನನಗೇನೂ ಅಷ್ಟು ತಿಳಿಯೋದಿಲ್ವೇ?'' ಎಂದು ಜೋರು ಮಾಡಿದ್ದರು. ಗೃಹಪ್ರವೇಶದ ಮನೆ ಹೊಕ್ಕೊಡನೆ ಎದಿರ್ಗೊಂಡಿದ್ದು ಹಿರಿಯವ ರಾಮು. ಚಪ್ಪರಕ್ಕೆ ಸಿಂಗಾರ ಮಾಡುತ್ತಿದ್ದ. ಅವನಿಗೆ ಸಹಾಯ ಮಾಡುತ್ತಾ ಕಿರಿಯಸೊಸೆ ನಿವೇದಿತ ಅಲ್ಲಿಯೇ ನಿಂತಿದ್ದಳು. ಮಾವಯ್ಯ ಅವರೊಡನೆ ಅದೂ ಇದೂ ಮಾತನಾಡುತ್ತಾ ಒಳ ಹೋಗುವ ಮುನ್ನ ಪುಟ್ಟ ಬಾಂಬ್ ಸಿಡಿಸಿಬಿಟ್ಟರು!

''ನಡೀಲಿ ಗಂಡ ಹೆಂಡಿರ ಸರಸ. ಶಿವ ಪೂಜೇಲಿ ನುಸುಳುವ ಕರಡಿಗಳು ನಾವಾಗೋದು ಬೇಡ'' ಎಂದುಬಿಟ್ಟರು! ಪಾಪ ಪಾಪತ್ತೆ. ಮುಖ ಮುಚ್ಚಿಕೊಳ್ಳಲಾಗುವಂತೆ ತಾನು ಬುರ್ಖಾಧಾರಣಿಯಾಗಿರಬೇಕೆನಿಸಿತ್ತು.

ಮಾವಯ್ಯನ ಸ್ಥಿತಿ ಹೀಗೆಯೇ ಮುಂದುವರೆದರೆ? ದೇವ್ರೇ ಗತಿ. ಕೂಡಲೇ ದೇವರಿಗೆ ಹರಕೆ ಮುಡಿಪುಗಳಾದವು. ಅವುಗಳ ಪರಿಣಾಮ ಒಂದು ಮಧ್ಯಾಹ್ನ ಟಿ.ವಿ. ಛಾನಲ್ ಒಂದರಲ್ಲಿ ಗಿಡ ಮೂಲಿಕೆಗಳ ವೈದ್ಯಕೀಯ ಗುಣಗಳನ್ನು ಆಯುರ್ವೇದ ವೈದ್ಯೆಯೊಬ್ಬರು ವಿವರಿಸುತ್ತಿದ್ದರು.

''ನೆನಪಿನ ಶಕ್ತಿ ವೃದ್ಧಿಗೆ ಈ ಸೊಪ್ಪು ರಾಮಬಾಣ. ಇದನ್ನು ಚೆನ್ನಾಗಿ ಕುಟ್ಟಿ ಚಟ್ಣಿಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಕ್ರಮೇಣ ನೆನಪಿನ ಶಕ್ತಿ ವೃದ್ಧಿಯಾಗುತ್ತದೆ. ಇದನ್ನು 'ಬ್ರಾಹ್ಮೀ' ಎನ್ನುತ್ತಾರೆ ಎಂದು ಹೇಳುತ್ತಾ ಅದನ್ನು ಮೇಲೆತ್ತಿ ಕ್ಯಾಮರ ಮುಂದೆ ಹಿಡಿಯುವುದಕ್ಕೂ ಮನೆಕೆಲಸದ ರಾಮಕ್ಕ ಕಸಗುಡಿಸಲು ಪೊರಕೆಯನ್ನು ಚಾಮರದಂತೆ ಹಿಡಿದು ಒಳಬರುವುದಕ್ಕೂ ಸರಿಹೋಯಿತು!''

''ರಾಮಕ್ಕ, ಬೇಗ ನೋಡು. ಈ ಸೊಪ್ಪು ನಿಂಗೆ ಗೊತ್ತಾ?''

''ಇದೇನ್ರವ್ವಾ ಇಂಗೆ ಕ್ಯಾಳ್ತೀರ? ಊರ್ನಾಗೆ ತ್ವಾಟ್ದಾಗೆ ಕೆಲ್ಸ ಮಾಡ್ದೋಳು ನಾನು. ಅಷ್ಟೂ ತಿಳೀದಾ? ಅದು 'ವಂದೆಲಗ'. ನಮ್ಮ ಮನೆತಾವ ಚರಂಡಿ ನೀರು ಅರಿಯಾಕ್ಕಿಲ್ಲವ್ರಾ? ಅದರ ಎಲ್ಡೂಬದಿ ಕಾಡಿನಂಗೆ ಬೆಳ್ದದೆ.''

ಪಾಪತ್ತೆಗೆ ರಾಮಕ್ಕನನ್ನು ಅಪ್ಪಿ ಮುದ್ದಾಡುವಂತಾಯ್ತು ಪೊರಕೆಯೊಂದು ಅಡ್ಡವಿರದಿದ್ದರೆ! ''ಹಾಗಾದ್ರೆ ನಾಳೆಯಿಂದ ದಿನಾ ಒಂದು ಹಿಡಿ ಸೊಪ್ಪು ತಂದು ಕೊಡ್ತೀಯಾ?''

''ಅದೆಂಗಾಯ್ತದೆ? ಅದಕ್ಕೆ ಕೈ ಆಕಿದ್ರೆ ಗುರುವ ಕೈ ಕತ್ತರಿಸ್ತಾನೆ. ಅದು ತಾನೇ ಬೆಳ್ದದ್ದು ಅಂತ ಏಳಿ ಮಾರ್ಕಂತಾನೆ. ಒಂದು ಗುಡ್ಡೆ ಸೊಪ್ಪಿಗೆ ಐದು ರೂಪಾಯಿ ಕೇಳ್ತಾನೆ ಪಾಪಿ.''

ಮಾವಯ್ಯನ ನೆನಪಿನ ಶಕ್ತಿ ವೃದ್ಧಿಸುವುದಾದರೆ ದಿನಕ್ಕೆ ಐದು ರೂಪಾಯಿ ತಿಂಗಳಿಗೆ ನೂರೈವತ್ತು ರೂಪಾಯಿ ಯಾವ ಲೆಕ್ಕ?

''ಪರ್ವಾಗಿಲ್ಲ, ಪ್ರತಿದಿನಾ ಐದು ರೂಪಾಯಿನಷ್ಟು ಸೊಪ್ಪು ತಂದುಕೊಡು'' ಎಂದು ಸೊಪ್ಪು ತರುವ ಕಾಂಟ್ರಾಕ್ಟ್ ರಾಮಕ್ಕನಿಗೆ ಒಪ್ಪಿಸಿಬಿಟ್ಟರು! ಮರು ಮುಂಜಾನೆಯಿಂದ ಮಾವಯ್ಯನಿಗೆ ವನವಾಸಾರಂಭ. ಆ ರುಬ್ಬಿದ ಸೊಪ್ಪಿನ ಚಟ್ನಿ ಅವರು ನುಂಗಲೊಲ್ಲರು ಪಾಪತ್ತೆ ಬಿಡಲೊಲ್ಲರು.

''ಅದು ಕಹಿ ಕಣೇ. ರುಚಿಯಾಗಿ ಹುಳಿನೋ ತಂಬ್ಳಿನೋ ಮಾಡ್ಕೊಡು. ಹಾಗೇ ತಿಂದ್ರೆ ವಾಂತಿ ಬರುವಂತಾಗುತ್ತೆ.''

''ಬಾಯಿ ರುಚೀ ಅಂತ ಕೂತ್ರೆ ಮೈಗೆ ಹತ್ತೋಲ್ಲ. ಕಹಿ ಇದ್ದಷ್ಟೂ ಆರೋಗ್ಯಕ್ಕೆ ಒಳ್ಳೇದು.'' ಪಾಪತ್ತೆ ತಮ್ಮದೇ ಆರೋಗ್ಯ ಸೂತ್ರ ಉದಾಹರಿಸಿ ದಿನಾ ಚಟ್ಣಿಯನ್ನು ತಿನ್ನಿಸಿಯೇ ತಿನ್ನಿಸಿದರು.

ಮಾವಯ್ಯನ ವನವಾಸ ಮುಂದುವರೀತು. ಒಂದು ತಿಂಗಳಾಗಿರಬೇಕು. ಅಂದು ಪಾಪತ್ತೆಯ ನಾದಿನಿಯ ಮನೆಯಲ್ಲಿ ಸತ್ಯನಾರಾಯಣ ವ್ರತ. ಇಬ್ಬರೂ ಪೂಜೆಯಲ್ಲಿ ಪಾಲ್ಗೊಂಡು ಔತಣ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ ಮಾವಯ್ಯ ಎಂದೂ ಇಲ್ಲದ್ದು ಮಾಮೂಲು ರಾಜಮಾರ್ಗ ಬಿಟ್ಟು ಸಮೀಪವೆಂದು ಹೇಳಿ ಕಚ್ಚಾ ರಸ್ತೆಯಲ್ಲಿ ತಿರುಗಿದರು. ಅಲ್ಲಲ್ಲಿ ಹರಡಿದ್ದ ಕಚಡಾ, ಎರಡೂ ಬದಿ ಬೀಳುವಂತಿದ್ದ ಮಣ್ಣಿನ ಮನೆಗಳು. ಮುಂದಿದ್ದ ಚರಂಡಿಯಲ್ಲಿ ಹರಿಯುತ್ತಿದ್ದ ಕಲ್ಮಷದ ಗಬ್ಬು ನೀರು. ವಾಸನೆ ಸಹಿಸದೆ ಪಾಪತ್ತೆ ಸೆರಗಿನಿಂದ ಮೂಗು ಮುಚ್ಚಿಕೊಂಡರು. ನಾಲ್ಕು ಹೆಜ್ಜೆ ಹಾಕಿದರೆ ಅಲ್ಲೊಂದು ಮಾತೇರಮ್ಮನ ಗುಡಿ. ಮುಂದಿನ ಬೇವಿನ ಮರದ ನೆರಳಿನಲ್ಲಿ ವಿಶ್ರಮಿಸಲು ಮಾವಯ್ಯ ಕುಳಿತುಬಿಟ್ಟರು. ಮನಸ್ಸಿಲ್ಲದಿದ್ದರೂ ಪಾಪತ್ತೆಯೂ ಕೂರಲೇಬೇಕಾಯಿತು.

''ನನಗೀ ಜಾಗ ಬಹಳ ಪರಿಚಯ ಅನ್ಸತ್ತೆ. ಚಿಕ್ಕಂದಿನಲ್ಲಿ ನಾನಿಲ್ಲೆಲ್ಲಾ ತುಂಬ ಓಡಾಡಿದೀನಿ ಅನ್ನಸ್ತಾ ಇದೆ.''

''ನಿಮಗೆಲ್ಲೋ ಭ್ರಮೆಯಷ್ಟೇ. ಅದಕ್ಕೇ ಹೋದ ಜಾಗದಲ್ಲಿ ಸಿಕ್ಕಾಪಟ್ಟೆ ತಿನ್ಬೇಡಿ ಅನ್ನೋದು.'' ಪಾಪತ್ತೆ ಹಗುರವಾಗಿ ಬೈದರು.

''ಈ ಮರ ನೆಟ್ಟದ್ದು ನಮ್ಮಪ್ಪ ತಿಮ್ಮೇ ಗೌಡ್ರು.''

''ಯಾವ ತಿಮ್ಮೇ ಗೌಡ್ರು?''

''ಇನ್ಯಾರು? ನಿಮ್ಮಾವ''

''ಅಲ್ಲಾ, ಯಾಕೆ ಹೀಗೆ ಹುಚ್ಚುಚ್ಚಾಗಿ ಮಾತಾಡ್ತೀರ? ತಿಮ್ಮೇ ಗೌಡ್ರು ನನ್ನ ಮಾವನಾದರೆ ಊರಿನಲ್ಲಿರೊ ನಿಮ್ಮ ತಂದೆ ಶಂಕರ ಭಟ್ರು?''

---

**ಎಲೆಕ್ಟ್ರಿಕ್ ಟೆಲಿಗ್ರಾಫ್ ಕಂಪನಿಯನ್ನು ಬ್ರಿಟಿಷ್ ಜನರಲ್ ಪೋಸ್ಟ್ ಆಫೀಸ್ 1868ರಲ್ಲಿ ಕೊಂಡುಕೊಂಡಿತು.**

ಮಾವಯ್ಯ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಮುಖ ಭಾವರಹಿತವಾಗಿತ್ತು. ಮೇಲೆದ್ದು ಕನಸಿನಲ್ಲಿ ನಡೆಯುವಂತೆ ಅಡ್ಡಾದಿಡ್ಡಿಯಾಗಿ ಹೆಜ್ಜೆ ಹಾಕುತ್ತಾ ಗಲ್ಲಿಯೊಂದನ್ನು ಪ್ರವೇಶಿಸಿದರು. ಅಲ್ಲೊಂದು ಹಳೆಯ ಕಾಲದ ಮಂಗಳೂರು ಹೆಂಚಿನ ಮನೆ. ಎರಡೂ ಬದಿ ಎತ್ತರದ ಜಗುಲಿ. ಎಡಜಗುಲಿಯಮೇಲೆ ಮುದುಕಿಯೊಂದು ಕಾಲುನೀಡಿ ಕುಳಿತು ಬಿಸಿಲುಕಾಯಿಸಿಕೊಳ್ಳುತ್ತಾ ಕುಳಿತಿತ್ತು.

''ತಾಯೀ, ಚೆನ್ನಾಗಿದ್ದೀಯಾ?'' ಮಾವಯ್ಯ ಕೈನೀಡಿ ಅವಳತ್ತ ಧಾವಿಸಿದರು.

''ಯಾರಪ್ಪಾ ನೀನು? ಎಲ್ರೂ ನನ್ನನ್ನು ಪುಟ್ತಾಯಿ ಅಂತ ಕರದ್ರೂ ''ತಾಯೀ'' ಅಂತ ಪ್ರೀತಿಯಿಂದ ಕರೀತಿದ್ದೋನು ನಮ್ಮಣ್ಣ ನಂಜುಂಡ ಒಬ್ನೇ. ಅವ್ನು ಒಂಟೋಗಿ ಅರವತ್ತು ವರ್ಷಗ್ಳ ಮೇಲಾಯ್ತು.'' ಮಾವಯ್ಯನ ಕೈ ಹಿಡಿದು ಕಣ್ಣಿಗೊತ್ತಿಕೊಂಡಳು. ವಿಸ್ಮಯದಿಂದ ನೋಡುತ್ತಿದ್ದ ಪಾಪತ್ತೆಯ ಬುದ್ಧಿ ಚುರುಕಾಯಿತು. ಮನಸ್ಸಿನಲ್ಲಿಯೇ ಲೆಕ್ಕ ಹಾಕಿದರು. ಮಾವಯ್ಯವನಿಗೂ ಅದೇ ಅರವತ್ತು ತುಂಬಿತ್ತು! ಹಾಗಾದ್ರೆ....... ಹಾಗಾದ್ರೆ....... ಹೃದಯ ಬಡಿತ ನಗಾರಿಯಂತಾಗಿ ಆ ಶಬ್ದಕ್ಕೆ ಕಿವಿ ಮುಚ್ಚಿಕೊಳ್ಳುವಂತಾಯ್ತು. ಮಾವಯ್ಯ ಆ ಮುದುಕಿಯ ಕೈ ಹಿಡಿದು ಏನೊ ಹೇಳುತ್ತಿದ್ದರು.

''ತಾಯೀ, ಸಂದೇಹ ಬೇಡ. ನಾನು ನಿನ್ನಣ್ಣ ನಂಜುಂಡ ಅಂತಾನೇ ಇಟ್ಕೋ. ನನಗೆ ಈಗ ಎಲ್ಲಾ ನೆನಪಿಗೆ ಬರ್ತಾ ಇದೆ. ನೀನು ಹೇಗಿದ್ದೀ?''

''ಇದ್ದೀನಿ ನೋಡಪ್ಪಾ ಇಂಗೆ. ನಂದೂ ಒಂದು ಜನ್ಮ. ಕಣ್ಣು ಮಂಜಾಗದೆ. ಮೊಣಕಾಲು ಬಾತ್ಕೊಂಡು ನಡೀಕಾಗ್ದು. ಔಸ್ತಿಗೆ ಕಾಸಿಲ್ಲಾ. ಎಲ್ರೂ ಒಂಟೋಗಿ ನಾನು ಒಂಟಿ ಆಗ್ಬುಟ್ಟೆ.''

''ಬಿಡ್ತು ಅನ್ನು ತಾಯೀ. ನಾನು ಇರೋಗಂಟ ನೀ ಎಂಗೆ ಒಂಟಿ ಆಗ್ತೀ? ನಾನು ಒಳ್ಳೇ ಡಾಗಟ್ರತ್ರ ಚಿಕಿತ್ಸೆ ಕೊಡಸ್ತೀನಿ. ಎಷ್ಟು ಕಾಸು ಖರ್ಚಾದ್ರು ಸರಿ.''

ಪಾಪತ್ತೆಗೆ ತನ್ನ ತಲೆಗೆ ಚಪ್ಪಲಿಯಿಂದ ಹೊಡೆದುಕೊಳ್ಳುವಂತಾಯ್ತು. ಬೀದಿಯ ಮಾರಿಯನ್ನು ಮನೆಗೆ ತಂದಾಗಿತ್ತು. ಮಾವಯ್ಯ ಮತ್ತೇನು ವಾಗ್ದಾನ ಮಾಡಿಬಿಡುತ್ತಾರೊ ಎಂದು ಭಯವಾಯಿತು. ''ಬನ್ನಿ ಹೋಗೋಣ. ಹೊತ್ತಾಯ್ತು'' ಪತಿಯ ಕೈಹಿಡಿದು ಮೇಲಕ್ಕೆದ್ದರು. ಆದರೆ ಮುದುಕಿ ಕಿಲಾಡಿ.

''ಅಣ್ಣಾ, ಗೌರತ್ಗೇನ ನೋಡಿ ಬಂದ್ಯಾ?''

''ಏನಂದೆ? ನನ್ ಗೌರೀನಾ? ಎಲ್ಲವ್ಳೆ?''

''ಇಲ್ಲೇ ಉಪ್ಪಾರ ಪೇಟೇಲವ್ಳೆ. ಯಾರೋ ನೆಂಟರ ಮನೇಲವ್ಳೆ. ದಿಕ್ಕಿಲ್ಲದೋಳು. ಶಾನೆ ಕಷ್ಟಪಟ್ಟ ಜೀವ. ಇನ್ಮುಂದಾದ್ರೂ ಜತೇಗಿಟ್ಕೊಂಡು ಚೆನ್ನಾಗಿ ನೋಡ್ಕ.''

ಪಾಪತ್ತೆಗಿನ್ನು ತಡೆಯಲಾಗಲಿಲ್ಲ. ಸುಮ್ಮನಿದ್ದರೆ ಮನೆಯಲ್ಲಿ ಸವತಿಯೊಂದಿಗೆ ಬಾಳುವುದು ಖಚಿತವಾಯ್ತು. ಮಾವಯ್ಯನ ಕೈಹಿಡಿದು ಎಳೆಯುತ್ತಾ ರಸ್ತೆಗಿಳಿದರು.

ಮರು ಮುಂಜಾನೆ ವಂದೆಲಗ ಚಟ್ಣಿಯ ಸುಳಿವಿರಲಿಲ್ಲ. ''ಎಲ್ಲಿ ಆ ಚಟ್ಣಿ? ತಂಡ್ಕೊಡು. ದಿನಾ ಬೆಳಿಗ್ಗೆ ತಿಂದೂ ತಿಂದೂ ಅಭ್ಯಾಸವಾಗಿಬಿಟ್ಟಿದೆ. ಅದಿಲ್ದೆ ಏನೋ ಮರೆತು ಬಿಟ್ಟಂತೆ ಮುಜುಗರ.''

''ಇವತ್ತು ರಾಮಕ್ಕ ಸೊಪ್ಪು ತರೋದು ಮರ್ತುಬಿಟ್ಳು.''

ರಾಮಕ್ಕ ಮರುದಿನವೂ ಮರೆತಳಂತೆ! ಮೂರನೆಯ ದಿನ ಅವ್ವು ಹೋಗಿ ನೋಡಿದ್ರೆ ಸೊಪ್ಪನ್ನೆಲ್ಲಾಕಿತ್ತು ಬೆಂಡೆ ಬೀಜ ಹಾಕ್ತಾ ಇದ್ನಂತೆ. ಅದ್ರಲ್ಲಿ ಇರೋಷ್ಟು ಲಾಭ ಸೊಪ್ಪಿನಲ್ಲಿ ಇಲ್ವಂತೆ. ಇನ್ನುಮೇಲೆ ವಂದೆಲಗ ಸಿಗೋದಿಲ್ಲ ಅಂತ ಗುರುವ ಹೇಳಿದನಂತೆ. ಇದರಿಂದ ಕ್ರಮೇಣ ಮಾವಯ್ಯನಿಗೂ ನೆನಪಿನ ಶಕ್ತಿ ಕಮ್ಮಿಯಾಗತೊಡಗಿ ಪುಟ್ತಾಯಿಯ ಹೆಸ್ರು ಮನೆಯಲ್ಲಿ ಎತ್ತಲಿಲ್ಲ!

ಈಚೆಗೆ ಮಾವಯ್ಯನೇನಾದರು ಮರೆತರೆ ಪಾಪತ್ತೆ ಮೂದಲಿಸುವುದಿಲ್ಲ. ಬದಲಿಗೆ ಸಾಂತ್ವನ ಹೇಳುತ್ತಾರೆ. ''ಪರ್‍ವಾಗಿಲ್ಲ ಬಿಡಿ. ವಯಸ್ಸಾಗ್ತಾ ಮರೆವು ಸಹಜ. ಹಾಗೆ ನೋಡಿದ್ರೆ ಮರೆಯೋದೂ ಆರೋಗ್ಯಕರವೇ. ಇಲ್ದಿದ್ರೆ ಬೇಡದ್ದೆಲ್ಲಾ ನೆನಸ್ಕೊಂಡು ಕೊರಗ್ತೀವಿ.''


ನಿವೃತ್ತ ರಂಗನಟಿ ಪುಟ್ಟತಾಯಮ್ಮನಿಗೆ ಮಾವಯ್ಯನ ಕಡೆಯಿಂದ ಚೆಕ್ ರವಾನೆಯಾದದ್ದು ಪಾಪ ಪಾಪತ್ತೆಗೆ ತಿಳೀದು. ಮಾವಯ್ಯನಿಗೆ ಪುಟ್ಟತಾಯಮ್ಮನ ಪರಿಚಯ ಹೇಗಾಯ್ತು ಅಂತ ಕೇಳ್ತೀರಾ? ಬಹಳ ಹಿಂದೆ ಪುಟ್ಟತಾಯಮ್ಮನ ತಂದೆ ನಟಭಯಂಕರ ವೆಂಕಟಪ್ಪನವರು ಚಿತ್ರದುರ್ಗದಲ್ಲಿ ಮಾವಯ್ಯನ ಮನೆ ಪಕ್ಕ ಬಾಡಿಗೆಗೆ ಇದ್ದರಂತೆ. ಮಾವಯ್ಯ ಹಾಗೂ ಪುಟ್ಟತಾಯಮ್ಮ ಒಟ್ಟಿಗೆ ಕುಂಟೆಬಿಲ್ಲೆ ಆಡುತ್ತಿದ್ದರಂತೆ!

☆

---

ಒಬ್ಬ ಚಾಣಾಕ್ಷನಿಗೆ ಊರಿನಿಂದ ಒಂದು ಟೆಲಿಗ್ರಾಂ ಬಂತು. ಅವನಿಗೆ ರಜ ಬೇಕಿತ್ತು. ಅದಕ್ಕೆ ಏನೂ ಮಾತಾಡದೇ ಟೆಲಿಗ್ರಾಂ ತೆಗೆದುಕೊಂಡು ಹೋಗಿ ಬಾಸ್‌ಗೆ ತೋರಿಸಿ ನನಗೆ ಒಂದೆರಡು ದಿನ ರಜ ಬೇಕು, ಊರಿಗೆ ಹೋಗಿ ಬರಬೇಕಿತ್ತು ಅಂದ. ಟೆಲಿಗ್ರಾಂ ಹೀಗಿತ್ತು. CONGRATULATIONS. GOWRI DELIVERED MALE ಅದನ್ನು ನೋಡಿದ ಬಾಸ್ ಸ್ವಲ್ಪ ಅನುಮಾನದಿಂದ ಅಲ್ರೀ, ನಿಮ್ಮ ಹೆಂಡ್ತಿ ಹೆಸರು ಜಲಜಾಕ್ಷಿ ಅಂತ ಆಫೀಸಿನ ಯಾವುದೋ ರೆಕಾರ್ಡ್‌ನಲ್ಲಿ ನೋಡಿದ ಹಾಗಿತ್ತು ಈ ಟೆಲಿಗ್ರಾಂನಲ್ಲಿ ಗೌರಿ ಅಂತ ಇದೆಯಲ್ಲ ಅಂತ ಕೇಳಿದ್ರೆ ಇವನು ನೀವು ಹೇಳೋದು ನಿಜ ಸರ್, ನನ್ನ ಹೆಂಡ್ತಿ ಹೆಸರು ಜಲಜಾಕ್ಷಿನೇ ಆದರೆ ಗೌರಿ ನಮ್ಮ ಮನೆ ಹಸುವಿನ ಹೆಸರು. ಅದು ಗಂಡು ಕರು ಹಾಕಿದೆ ಅಂದು ಕಣ್ಣು ಮಿಟುಕಿಸಿದ.

# ಟೆಲಿಗ್ರಾಂ ತಂದ ನೆನಪುಗಳು



**- ಬೇಲೂರು ರಾಮಮೂರ್ತಿ**

**ನ**ನಗಾಗ ಹದಿನಾಲ್ಕೋ ಹದಿನೈದೋ ವರ್ಷ ಇರಬಹುದು. ಆಗಾಗ ನಮ್ಮೂರಿನ ಪೋಸ್ಟಾಫೀಸಿಗೆ ಹೋಗುವಾಗ ಅಲ್ಲಿ ಟೆಲಿಗ್ರಾಂ ಕೌಂಟರನ್ನು ನೋಡೋದು ನನಗೆ ಇಷ್ಟವಾದ ಕೆಲಸ. ಅಲ್ಲಿ ಕೂತವರು ಅದ್ಯಾವುದೋ ಯಂತ್ರದ ಮುಂದೆ ಕೂತು ಕೈಯಲ್ಲಿ ಗೂಟದಂತಹ ಒಂದು ವಸ್ತುವನ್ನು ಹಿಡಿದುಕೊಂಡು ಹೀಗೀಗೆ ಅಲ್ಲಾಡಿಸುತ್ತಿದ್ದರೆ ಅದು ಕಟ್ಟ, ಕರಗಟ್ಟ, ಕಟ್ಟಕಟ್ಟ, ಕಟ್ಟಕರಗಟ್ಟ ಕರಗಟ್ಟಕಟ್ಟ ಅಂತೆಲ್ಲ ಸದ್ದು ಮಾಡೋದು. ಆ ಯಂತ್ರ ಹಾಗೆ ಮಾಡೋ ಒಂದೊಂದು ಸದ್ದಿಗೂ ಒಂದೊಂದು ಇಂಗ್ಲಿಷಿನ ಅಕ್ಷರದ ಗುರುತು ಇದೆ ಅಂತ ನನಗೆ ಆಮೇಲೆ ಗೊತ್ತಾಗಿದ್ದು. ಒಂದೊಂದು ಸಾರಿ ಯಂತ್ರ ತಾನೇ ಸದ್ದು ಮಾಡೋದು. ಆಗ ಕೌಂಟರಿನಲ್ಲಿರೋರು ಮಾಡ್ತಾ ಇದ್ದ ಕೆಲಸ ಬಿಟ್ಟು ಆ ಸದ್ದನ್ನೇ ಆಲಿಸಿ ಅಕ್ಷರಗಳನ್ನು ಬರೆದುಕೊಳ್ಳುತ್ತಿದ್ದರು. ಇದು ಒಂದೂರಿನಿಂದ ಇನ್ನೊಂದೂರಿಗೆ ಟೆಲಿಗ್ರಾಂ ಕಳಿಸೋ ರೀತಿ.

**ಕಣ್ಮರೆಯಾದ ಟೆಲಿಗ್ರಾಂ ಸೇವೆಗೆ ಅಪರಂಜಿಯ ವಿದಾಯ**

1967ರಲ್ಲಿ ನಮ್ಮ ತಂದೆ ನಿಧನರಾದಾಗ ಬೆಳಗಿನ ಝಾವ 2 ಗಂಟೆ. ಮಲಗಿದ್ದ ನನ್ನನ್ನೂ ನನ್ನ ತಮ್ಮನನ್ನೂ ನಮ್ಮ ತಾಯಿ ಎಬ್ಬಿಸಿದರು. ನಮ್ಮ ತಂದೆ ಅಲುಗಾಡದೇ ಮಲಗಿದ್ದರು. ನಮ್ಮ ಅಣ್ಣ ಹೋಗಿ ನಮ್ಮೂರಿನಲ್ಲಿದ್ದ ಒಬ್ಬೊಬ್ಬರು ನೆಂಟರನ್ನೂ ಕರೆತಂದ. ಎಲ್ಲರೂ ಇನ್ನೇನು ಎಲ್ಲ ಮುಗಿಯಿತು ಅಂದರು. ದಾವಣಗೆರೆಯಲ್ಲಿದ್ದ ನಮ್ಮ ಇನ್ನಿಬ್ಬರು ಅಣ್ಣಂದಿರಿಗೆ ವಿಚಾರ ತಿಳಿಸಬೇಕು ಅಂದರೆ ಟೆಲಿಗ್ರಾಂ ಕೊಡಬೇಕು. ಅಷ್ಹೊತ್ತಿನಲ್ಲಿ ಏನು ಮಾಡೋದು. ಪೋಸ್ಟಾಫೀಸು ತೆಗೆಯೋದು ಏನಿದ್ದರೂ ಬೆಳಗ್ಗೆ ಒಂಭತ್ತು ಗಂಟೆಗೆ. ಆದರೆ ನಾನೂ ನಮ್ಮಣ್ಣ ಟೆಲಿಗ್ರಾಂ ಕಳಿಸೋರ ಮನೆಗೆ ಆಗಲೇ ಹೋದೆವು. ಅವರನ್ನು ಎಬ್ಬಿಸಿ ಹೀಗೀಗಾಗಿದೆ. ಸಹಾಯ ಮಾಡಿ ಅಂದೆವು. ಪಾಪ ಅವರು ಆಗಲೇ ಬಟ್ಟೆ ಬದಲಾಯಿಸಿ ನಮ್ಮ ಜೊತೆ ಬಂದರು. ಪೋಸ್ಟಾಫೀಸಿನ ಹಿಂಬದಿಯಲ್ಲೇ ಇದ್ದ ಪೋಸ್ಟ್ ಮಾಸ್ಟರ್ ಅವರ ಅನುಮತಿ ಪಡೆದು ಪೋಸ್ಟಾಫೀಸು ಬಾಗಿಲು ತೆಗೆದು ಅವರ ಕೌಂಟರಿಗೆ ಬಂದು ಮಿಷಿನ್ ಆನ್ ಮಾಡಿ ನಮ್ಮಣ್ಣ ಬರೆದುಕೊಟ್ಟಿದ್ದ ಫಾದರ್ ಎಕ್ಸ್‌ಪೈರ್ಡ್ ಸ್ಟಾರ್ಟ್ ಇಮ್ಮಿಡಿಯಟ್ಲೀ ಎನ್ನುವ ವಾಕ್ಯವನ್ನು ಶೀಘ್ರವಾಗಿ ಕಳಿಸಿದರು. ನನಗೆ ಆ ದುಃಖದ ಕ್ಷಣದಲ್ಲೂ ಕುತೂಹಲ ಏನೆಂದರೆ ಫಾ ಅನ್ನೋ ಅಕ್ಷರಕ್ಕೆ ಏನಂತ ಶಬ್ದ ಮಾಡುತ್ತಾರೆ, ದ ಅನ್ನೋ ಅಕ್ಷರಕ್ಕೆ ಏನಂತ ಶಬ್ದ ಮಾಡುತ್ತಾರೆ ಅಂತ ಗಮನಿಸೋದೇ ಆಯ್ತು. ಆದರೆ ಕ್ಷಣಾರ್ಧದಲ್ಲಿ ಅವರು ಟೆಲಿಗ್ರಾಂ ಕಳಿಸಿ ಆಗಿತ್ತು. ಇಲ್ಲಿಂದ ಏನೋ ಟೆಲಿಗ್ರಾಂ ಕಳಿಸಿ ಆಯ್ತು. ಆದರೆ ಅದು ನಮ್ಮ ಅಣ್ಣಂದಿರಿಗೆ ಸೇರಬೇಕಾದರೆ ಬೆಳಗ್ಗೆ 10 ಗಂಟೆಯಾಗಿತ್ತು. ಏಕೆಂದರೆ ದಾವಣಗೆರೆಯ ಪೋಸ್ಟಾಫೀಸು ತೆಗೆಯಬೇಕಲ್ಲ, ಇನ್ನೊಂದು ವಿಶೇಷ ಎಂದರೆ ನೋಡಿ, ನಾವು ನಮ್ಮೂರಿಂದ ಟೆಲಿಗ್ರಾಂ

ಕಳಿಸಿದಾಗ ಬೆಳಗಿನ ಝಾವ. ಆಮೇಲೆ ಅಲ್ಲಿ ಪೋಸ್ಟಾಫೀಸ್ ತೆಗೆದು ಮಿಷಿನ್ ಆನ್ ಮಾಡಿದರೆ ಸಾಕು ಟೆಲಿಗ್ರಾಂ ಯಂತ್ರ ಶಬ್ಧ ಮಾಡೋಕೆ ಷುರು ಮಾಡೋದು. ತಕ್ಷಣ ಅವರು ಅದನ್ನು ಬರೆದುಕೊಳ್ಳೋರು.

ಇದು ನನ್ನ ಮೊದಲ ಹಾಗೂ ನಿಜವಾಗಿಯೂ ಕಟ್ಟಕಡೆಯ ಟೆಲಿಗ್ರಾಂ ಕಳಿಸಿದ ಅನುಭವ.

ಸಾಮಾನ್ಯವಾಗಿ ಟೆಲಿಗ್ರಾಂ ಅಂದರೆ ನಮ್ಮೂರಲ್ಲಿ ಎಲ್ಲಾರೂ ಹೆದರಿಕೊಳ್ಳೋರು. ಟೆಲಿಗ್ರಾಂ ಹಿಡಿದುಕೊಂಡು ಪೋಸ್ಟ್ ಮ್ಯಾನ್ ಬೇಗ ಬೇಗ ಬರುತ್ತಿದ್ದಾರೆ ಎಂದರೆ ಜನರಿಗೆ ನಡುಕ. ಟೆಲಿಗ್ರಾಂ ಕಳಿಸೋ ಉದ್ದೇಶವೇ ಅದು ಶೀಘ್ರವಾಗಿ ಜನರಿಗೆ ತಲುಪಲಿ ಅಂತ. ಟೆಲಿಗ್ರಾಂ ಮುಖಾಂತರ ಒಳ್ಳೆಯ ಸುದ್ದಿಯೂ ಬರುತ್ತದೆ, ಹಾಗೂ ಬರಬಹುದು ಅನ್ನೋ ಸಾಮಾನ್ಯ ತಿಳುವಳಿಕೆಯೂ ಇರದ ಕಾಲ ಅದು. ನಮ್ಮೂರಲ್ಲಿ ಸೀತಾಬಾಯಿ ಅನ್ನೋ ಹೆಂಗಸು ಇದ್ದರು. ಅವರ ಮಗಳನ್ನು ಅರಸೀಕೆರೆ ಹತ್ತಿರದ ಯಾವುದೋ ಊರಿಗೆ ಕೊಟ್ಟಿದ್ದರು. ಆಗೆಲ್ಲ ಹೀಗೇ ಮಾತಾಡುತ್ತಿದ್ದುದು. ನಿಮ್ಮ ಮಗಳನ್ನು ಯಾವ ಊರಿಗೆ ಕೊಟ್ಟಿದ್ದೀರಿ ಅಂತ. ಅಂದರೆ ಮಗಳನ್ನು ಇಡೀ ಊರಿಗೇ ಕೊಟ್ಟುಬಿಡುತ್ತಾರಾ. ಯಾವ ಊರಿನ ಯಾವ ಮನೆಯ ಯಾವ ವರನಿಗೆ ಕೊಟ್ಟಿದ್ದೀರಿ ಅನ್ನೋ ಅರ್ಥ ಬರೋ ಹಾಗೇ ಯಾವ ಊರಿಗೆ ಕೊಟ್ಟಿದ್ದೀರಿ ಅಂತ ಕೇಳೋರು. ಆ ಸೀತಾಬಾಯಿಗೆ ಒಂದು ದಿನ ಟೆಲಿಗ್ರಾಂ ಬಂತು. ಟೆಲಿಗ್ರಾಂ ಅಂತ ಪೋಸ್ಟ್‌ಮ್ಯಾನ್ ಎಸೆದು ಹೋದರು. ಹಾಗೆ ನೋಡಿದರೆ ಟೆಲಿಗ್ರಾಂ ಕೊಟ್ಟು ಸಹಿ ಮಾಡಿಸಿಕೊಂಡು ಹೋಗಬೇಕಿತ್ತು. ಸೀತಾಬಾಯಿ ಗಾಬರಿಯಿಂದ ಏನಪ್ಪಾ ಟೆಲಿಗ್ರಾಂ ಬಂದಿದೆಯಾ ನನಗಾ ಅಂತ ಗಾಬರಿಯಿಂದ ಅಳೋಕೇ ಷುರು ಮಾಡ್ತು. ಸೀತಾಬಾಯಿಗೆ ಇಂಗ್ಲಿಷು ಬರಲ್ಲ, ಯಾರತ್ರನಾದರೂ ಓದಿಸಬೇಕು. ಆಗ ಸಂಜೆ ನಾಲ್ಕು ಗಂಟೆಯಾಗಿತ್ತು. ಟೆಲಿಗ್ರಾಂ ಎಲ್ಲಿಂದ ಬಂದಿರಬಹುದು ಅಂತ ಸೀತಾಬಾಯಿ ಯೋಚಿಸಿದಾಗ ಅವಳಿಗೆ ನೆನಪಾಯಿತು. ಮಗಳಿಗೆ ಹೆರಿಗೆಯ ಸಮಯ. ಈ ಸಾರಿ ಹೆರಿಗೆ ಸ್ವಲ್ಪ ಕಷ್ಟ ಆಗೋದ್ರಿಂದ ಅವಳನ್ನು ಇಲ್ಲೇ ಇಟ್ಕೊಂಡು ಡಾಕ್ಟರಿಗೆ ತೋರಿಸುತ್ತೀವಿ ಅಂತ ಬೀಗರು ಹೇಳಿದ್ದರಿಂದ ಸೀತಾಬಾಯಿ ಮಗಳು ಗಂಡನ ಮನೆಯಲ್ಲೇ ಇದ್ದಳು. ಒಂದು ವಾರದ ಹಿಂದೆ ಬರೆದ ಕಾಗದದಲ್ಲಿ ನನಗೆ ವಿಪರೀತ ಭಯವಾಗುತ್ತಿದೆ. ನಾನು ಉಳಿಯೋದೇ ಅನುಮಾನ. ಅಷ್ಟು ಆಯಾಸ, ನಿಶ್ಶಕ್ತಿ ಇದೆ. ಮೊದಲ ಹೆರಿಗೆ ಸಲೀಸಾಗಿ ಆದ ಹಾಗೆ ಇದು ಆಗೋಲ್ಲ ಅಂತೆಲ್ಲಾ ಬರೆದಿದ್ದರಿಂದ ಸೀತಾಬಾಯಿ ಮಗಳ ವಿಚಾರವಾಗಿ ತುಸು ಗಾಬರಿಯಾಗಿದ್ದಳು. ಈಗ ಟೆಲಿಗ್ರಾಂ ಬಂದ ತಕ್ಷಣ ಮಗಳು ಹೋಗೇ ಬಿಟ್ಟಳು ಅಂತ ತೀರ್ಮಾನಿಸಿ ಅಳೋಕೆ ಷುರು ಮಾಡಿ ಕಂಡ ಕಂಡವರಿಗೆಲ್ಲ ನನ್ನ ಮಗಳು ಹೆರಿಗೆಯಲ್ಲಿ ಹೋಗಿಬಿಟ್ಟಳು. ಈಗ ಸ್ನಾನ ಮಾಡಿಕೊಂಡು ನಾಳೆ ಬೆಳಗಿನ ಬಸ್ಸಿಗೇ ಹೋಗುತ್ತೀನಿ. ಅಲ್ಲೀತನಕ ಇಟ್ಟಿರ್ತಾರೋ ಇಲ್ಲಾ ಸುಟ್ಟೇಬಿಟ್ಟಿರ್ತಾರೋ ಗೊತ್ತಿಲ್ಲ ಅಂತ ಗೋಳಾಡೋಕೆ ಷುರು ಮಾಡಿದರು. ಊರಿನ ಅನೇಕರು ಸೀತಾಬಾಯಿಯನ್ನು ಸಮಾಧಾನ ಮಾಡುತ್ತಿದ್ದರು. ಅಲ್ಲಿ ಜನರ ಗುಂಪೇ ಸೇರಿಬಿಟ್ಟಿತು. ಅಯ್ಯೋ ಪಾಪ ಅಂತ ಎಲ್ಲಾರೂ ಕನಿಕರ ತೋರೋರೇ. ಆಗ ಅಲ್ಲಿಗೆ ಬಂದ ಯಜಮಾನರೊಬ್ಬರು ಏನಾಯ್ತು ಅಂತ ಕೇಳಿದರು. ನಂತರ ಯಾರು ಹೇಳಿದ್ದು ಅಂತ ಕೇಳಿದರು. ಆಗ ಸೀತಾಬಾಯಿ ಅಯ್ಯೋ ಯಾರು ಹೇಳೊದೇನಪ್ಪ, ಅಲ್ಲಿ ಟೆಲಿಗ್ರಾಂ ಬಂದು

ಕುಕ್ಕರಿಸಿಕೊಂಡಿದೆ ಅಂದರು. ಆಗ ಅವರು ಟೆಲಿಗ್ರಾಂ ತೆಗೆದು ನೋಡಿದರು. ನಂತರ ಸೀತಾಬಾಯಿಯ ಹತ್ತಿರ ಬಂದು ನೀವು ಅಂದುಕೊಂಡದ್ದು ಏನೂ ಆಗಿಲ್ಲ, ನಿಮ್ಮ ಮಗಳಿಗೆ ಸುಖವಾಗಿ ಪ್ರಸವ ಆಗಿದೆಯಂತೆ. ಅವಳಿ ಜವಳಿ ಗಂಡುಮಕ್ಕಳಂತೆ ಹಾಗಂತ ಟೆಲಿಗ್ರಾಂನಲ್ಲಿ ಬರೆದಿದೆ. ಅಂದಾಗ ಅಲ್ಲಿನ ವಾತಾವರಣವೇ ಬದಲಾಯಿತು. ಅಯ್ಯೋ ವಿಚಾರ ತಿಳ್ಕೊಳ್ದೆ ನಾನೇ ಗಾಬರಿಮಾಡ್ಕೊಂಡ್ನಲ್ಲ ಅಂತ ಸೀತಾಬಾಯಿ ನಾಚಿಕೊಂಡು ಮರುದಿನ ಮಗಳನ್ನೂ ಮೊಮ್ಮಕ್ಕಳನ್ನೂ ನೋಡಲು ಹೊರಟಳು.

ತುರ್ತಿನ ವಿಚಾರಗಳನ್ನು ಹೀಗೆ ಟೆಲಿಗ್ರಾಂ ಮುಖಾಂತರ ಕಳಿಸೋ ವಾಡಿಕೆಯಿತ್ತು. ಇನ್ನೊಂದು ಸಾಧನ ಎಂದರೆ ಎಕ್ಸ್‌ಪ್ರೆಸ್ ಡೆಲಿವರಿ ಅಂತ. ಮಾಮೂಲಿ ಕಾಗದವನ್ನೇ ಬರೆದು ಅದಕ್ಕೆ ಹೆಚ್ಚಿನ ಅವಶ್ಯಕತೆ ಇರುವಷ್ಟು ಸ್ಟಾಂಪ್ ಹಚ್ಚಿ ಕಳಿಸಿದರೆ, ಮಾಮೂಲೀ ಅಂಚೆಯ ವೇಳೆಗಿಂತ ಒಂದು ಗಂಟೆ ಮುಂಚಿತವಾಗಿ ತಲುಪುತ್ತಿತ್ತು. ಈಗ ಸ್ಪೀಡ್ ಪೋಸ್ಟ್ ಅಂತಾರಲ್ಲ ಹಾಗೆ. ಅದರಲ್ಲಿ ಏನು ವಿಶೇಷಾಪ್ಪ ಅಂದರೆ ಯಾರಾದರೂ ಸತ್ತಿದ್ದರೆ ಸಮಾಚಾರ ಸ್ನಾನಕ್ಕೆ ಮುಂಚೆ, ಅಥವಾ ಊಟಕ್ಕೆ ಮುಂಚೆ ಸಿಗಲಿ ಅಂತ ಎಕ್ಸ್ ಪ್ರೆಸ್ ಡೆಲಿವರಿ ಮುಖಾಂತರ ಕಳಿಸೋರು. ಇದು ಒಂಭತ್ತು ಗಂಟೆಗೆಲ್ಲ ತಲುಪುತ್ತಿತ್ತು. ಅಂಥಾ ಕಾಗದಗಳನ್ನು ನೋಡಿಯೇ ಜನ ಇದು ಶುಭವೋ ಅಶುಭವೋ ಅಂತ ತೀರ್ಮಾನ ಮಾಡಿಬಿಡೋರು. ಶುಭವಾದರೆ ಕಾಗದದ ನಾಲ್ಕೂ ಮೂಲೆಗೆ ಅರಶಿನ ಹಚ್ಚಿರೋರು. ಅಶುಭವಾದರೆ ನಾಲ್ಕೂ ಮೂಲೆಗೆ ಕುಂಕುಮ ಸವರಿರೋರು. ಆದರೆ ಟೆಲಿಗ್ರಾಂ ಹಾಗಲ್ಲ. ಅದಕ್ಕೆ ಅರಶಿನ ಕುಂಕುಮ ಏನೂ ಸವರದಿದ್ದರೂ ಟೆಲಿಗ್ರಾಂ ಬಂದರೆ ಗಾಬರಿಮಾಡಿಕೊಳ್ಳೋದು ಮಾತ್ರ ತಪ್ಪಿರಲಿಲ್ಲ.

ಇನ್ನು ಟೆಲಿಗ್ರಾಂ ತಗೊಂಡು ಹೊರಟ ಪೋಸ್ಟ್ ಮ್ಯಾನನ್ನು ಏನಪ್ಪಾ ಯಾರ ಮನೆಗೆ ಟೆಲಿಗ್ರಾಂ ಅಂತ ಕೇಳೋರು. ಅವನು ನರಸಯ್ಯನವರ ಮನೆಗೆ, ವೆಂಕಟರಾಮಯ್ಯನವರ ಮನೆಗೆ ಅಂತ ಹೇಳೋನು. ಹೀಗೆ ದಾರೀಲಿ ಅನೇಕರು ವಿಚಾರಿಸೋರು. ಅವರೆಲ್ಲರ್ಗಿಗೂ ಹೇಳಿಯೇ ಹೊರಟಿರೋನು. ಟೆಲಿಗ್ರಾಂ ತಲುಪೋ ಹೊತ್ತಿಗೆ ಅನೇಕರು ಅವರ ಮನೆ ಮುಂದೆ ಜಮಾಯಿಸಿಬಿಡೋರು. ನಿಮ್ಮನೆಗೆ ಟೆಲಿಗ್ರಾಂ ಬಂತಂತಲ್ಲ ಏನು ವಿಷಯ ಎಲ್ಲ ಆರೋಗ್ಯ ತಾನೆ ಅಂತ ವಿಚಾರಿಸೋರು. ಹೀಗೆ ಸಣ್ಣ ಸಣ್ಣ ಊರುಗಳಲ್ಲಿ ಟೆಲಿಗ್ರಾಂ ಒಂದು ರೀತಿ ಸಂಚಲವನ್ನು ಉಂಟುಮಾಡುತ್ತಿತ್ತು.

ಶತಶತಮಾನಗಳಿಂದ ಅಂಚೆ ಒಂದು ರೀತಿ ನಮ್ಮ ಹುಟ್ಟಿನಲ್ಲಿ ಬೆಸೆದುಕೊಂಡು ಬಂದಿದೆ. ಅಂಚೆಯ ಮೂಲಕ ಬರುವ ಕಾಗದ ಪತ್ರಗಳನ್ನು ಸ್ವೀಕರಿಸುವಾಗ ಇರುವ ಒಂದು ರೀತಿಯ ಅಕ್ಕರೆ, ವ್ಯಾಮೋಹ, ಮಮಕಾರ, ಕೊರಿಯರ್ ಸ್ವೀಕರಿಸುವಾಗ ಆಗೋದಿಲ್ಲ. ಎಲ್ಲರೊಳಗೊಂದಾಗಿ ಅಂಚೆ ಬೆಸೆದುಕೊಂಡು ಬಂದಿದೆ.

ಅಂಥಾ ಬೆಸುಗೆಯ ಕೊಂಡಿಯೊಂದು ಕಳಚಿದೆ. ಇನ್ನು ಮುಂದೆ ಟೆಲಿಗ್ರಾಂ ಅನ್ನೋ ಶಬ್ದವೇ ಕೇಳೋದಿಲ್ಲ. ಮುಂದಿನ ಪೀಳಿಗೆಗೆ ಇಂಥಾದ್ದೊಂದು ಸಂಪರ್ಕ ಸಾಧನ ಇತ್ತು ಅಂತ ವಿವರಿಸಿ ಹೇಳಬೇಕಷ್ಟೆ. ಹೊಸದು ಬರಬೇಕೆಂದರೆ ಹಳೇದು ಹೋಗಲೇಬೇಕಷ್ಟೆ. ಹೊಸ ನೀರು ಬಂದು ಹಳೆನೀರನ್ನು ಕೊಚ್ಚಿಕೊಂಡು ಹೋಯಿತು ಅನ್ನೋ ಹಾಗೆ ಟೆಲಿಗ್ರಾಂ ಅನ್ನು ಮೂಲೆಗೆ ತಳ್ಳಿ ಎಸ್.ಎಂ.ಎಸ್., ಈ–ಮೈಲ್ ಮುಂತಾದುವು ಬಂದಿವೆ. ಅವುಗಳನ್ನು ತಳ್ಳಿ ಇನ್ನೇನು ಬರುತ್ತೋ ನೋಡಬೇಕು. ★

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ಹಣ ಕೊಟ್ಟು ಕೊಳ್ಳಬಹುದಾದ ಒಳ್ಳೆಯ ಶಾಸಕರು ನಮ್ಮಲ್ಲಿದ್ದಾರೆ.
- ಭಾಷಣಕಾರನ ಅತಿ ಸಂತಸ ತರುವ ಮಾತುಗಳು: ನಾನು ಕೊನೆಯಲ್ಲಿ ಹೇಳುವುದೇನೆಂದರೆ....
- ಕೋಪ ಮಾಡಿಕೊಳ್ಳಲು ಅದೆಷ್ಟು ವಿಷಯಗಳಿವೆ. ಆದರೆ ಪುರುಸೊತ್ತು ಕಡಿಮೆ.
- *Reading a good book is like having a conversation with a learned man.*
- ಗೆಟ್ ಔಟ್ ಎಂದು ಹೇಳಿ ನಿಮ್ಮನ್ನು ತರಗತಿಯಿಂದ ಟೀಚರ್ ಹೊರಗಟ್ಟಿದರೆ ನೀವು ವಾದದಲ್ಲಿ ಗೆದ್ದಿದ್ದೀರಿ ಎಂದರ್ಥ.
- ರೂಪಾಯಿ ಬೆಲ ಎಷ್ಟು ಕೆಳಗಿಳಿದರೂ ತೊಂದರೆ ಇಲ್ಲ. ಅದನ್ನು ಎತ್ತಿಕೊಳ್ಳಲು ಜನ ಎಷ್ಟು ಬೇಕಾದರೂ ಬಗ್ಗುತ್ತಾರೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ದೇವರು ಬಹು ದೂರದಲ್ಲಿದ್ದಾನೆ. ಆದರೆ ಅವನನ್ನು ದೂರವಾಗಿಸಿದವರು ಯಾರು?
- *I was trying to explain the concept of Twitter to my friend. He finally said: I don't follow you.*
- ಹಾಕಬೇಕಾದ ಪದಾರ್ಥಗಳನ್ನು ಜಾಸ್ತಿ ಹಾಕಿದರೆ ಅಡಿಗೆಯ ರುಚಿ ಹೆಚ್ಚಾಗುವುದಿಲ್ಲ.
- ಹಣದ ವಿಷಯದಲ್ಲಿ ಕೆಲವು ಮೂಲಭೂತ ನಿಯಮಗಳಿವೆ.
  ನಿಯಮ 1: ಹಣ ಕಳೆದುಕೊಳ್ಳಬಾರದು.
  ನಿಯಮ 2: ನಿಯಮ 1ನ್ನು ಮರೆಯಬಾರದು.
- ನಮಗೆ ಅನೇಕ ವಿಷಯಗಳು ತಿಳಿದಿವೆ. ಆದರೆ ನಮ್ಮ ಬಗ್ಗೆ ನಮಗೇ ತಿಳಿದಿಲ್ಲ.
- *They think you must be intelligent because they think you understand what you are saying.*
- ವಯಸ್ಸಾಗಿದೆ ಎಂದ ಮಾತ್ರಕ್ಕೆ ನೀವು ದೊಡ್ಡವರಾದಿರಿ ಎಂದರ್ಥವಲ್ಲ.
- ಎಲ್ಲರನ್ನೂ ಒಂದೇ ಹಿಟ್ಟಿನಿಂದ ಲಟ್ಟಿಸಲಾಗಿದೆ ನಿಜ. ಆದರೆ ಸುಟ್ಟಿರುವುದು ಬೇರೆ ಬೇರೆ ಒಲೆಗಳಲ್ಲಿ.
- ಮನುಷ್ಯರು ಬದಲಾಗುತ್ತಿರಬಹುದು. ಆದರೆ ನೆನಪುಗಳು ಮಾತ್ರ ಬದಲಾಗುವುದಿಲ್ಲ.

☆

# ಹತ್ತಿರದಲ್ಲಿ ತಂದೆತಾಯಿ...

**- ಎಚ್. ಗೋಪಾಲಕೃಷ್ಣ**

**ಹೊ**ರ ಊರುಗಳಿಂದ ವ್ಯಾಸಂಗಕ್ಕಾಗಿ ಮತ್ತು ಉದ್ಯೋಗ ಅರಸಿ ಬರುವ ಸುಮಾರು ಜನ ಅವಲಂಬಿತರಾಗುವುದು ಹಾಸ್ಟಲ್ಲುಗಳ ಮೇಲೆ. ವ್ಯಾಸಂಗಕ್ಕಾಗಿ ಶಿಕ್ಷಣ ಸಂಸ್ಥೆಗಳಿಗೆ ಸೇರಿದವರಿಗೆ ಸಂಸ್ಥೆಯ ಹಾಸ್ಟಲ್ಲುಗಳೇ ಇದ್ದು ಅವುಗಳು ಇವರ ಅಗತ್ಯಗಳನ್ನು ನೋಡಿಕೊಳ್ಳುತ್ತವೆ. ಉದ್ಯೋಗ ಅರಸಿ ಬರುವವರು ಸ್ವಂತಕ್ಕೆ ಉಳಿದುಕೊಳ್ಳಲು ಬಾಡಿಗೆ ಮನೆಗಳು ಸಿಗುವವರೆಗೂ ಪೇಯಿಂಗ್ ಗೆಸ್ಟ್ (ಇದಕ್ಕೆ ಪೀಜಿಗಳು ಅನ್ನುತ್ತಾರೆ) ಅನ್ನುವ ಹಾಸ್ಟಲ್ಲುಗಳಲ್ಲಿ ತಮ್ಮ ನೆಲೆ ಕಂಡುಕೊಳ್ಳುತ್ತಾರೆ. ಕೆಲವು ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಸೇರುವವರಿಗೆ ಎಂದೇ ಕೆಲವು ರೀತಿಯ ಹಾಸ್ಟಲ್ಲುಗಳನ್ನು ಕಟ್ಟಿಸಿರುತ್ತಾರೆ. ಇಂತಹ ಹಾಸ್ಟಲ್ಲಿನಲ್ಲಿ ನನಗೆ ತಿಳಿದವರೊಬ್ಬರು ಕಾರ್ಯ ನಿರ್ವಹಿಸುತ್ತಾರೆ.

ಅವರ ಹಾಸ್ಟಲ್ಲುಗಳಿನ ಅನುಭವಗಳು ಅಪಾರ. ಕೆಲವೊಮ್ಮೆ ಆ ಕ್ಷಣದಲ್ಲಿ ಅವರಿಗೆ ಇರಿಸು ಮುರುಸಾದರೂ ನಂತರದ ಕೆಲವು ದಿವಸಗಳ ನಂತರ ಅವರು ಅನುಭವ ಹಂಚಿಕೊಂಡಾಗ ಅವರ ಮುಖದಲ್ಲಿ ನಗು ತಾಂಡವವಾಡುತ್ತಿರುತ್ತದೆ. ಇದು ಅವರ ಅನುಭವದ ಒಂದು ಪೀಸು...

ಹಾಸ್ಟಲ್ಲಿನಲ್ಲಿ ಊಟ ತಿಂಡಿ ವ್ಯವಸ್ಥೆಯ ಜತೆಗೆ ರೀಡಿಂಗ್ ರೂಮು, ಜಿಮ್ಮು, ಹಲವು ಇನ್ ಡೋರ್ ಆಟಗಳ ಸೌಲಭ್ಯವೂ ಉಂಟು. ಟೇಬಲ್ ಟೆನ್ನಿಸ್ ಆಟವೂ ಇದೆಯಂತೆ. ನನ್ನ ಗೆಳೆಯರು ಒಂದು ದಿವಸ ಬೆಳಿಗ್ಗೆ ಆಫೀಸಿಗೆ ಹೋಗಿದ್ದಾರೆ. ಇವರನ್ನೇ ಕಾಯುತ್ತಾ ಒಂದು ಹುಡುಗಿ ಕೂತಿದೆ - ಸುಮಾರು ಇಪ್ಪತ್ತೈದು ವಯಸ್ಸು, ರಾತ್ರಿ ಎಲ್ಲಾ ನಿದ್ದೆಗೆಟ್ಟಿರುವ ಮುಖ ಮತ್ತು ಮುಖದಲ್ಲಿ ಒಂದು ರೀತಿಯ ಧಾವಂತ ಹಾಗೂ ದುಗುಡ. ಯಾರೋ ಹೊಸಾ ಹುಡುಗಿ ಬಂದಿದ್ದಾಳೆ, ಹೊಸದಾಗಿ ಕೆಲಸಕ್ಕೆ ಸೇರಿರಬೇಕು.. ಅಂತ ಇವರಿಗೆ ಅನಿಸಿತು. ತಮ್ಮ ಛೇಂಬರಿಗೆ ಕರೆದರು. ಏನು ಸಮಾಚಾರ? ಅಂತ ಕುರ್ಚಿ ತೋರಿಸಿದರು.

ಹುಡುಗಿ ಕೂತಳು ಗೊಳೋ ಅಂತ ಅಳುವುದಕ್ಕೆ ಶುರು ಹಚ್ಚಿದಳು. ನೋಡಿದರೆ ಹೊರನಾಡಿನಿಂದ ಬಂದಿರುವವಳು, ಕನ್ನಡ ಬರದು ಅಂತ ಗೊತ್ತಾಯಿತು.

ಸಮಾಧಾನ ಮಾಡ್ಕೊಳ್ಳಿ, ಏನು ಸಮಾಚಾರ ಹೇಳಿ, ಸಾಧ್ಯವಾದರೆ ನಿಮ್ಮ ನೆರವಿಗೆ ನಾನಿದ್ದೀನಿ ಅಂತ ಆಶ್ವಾಸನೆ ನೀಡಿದರು.

ಹುಡುಗಿ ಅದರ ಕಥೆ ಹೇಳಿತು - ಕಳೆದ ವಾರ ತಾನೇ ಇಲ್ಲಿನ ಸಂಸ್ಥೆಗೆ ಸೇರಿದ ಇಂಥಹ ಹುಡುಗನ ಹೆಂಡತಿ ತಾನು. ಇಬ್ಬರದ್ದೂ ಲೌವ್ ಮ್ಯಾರೇಜು. ಮದುವೆ ಆಗಿದೆ ಅಂತ ಹೊಸಾ ಕೆಲಸಕ್ಕೆ ಸೇರಬೇಕಾದರೆ ಹುಡುಗ ತಿಳಿಸಿಲ್ಲ (ಮದುವೆಯಾಗಿದೆ ಅಂದರೆ ಕೆಲಸ ಸಿಗುತ್ತೋ

ಇಲ್ಲವೋ ಅಂತ) ಕೆಲಸಕ್ಕೆ ರಿಪೋರ್ಟ್ ಮಾಡಿಕೊಂಡು ಮೂರುವಾರದ ತರಬೇತಿ ಮುಗಿಸಿಕೊಂಡು ಕರೆದುಕೊಂಡು ಹೋಗ್ತೀನಿ ಅಂತ ಹೇಳಿ ಇಲ್ಲಿಗೆ ಬಂದಿದ್ದಾನೆ...

ಸರಿ ಈಗೇನು ನಿಮ್ಮ ಪ್ರಾಬ್ಲಮ್ಮು?

ಸುಮಾರಾಗಿ ರಾತ್ರಿ ಹನ್ನೊಂದಕ್ಕೆ ಅವನು ಫೋನಾಯಿಸ್ತಾನೆ, ಇಲ್ಲ ಅಂದರೆ ಇವಳು ಅವನಿಗೆ ಫೋನಾಯಿಸ್ತಾಳೆ. ಮೊನ್ನೆ ಸಹ ಹೀಗೆ ಫೋನಾಯಿಸಿದಳು. ಅವನು ಮಾತು ಆಡಿ ನಿದ್ದೆ ಬರ್ತಿದೆ ಮಲಗ್ತೀನಿ ಅಂದ. ಇವಳೂ ಸರಿ ಅಂದಳು. ಇವಳು ಫೋನಿನ ಸ್ವಿಚ್ಚು ಆರಿಸದೇ ಕೈಲೇ ಹಿಡಿದಿದ್ದಳು. ಇವಳ ಹುಡುಗ ಫೋನು ಡಿಸ್ ಕನೆಕ್ಟ್ ಮಾಡುವುದು ಮರೆತ, ರಾತ್ರಿ ಒಂದರವರೆಗೆ ಅದೇನೋ ಟಫ ಟಫ ಅನ್ನುವ ಶಬ್ಧ ಅವನ ಫೋನಿನ ಮೂಲಕ ಇವಳು ಕೇಳಿಸಿಕೊಂಡಳು – ಹಾಗೇ ಮತ್ತೊಂದು ಹುಡುಗಿಯ ನಗು ಸಹ ಇವಳಿಗೆ ಕೇಳಿಸಿದೆ. ಹೊಸಾ ಜಾಗಕ್ಕೆ ಬಂದೆ ಅಂತ ತನ್ನನ್ನು ಮರೆತುಬಿಟ್ಟ ಅಂತ ಇವಳಿಗೆ ಅನ್ನಿಸಿತು. ಇನ್ನೊಂದು ಹುಡುಗಿ ಜತೆ ಇವನು ಸಂಸಾರ ಶುರು ಮಾಡಿಬಿಡ್ತಾನೆ ಅಂತ ಅನಿಸಿತಂತೆ. ಅದರಿಂದ ಇಡೀ ದಿನ ರೈಲಿನಲ್ಲಿ ನಿಂತು ಇಲ್ಲಿಗೆ ಬಂದಿದ್ದಾಳೆ. ಹುಡುಗ ಹುಡುಗೀರು ಇಬ್ಬರಿಗೂ ಇದೇ ಕಾಮನ್ ಹಾಸ್ಟಲಾ? ಅಂತ ಕೇಳಿದಳು.

ಇವರು ಹೌದು ಅಂದರು.

ಅಂದರೆ ಒಂದೇ ರೂಮಿನಲ್ಲಿ ಮಲಗ್ತಾರಾ?

ಛೇ ಹಾಗಲ್ಲ.. ಲೇಡೀಸ್ ವಿಂಗು ಬೇರೆ ಗಂಡಸರ ವಿಂಗು ಬೇರೆ... ಒಬ್ಬರಿಗೊಬ್ಬರಿಗೆ ಸಂಪರ್ಕ ಇರಲ್ಲ..

ಹಾಗಿದ್ದರೆ ರಾತ್ರಿ ಅಷ್ಟು ಹೊತ್ತಿನವರೆಗೆ ಇವನು ಯಾರ ಜತೆಗಿದ್ದ? ಹಾಸ್ಟಲ್ಲಿನಿಂದ ಆಚೆ ಹೋಗಿದ್ದನಾ? ಅದೇನು ಶಬ್ಧ ಇವನು ಮಾಡ್ತಾ ಇದ್ದದ್ದು.

ಗೆಳೆಯರು ಒಂದು ನಿಮಿಷ ತಲೆ ಕೆಡಿಸಿಕೊಂಡರು.

ನಂತರ ಅವರಿಗೆ ಜ್ಞಾನೋದಯವಾಯಿತು.

ಅಯ್ಯೋ ಹುಡುಗೀ ಅವರೆಲ್ಲೋ ಟೇಬಲ್ ಟೆನ್ನಿಸ್ ಆಡ್ತಾ ಇದ್ದರು ಅಂತ ಕಾಣುತ್ತೆ – ಬ್ಯಾಟಿನಲ್ಲಿ ಬಾಲು ಬಾರಿಸೋಲ್ವಾ? ಅದೇ ಶಬ್ಧ ನೀನು ಕೇಳಿರೋದು. ಆಟ ಆಡಬೇಕಾದರೆ ನಗೋದು ಕೇಕೆ ಹಾಕೋದೂ ಇರಲ್ವೇ?

ಹುಡುಗಿ ಅವಳ ಗೆಳೆಯ ಬರುವವರೆಗೆ ಕಾದು ಹಾಸ್ಟಲ್ಲಿನಿಂದ ಅವನನ್ನು ಬಿಡಿಸಿ ಕರೆದುಕೊಂಡು ಹೋದಳಂತೆ...

ಕಳೆದ ತಿಂಗಳು ಇವರ ಹಾಸ್ಟಲ್ಲಿನ ಇನ್ ಮೇಟ್ ಒಬ್ಬ ಇವರ ಹತ್ತಿರ ಬಂದ. ಎಷ್ಟು ಜನ ಸ್ಟಾಫ್ ಇದ್ದಾರೆ ನಿಮ್ಮಲ್ಲಿ ಅಂತ ಕೇಳಿದ. ಇವರು ಯಾಕೆ ಅಂದರು. ಅದೇನು ದೂರು ಇದೆಯೋ ಇವನದ್ದು ಅಂದುಕೊಂಡ.

ನಾಳೆ ನನ್ನ ಹುಟ್ಟಿದ ಹಬ್ಬ, ಪ್ರತಿದಿವಸ ಇವರು ಅದೆಷ್ಟೋ ಸಾವಿರ ಮೈಲಿ ದೂರದಿಂದ

ಬಂದಿರುವ ನನ್ನನ್ನ ನಮ್ಮ ತಾಯಿತಂದೆ ನೋಡಿಕೊಳ್ಳುವ ಹಾಗೆ ನೋಡಿಕೊಳ್ತಾ ಇದ್ದಾರೆ. ಅವರಿಗೆ ನನ್ನ ಹುಟ್ಟುಹಬ್ಬದ ಸ್ವೀಟ್ಸ್ ಕೊಡಬೇಕು... ಅಂದ.


ಮೊಟ್ಟಮೊದಲಬಾರಿಗೆ ನನ್ನ ಗೆಳೆಯರ ಕಣ್ಣಿನಲ್ಲಿ ಒಂದು ತೊಟ್ಟು ನೀರು ಒಸರಿಬಿಟ್ಟಂತೆ! ಹುಡುಗ ಸ್ವೀಟ್ಸ್ ಹಂಚಿದ.


ಈಗ ಒಂದು ಹಳೇ ನೆನಪು – ಇದು ರಾಶಿಯವರ ಅನುಭವದ್ದು – ರಾಶಿಯವರೂ ಹಾಸ್ಟಲ್ಲಿನ ವಾರ್ಡನ್ ಆಗಿದ್ದವರು. ಹಾಸ್ಟಲ್ಲಿನ ಕೊನೇವರ್ಷದ ಹುಡುಗರು ಹೊರಹೋಗುವ ತಿಂಗಳ ಮೊದಲು ಅಲ್ಲಿನ ಅಡಿಗೆಯವನನ್ನು ಕೂಗಿದರಂತೆ. ಇಷ್ಟು ದಿವಸ ನಿನಗೆ ಹಿಂಸೆ ಕೊಟ್ಟೆವು, ನಿನ್ನ ಅಡಿಗೆ ಚೆನ್ನಾಗಿಲ್ಲ ಅಂದೆವು, ನಿನಗೆ ಗೊತ್ತಿಲ್ಲದ ಹಾಗೆ ತಿಂಡಿ ತಿಂದುಬಿಟ್ಟೆವು ಸಾರಿ ಕಣಪ್ಪಾ... ಅಂದರಂತೆ.

ನಿಮಗೆ ನಾನೂ ಕಾಲುಚೀಲದಲ್ಲಿ ಕಾಫಿ ಶೋಧಿಸಿ ಕೊಡ್ತಾ ಇದ್ದೆ – ಇನ್ಮೇಲೆ ಹಾಗೆ ಮಾಡೋದಿಲ್ಲ ಅಂತ ಅವನು ಹೇಳಿದನಂತೆ!

☆

---






## ಆಲ್ ವೆಲ್

ಸುದ್ದಿ ಮುಟ್ಟಿಸಲು ಟೆಲಿಗ್ರಾಂ ಮಾತ್ರ ಇದ್ದ ದಿನಗಳು. ಟೆಲಿಗ್ರಾಂ ಎಂದರೆ ಎಲ್ಲರಿಗೂ ಗಾಬರಿ. ಏನೋ ಕೆಟ್ಟ ಸಮಾಚಾರ ಇರಲೇ ಬೇಕು ಎಂಬ ಅನುಮಾನ. ಆದುದರಿಂದ ಗಾಬರಿ ಆಗದಿರಲಿ ಎಂದು "ಆಲ್ ವೆಲ್ ಸ್ಟಾರ್ಟ್ ಇಮ್ಮಿಡಿಯೆಟ್ಲಿ" ಎಂದು ಒಬ್ಬರು ತಾರು ಕಳಿಸಿದರಂತೆ. ಆದರೆ ವಿಳಾಸದಾರರಿಗೆ ಅದು ಅರ್ಥವಾಗಲಿಲ್ಲ. ಹಳ್ಳಿಯ ಭೂಪನೊಬ್ಬನನ್ನು ಹಿಡಿದು ಅದರ ಅರ್ಥ ತಿಳಿಸಲು ಕೋರಿದರಂತೆ. ಆ ಭೂಪ ಅದನ್ನು ಓದಿ ಎಲ್ಲರೂ ಭಾವಿಯಲ್ಲಿದ್ದಾರೆ. ನಿಮ್ಮನ್ನು ತಕ್ಷಣ ಬರಹೇಳಿದ್ದಾರೆ ಎಂದು ವ್ಯಾಖ್ಯಾನಿಸಿದ. ಇವರು ಗಾಬರಿ ಪಟ್ಟುಕೊಂಡು ಕಾರು ಮಾಡಿಕೊಂಡು ಊರಿಗೆ ಧಾವಿಸಿದರಂತೆ.

*– 'ಕೋಟ್ಯಾಧಿಪತಿ'ಯಲ್ಲಿ ಕೇಳಿ ಬಂದಿದ್ದು*




ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**